ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮಾರ್ಚ್ 2020, ಬೆಲೆ ರೂ. 5/-

2020 ಮಾರ್ಚ್
05 ರಿಂದ 09 ರ ವರೆಗೆ
ತಿರುಮಲೆ
ಶ್ರೀ ವೆಂಕಟೇಶ್ವರ ಸ್ವಾಮಿಯವರ
ತೆಪ್ಪೋತ್ಸವ



## ತಿರುಮಲೆ ತಿರುಪತಿ ದೇವಸ್ಥಾನಗಳು

## ತಿರುಪತಿ

## ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 23-03-2020 ರಿಂದ 31-03-2020 ರ ವರೆಗೆ





**23-03-2020 ಸೋಮವಾರ**
ಹಗಲು : ಧ್ವಜಾರೋಹಣ
ರಾತ್ರಿ : ದೊಡ್ಡಶೇಷವಾಹನ

**24-03-2020 ಮಂಗಳವಾರ**
ಹಗಲು : ಚಿಕ್ಕಶೇಷವಾಹನ
ರಾತ್ರಿ : ಹಂಸವಾಹನ

**25-03-2020 ಬುಧವಾರ**
ಹಗಲು : ಸಿಂಹವಾಹನ
ರಾತ್ರಿ : ಮುತ್ತಿನಚಪ್ಪರವಾಹನ

**26-03-2020 ಗುರುವಾರ**
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಸರ್ವಭೂಪಾಲವಾಹನ

**27-03-2020 ಶುಕ್ರವಾರ**
ಹಗಲು :
ಪಲ್ಲಕ್ಕಿಯಲ್ಲಿ ಮೋಹಿನಿ ಅವತಾರೋತ್ಸವ
ರಾತ್ರಿ : ಗರುಡವಾಹನ

**28-03-2020 ಶನಿವಾರ**
ಹಗಲು : ಹನುಮದ್ವಾಹನ
ಸಾಯಂಕಾಲ : ವಸಂತೋತ್ಸವ
ರಾತ್ರಿ : ಗಜವಾಹನ

**29-03-2020 ಭಾನುವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

**30-03-2020 ಸೋಮವಾರ**
ಹಗಲು : ರಥೋತ್ಸವ
ರಾತ್ರಿ :ಅಶ್ವವಾಹನ

**31-03-2020 ಮಂಗಳವಾರ**
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ

ಭವಾನ್ ಭೀಷ್ಮಶ್ಚ ಕರ್ಣಶ್ಚ
ಕೃಪಶ್ಚ ಸಮಿತಿಂಜಯಃ
ಅಶ್ವತ್ಥಾಮಾ ವಿಕರ್ಣಶ್ಚ
ಸೌಮದತ್ತಿ ರ್ಜಯದ್ರಥಃ

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ - 8)




ತಾವು ಭೀಷ್ಮ, ಕರ್ಣ ಜಯಶೀಲನಾದ
ಕೃಪ, ಅಶ್ವತ್ಥಾಮ, ವಿಕರ್ಣ, ಸೋಮ,
ದತ್ತನು ಮಗನಾದ ಭೂರಿಶ್ರವ
ಮತ್ತು ಜಯದ್ರಥ.

ಮಹಾಲಕ್ಷ್ಮೀ ನಮಸ್ತುಭ್ಯಂ ನಮಸ್ತುಭ್ಯಂ ಸುರೇಶ್ವರಿ।
ಹರಿ ಪ್ರಿಯೇ ನಮಸ್ತುಭ್ಯಂ ನಮಸ್ತುಭ್ಯಂ ದಯಾನಿಧೇ॥
ಲಕ್ಷ್ಮೀ ೦ ಕ್ಷೀರ ಸಮುದ್ರ ರಾಜ ತನಯಾಂ ಶ್ರೀ ರಂಗಧಾಮೇಶ್ವರೀಂ
ದಾಸೀ ಭೂತ ಸಮಸ್ತ ದೇವವನಿತಾಂ ಲೋಕೈಕದೀಪಾಂಕುರಾಂ॥
ಶ್ರೀಮನ್ಮಂದಕಟಾಕ್ಷ ಲಬ್ಧ ವಿಭವಾಂ ಬ್ರಹ್ಮೇಂದ್ರಗಂಗಾಧರಾಂ;
ತ್ವಾಂತ್ರೈಲೋಕ್ಯಕುಟುಂಬಿನೀಂ ಸರಸಿಜಾಂ ವಂದೇ ಮುಕುಂದ ಪ್ರಿಯಾಂ

- ಶ್ರೀ ತ್ಯಾಗರಾಜರು



# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಪ್ರಾಜಾಪತ್ಯಪ್ರಭೃತಿವಿಭವಂ ಪ್ರೇಕ್ಷ್ಯ ಪರ್ಯಾಯದುಃಖಂ ಜನ್ಮಾಕಾಂಕ್ಷನ್ ವೃಷಗಿರಿವನೇ ಜಗ್ಮುಷಾಂ ತಸ್ಥುಷಾಂವಾ।**
**ಆಶಾಸಾನಾಃ ಕತಿಚನ ವಿಭೋಃ ತ್ವತ್ಪರಿಷ್ವಂಗಧನ್ಯೈಃ ಅಂಗೀಕಾರಂ ಕ್ಷಣಮಪಿ ದಯೇ ಹಾರ್ದತುಂಗೈಪಾಂಗೈಃ ॥ ೪೨ ॥**

ಹಿಂದಿನ ಪದ್ಯದಲ್ಲಿ ಚತುರ್ಮುಖೈಶ್ವರ್ಯವೇ ಮೊದಲಾದ ಸಕಲವಿಧವಾದ ಐಶ್ವರ್ಯಗಳೂ ನಶ್ವರವಾದುದರಿಂದ ಅವುಗಳನ್ನು ಉಪೇಕ್ಷಿಸಿ ಶ್ರೀನಿವಾಸನ ದಯೆಯನ್ನೇ ಆಶ್ರಯಿಸುವ ಮೋಕ್ಷಾಪೇಕ್ಷಿಗಳ ಪ್ರಭಾವವು ವರ್ಣಿಸಲ್ಪಟ್ಟಿತು. ಈ ಪದ್ಯದಲ್ಲಿ ಅಂತಹ ಮೋಕ್ಷವನ್ನೂ ಬಯಸದೆ, ತಿರುಮಲೆಯ ಮೇಲೆ ಶ್ರೀನಿವಾಸನ ಕಟಾಕ್ಷವನ್ನು ಒಂದು ಕ್ಷಣಕಾಲವಾದರೂ ಅನುಭವಿಸಬೇಕೆಂದು ಅಪೇಕ್ಷಿಸಿ, ಜಂಗಮವಾಗಿಯಾಗಲಿ, ಸ್ಥಾವರವಾಗಿಯಾಗಲಿ ಜನ್ಮವನ್ನು ಬೇಡಿದ ಪರಮ ಮಹನೀಯರಾದ ಕುಲಶೇಖರಾಳ್ವಾರಂಥವರ ವೈಭವವು ವರ್ಣಿಸಲ್ಪಡುವುದು.

ಕುಲಶೇಖರಾಳ್ವಾರವರು ತಿರುವಾಯ್ಮೊಳಿಯ 'ಊನೇರ ಶೆಲ್ವಂ' ಎಂಬ ದಶಕದಲ್ಲಿ ತಿರುವೇಂಗಡಮಲೆಯಲ್ಲಿ ಜಂಗಮವಾದ ಜನ್ಮವನ್ನು ಮೊದಲು ಪ್ರಾರ್ಥಿಸಿ, ಮತ್ತೆ ಆ ಜನ್ಮದಲ್ಲಿ ಭಗವಂತನನ್ನು ಬಿಟ್ಟಿರಬೇಕಾದ ಪ್ರಸಂಗವು ಬಂದರೂ ಬರಬಹುದೆಂಬ ಶಂಕೆಯಿಂದ ಚಲಿಸಲಾರದ ಸ್ಥಾವರಜನ್ಮವನ್ನು ಪ್ರಾರ್ಥಿಸಿಕೊಂಡರು ಈ ರೀತಿಯಾಗಿ ಪ್ರಾರ್ಥಿಸಿಕೊಳ್ಳಲು ಕಾರಣ ಆ ಪರಮಪುರುಷನ ಪರಿಪೂರ್ಣವಾದ ಕೃಪೆಯಿಂದ ಕೂಡಿದ ಕಟಾಕ್ಷವು ತನ್ನ ಮೇಲೆ ಬೀಳಲೆಂಬ ಆಶೆಯೇ. ಅಂತಹ ಪರಮ ಪುರುಷನ ಕಟಾಕ್ಷಕ್ಕೆ ವಿಷಯವಾಗುವುದು ಹೊರತಾಗಿ ಮತ್ತೊಂದು ಶ್ರೇಷ್ಠವಾದ ಪುರುಷಾರ್ಥವಿಲ್ಲವೆಂಬುದು ಅವರ ಅಭಿಪ್ರಾಯ. ಅಂತಹ ಕುಲಶೇಖರಾಳ್ವಾರವರ ಅಭಿಪ್ರಾಯವನ್ನು ಹಾಗೆಯೇ ವರ್ಣಿಸಿ, ತನ್ಮೂಲಕ ಆಚಾರ್ಯರು ದಯೆಯನ್ನು ಹೊಗಳುವರು. ಹಿಂದಿನ ಪದ್ಯದಲ್ಲಿ ಹೇಳದಂತೆ ಚತುರ್ಮುಖೈಶ್ವರ್ಯದವರೆಗಿರುವ ಸಮಸ್ತ ಐಶ್ವರ್ಯಗಳೂ ನೋಡಲು ಸುಖಕರವಾಗಿ ಕಂಡು ಬಂದರು ದುಃಖಗಳೇ ಎಂಬುದರಲ್ಲಿ ಸಂದೇಹವಿಲ್ಲ. ಈ ವಿಷಯವು ಶಾಸ್ತ್ರವನ್ನು ಬಲ್ಲವರಿಗೆ ಚೆನ್ನಾಗಿ ಸ್ಪಷ್ಟವಾಗುವುದು. ಆದ್ದರಿಂದ ಅವುಗಳನ್ನು ಉಪೇಕ್ಷಿಸಿ, ಅರ್ಚಾವತಾರದಲ್ಲಿರುವ ಅಭಿರೂಪ್ಯಾನುಭವದಲ್ಲಿನ ಆಶೆಯಿಂದ ಮೋಕ್ಷವನ್ನೂ ಬಯಸದೆ ತಿರುಮಲೆಯಲ್ಲಿ " ಎಂಬೆರುಮಾನ್ ಪೊನ್ ಮಲೆಮೇಲೆ ಏದೇನು ಮಾವೇನೇ" ಎಂದೂ "ಪಡಿಯಾಯ್ ಕಿಡಂದು ಉನ್ ಪವಳವಾಯ್ ಕಾಣ್ಬೇನೇ" ಎಂದೂ ಯಾವುದಾದರೊಂದು ಜನ್ಮವನ್ನು ಬೇಡಿದರು ಇಂತಹ ಜನ್ಮದಲ್ಲಿ ಪ್ರಯೋಜನವೇನೆಂದರೆ ಆ ಮಲೆಯಲ್ಲಿ ಎಲ್ಲ ಜಾಗಗಳಲ್ಲಿಯೂ ಸಂಚರಿಸುವ ಪ್ರಭುವಾದ ಶ್ರೀನಿವಾಸನ ಕಟಾಕ್ಷವು ಒಂದು ಕ್ಷಣಕಾಲವಾದರೂ ತನ್ನ ಮೇಲೂ ಬೀಳಬಹುದೆಂಬುದೇ ಆ ಕಟಾಕ್ಷವಾದರೋ ಒಂದೊಂದು ಪರಮಾಣುವಿನಲ್ಲಿಯೂ ದಯಾಸಂಪರ್ಕವುಳ್ಳದ್ದು; ದಯೆಯ ಗಾಢಾ ಲಿಂಗನವುಳ್ಳದ್ದು ಮನಸ್ಸಿನಲ್ಲಿರುವ ಪರಮ ಪ್ರೀತಿಯಿಂದ ಮಿಶ್ರಿತವಾದುದು. ಈ ಲೋಕದಲ್ಲಿಯೂ ಒಬ್ಬನ ಮನಸ್ಸಿನಲ್ಲಿರುವ ದಯೆ, ಪ್ರೀತಿ ಮೊದಲಾದ ಉತ್ತಮ ಗುಣಗಳನ್ನು ಅವನ ಕಣ್ಣಿನ ನೋಟದಿಂದಲೇ ತಿಳಿಯಬಹುದಲ್ಲವೇ! ಇಂತಹ ಸರ್ವೇಶ್ವರನ ಕಟಾಕ್ಷವು ಒಂದು ಕ್ಷಣಕಾಲವಾದರೂ ತನ್ನ ಮೇಲೆ ಬಿದ್ದರೂ ಸಾಕು, ಅದಕ್ಕಾಗಿ ಎಷ್ಟು ಸಾವಿರವರ್ಷಗಳಾದರೂ, ಸ್ಥಾವರವಾಗಿಯೋ, ಜಂಗಮವಾಗಿಯೋ ಜನ್ಮವನ್ನೆತ್ತಿ ಅಲ್ಲಿಯೇ ಇರಬಹುದೆಂಬುದು ಆಳ್ವಾರವರ ಅಭಿಪ್ರಾಯ. ಅಂತಹ ಭಕ್ತರಿಗೆ ಮಾತ್ರವೇ ಆ ಕಟಾಕ್ಷದ ಮಹಿಮೆಯು ತಿಳಿಯುವುದು. ಉಳಿದವರಿಗೆ "ಲವಣವಣಿಜಃ ಕರ್ಪೂರಾರ್ಘಂ" (ಉಪ್ಪಿನ ವ್ಯಾಪಾರಿಗೆ ಪಚ್ಚಕರ್ಪೂರದ ಬೆಲೆ ಏನು ಗೊತ್ತು?) ಎಂಬಂತೆ. ಅದರ ಮಹಿಮೆಯು ತಿಳಿಯಲಾರದೆಂಬ ಅಭಿಪ್ರಾಯದಿಂದ ಆಳ್ವಾರವರನ್ನು "ಕತಿಚನ" (ಮನಸ್ಸು ವಾಕ್ಕುಗಳಿಗೆ ಅಗೋಚರವಾದವರು.) ಎಂಬ ಪದದಿಂದ ದೇಶಿಕರು ಗುರುತಿಸಿರುತ್ತಾರೆ. ಈ ರೀತಿಯಾದ ಜನ್ಮವನ್ನೇ ಋಷಿಗಳೂ ಕೂಡ -

**" ಪತ್ಯುಃ ಪ್ರಜಾನಾಮೈಶ್ವರ್ಯಂ ಪಶೂನಾಂ ವಾ ನ ಕಾಮಯೇ।**
**ಅಹಂ ಕದಂಬೋ ಭೂಯಾಸಂ ಕುಂದೋ ವಾ ಯಮುನಾತಟೇ ॥"**

ಅಂದರೆ, ಪ್ರಜಾಪತಿ ಎಂಬ ಚತುರ್ಮುಖಪದವಿಯನ್ನಾಗಲಿ ಪಶುಪತಿ ಎಂಬ ರುದ್ರ ಪದವಿಯನ್ನಾಗಲಿ ನಾನು ಬಯಸುವುದಿಲ್ಲ. ಸಾಕ್ಷಾತ ವಿಶ್ವ ಪತಿಯಾದ ಶ್ರೀ ಕೃಷ್ಣನು ಆಟವಾಡುವ ಯಮುನಾತೀರದಲ್ಲಿ ಕದಂಬತರುವಾಗಿಯೋ ಕುಂದವಾಗಿಯೋ ಜನ್ಮವು ಲಭಿಸಿದರೆ ಸಾರ್ಥಕವೆಂದು ಪ್ರಾರ್ಥಿಸಿ ಕೊಂಡರು ಅಂತಹ ಪ್ರಾರ್ಥನೆಯಲ್ಲಿ ಶ್ರೀ ಕೃಷ್ಣನ ಕಟಾಕ್ಷವೂ ಆತನ ದಿವ್ಯವಾದ ಪಾದಸ್ಪರ್ಶವೂ ತಮಗೆ ಉಂಟಾಗುವುದೆಂಬುದೇ ಅವರ ಅಭಿಪ್ರಾಯ.

ಕುಲಶೇಖರಾಳ್ವಾರವರು ನೀರಿನಲ್ಲಿಯೇ ವಾಸಿಸುವ ಮೀನು ಮೊದಲಾದವುಗಳ ಜನ್ಮವಾದರೂ ಬರಲೆಂದು ಪ್ರಾರ್ಥಿಸಿರುವುದನ್ನು ಗಮನಿಸಿದರೆ "ವೃಷಗಿರಿವನೇ" ಎಂಬಲ್ಲಿ "ವನ" ಪದಕ್ಕೆ ಜಲವೆಂಬ ಅರ್ಥವನ್ನೂ ಹೇಳಬಹುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ




ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ವಿಕಾರಿ - ಶಾರ್ವರಿ ನಾಮ ಸಂವತ್ಸರ ಫಾಲ್ಗುಣ - ಚೈತ್ರ ಮಾಸ ಸಂಚಿಕೆ

ಸಂಪುಟ - 50 ಮಾರ್ಚ್ 2020 ಸಂಚಿಕೆ - 10


## ವಿಷಯಸೂಚಿಕೆ


| | |
|---|---|
| ಸಂಪಾದಕೀಯ | 6 |
| ಹಸಿರುತೋರಣ | |
| ಕಾಲವೇ ದೈವವಾದ ಉಗಾದಿ<br>- ಶ್ರೀಮತಿ. ಪಾರ್ವತಿ | 7 |
| ವೃತಾಸುರನ ವೃತ್ತಾಂತ<br>- ಡಿ.ಎಸ್. ಬದ್ರಿನಾಥ್ | 12 |
| ದಾನದ ಗರಿಮೆ<br>- ಬಿ.ಆರ್. ಶ್ರೀಕಂಠಯ್ಯ | 13 |
| ಶ್ರೀ ಮಹಾಲಕ್ಷ್ಮೀ ! ಕೊಲ್ಹಾಪುರ ನಾಯಕಿ !<br>- ಶ್ರೀಮತಿ. ಭಾರತಿ ರಘುನಾಥ್ | 17 |
| ಶ್ರೀ ವ್ಯಾಸರಾಜರು ಮತ್ತು ತಿರುಪತಿ<br>- ಡಾ|| ರಾಮಚಂದ್ರದಾಸ್ ಸಿ.ಜೆ. | 21 |
| ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಆಲಯ, ತರಿಗೊಂಡ<br>- ಸೂರ್ಯವಂಶಿ | 24 |
| ಮಾಸ ಮಹಿಮೆ<br>- ಶ್ರೀಮತಿ. ಕೆ.ವಿ. ಪದ್ಮಾವತಿ | 31 |
| ಸಪ್ತ ಋಷಿಗಳು ಸಪ್ತರ್ಷಿಮಂಡಲ<br>- ಡಾ|| ಸಿ.ಎಸ್. ಊರ್ಮಿಳಾ | 34 |
| ಪಂಚಾಂಗದ ಪೂರ್ವಾಪರ<br>-ಡಾ|| ಗುರುರಾಜ ಪೋಶೆಟ್ಟಿ ಹಳ್ಳಿ | 38 |
| ದೇವತಾ ವೃಕ್ಷ ಮಾವು - ಔಷಧ ಪ್ರಾಶಸ್ತ್ಯ<br>- ಶ್ರೀಮತಿ | 44 |
| ಸಂಸ್ಕೃತ ಕಲಿಯೋಣ!<br>- ಡಾ|| ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್ | 46 |
| ದಿವ್ಯಕ್ಷೇತ್ರ ತಿರುಮಲೆ<br>- ಶ್ರೀಮತಿ. ಬಿ. ಪದ್ಮಜ | 47 |
| ಅಸೂರಿ ಗುಣಗಳಿಂದ ವಿನಾಶ ತಪ್ಪದು<br>- ಡಿ.ಎಸ್. ಭೂಮಿಕ | 50 |
| ಭಕ್ತಜನ ಭದ್ರಾರಾಮ - ಶ್ರೀ ರಾಮಭದ್ರ<br>- ಎ. ಗೀತಾವೀರರಾಘವನ್ | 51 |
| ಕುಲಶೇಖರಾಳ್ವಾರ್<br>- ಚೆಲುಪತಿ ಸಂಪತ್‌ಕುಮಾರಾಮಾನುಜಂ | 54 |


ಮುಖಚಿತ್ರ - ಸ್ವಾಮಿಯವರ ತೆಪ್ಪೋತ್ಸವ, ತಿರುಮಲೆ

ಹಿಂಬದಿಚಿತ್ರ - ಶ್ರೀ ಸೀತಾಲಕ್ಷ್ಮಣ ಸಮೇತ ಶ್ರೀಕೋದಂಡರಾಮಸ್ವಾಮಿಯವರು, ತಿರುಪತಿ


**ಗೌರವ ಸಂಪಾದಕರು**

ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**

ಡಾ||ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**

ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**

ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**

ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**

ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**

ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org


ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು **www.tirumala.org** ಮೂಲಕ ವೀಕ್ಷಿಸಬಹುದು.

| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |


ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಸದ್ಭಾವನೆಯೇ ಶುಭಾಕಾಂಕ್ಷೆಗಳು

ಭಾರತೀಯರು ಒಳ್ಳೆಯ ಭಾವನೆಗಳನ್ನು ಹೊಂದಿದ್ದು, ಭಗವಂತನನ್ನೇ ಪ್ರತ್ಯಕ್ಷಗೊಳಿಸಿಕೊಳ್ಳಬಲ್ಲಂತಹಾ ಜ್ಞಾನಿಗಳು. ಪ್ರಜ್ಞಾವಂತರು. ಪ್ರಕೃತಿಯೆಲ್ಲಾ ಸ್ತ್ರೀಮಯವಾಗಿದೆ. ಪುರುಷನು - ಪುರುಷೋತ್ತಮನಾದ ಭಗವಂತನೊಬ್ಬನೇ! ರೂಪವಿಲ್ಲದೆಯೇ ತನ್ನ ಪ್ರಚೋದಕ ಶಕ್ತಿಯೊಂದಿಗೆ ಪ್ರಕೃತಿಯನ್ನು ಚೈತನ್ಯವಂತವನ್ನಾಗಿಸಿ. ಮಾನವರ ಜೀವನವನ್ನು ಅದರ ಗುರಿ ತಲುಪಿಸುವುದು, ಹಾಗೂ ಮಾನವನನ್ನು ವಿಜಯಪಥದಲ್ಲಿ ಮುನ್ನಡೆಸುವುದು ಕಾಲವೊಂದೇ! ಅದಕ್ಕೇ ಭಗವದ್ಗೀತೆಯಲ್ಲಿ ಗೀತಾಚಾರ್ಯನು, 'ಸರ್ವವನ್ನೂ ನಡೆಸುವ ಕಾಲವೂ ನಾನೇ ' ಎಂದಿದ್ದಾನೆ. ಪ್ರಪಂಚದ ಎಲ್ಲಾ ದೇಶಗಳಲ್ಲಿ ಅವರವರ ಕಾಲಗಣನೆಯನ್ನು ಆಧರಿಸಿ ಯಾವುದೋ ಒಂದು ಹೆಸರಿನಿಂದ ಸಂವತ್ಸರಾದಿಯನ್ನು ಮೊದಲ ಹಬ್ಬವೆಂದು ಆಚರಿಸುತ್ತಾರೆ. ನಾವು 'ಯುಗಾದಿ' ಎಂಬ ಹೆಸರಿನಿಂದ ಆ ಸಂಭ್ರಮವನ್ನು ಆಚರಿಸಿಕೊಳ್ಳುತ್ತೇವೆ.

ನಾವು ಚಾಂದ್ರಮಾನದ ಪ್ರಕಾರ, ವಸಂತಋತುವಿನ ಚೈತ್ರಶುದ್ಧಪಾಡ್ಯಮಿಯಂದು ಯುಗಾದಿಯನ್ನು ಆಚರಿಸಿ-ಆ ವರ್ಷವೆಲ್ಲಾ ಉತ್ಸಾಹದಿಂದ, ಉಲ್ಲಾಸದಿಂದ, ಅತ್ಯಂತ ಸಂತೋಷದಿಂದ, ಉನ್ನತವಾದ ರೀತಿಯಲ್ಲಿ, ಸತ್ಫಲದಾಯಕವಾಗಿ ಪ್ರಶಾಂತವಾದ ಜೀವನವನ್ನು ನಡೆಸಬೇಕೆಂದು ಕಾಲಾತ್ಮಕನಾದ ಭಗವಂತನನ್ನು ಪ್ರಾರ್ಥಿಸುತ್ತೇವೆ. ಇದು ವರ್ಷದ ಆದಿಯಲ್ಲಿ, ವರ್ಷದ ಪ್ರಯಾಣದಲ್ಲಿ ಮೊದಲ ಹೆಜ್ಜೆ ಇಡುವಂತಹಾ ಪರ್ವದಿನ.

ಈ ತಿಂಗಳಿನಲ್ಲೇ 'ಅಂತರಾಷ್ಟ್ರೀಯ ಮಹಿಳಾದಿನೋತ್ಸವ' ಬರುತ್ತದೆ. ವಿಶ್ವವೆಲ್ಲಾ ಶಕ್ತಿಮಯ. ಆ ಶಕ್ತಿಯೇ ಸ್ತ್ರೀ ಮೂರ್ತಿಯಾಗಿ ವಿಶೇಷವಾಗಿ ಮಾತೃಮೂರ್ತಿಯನ್ನಾಗಿ ಭಾವಿಸುವುದು, ಪೂಜಿಸುವುದು ನಮ್ಮ ಪ್ರತ್ಯೇಕತೆ. "ಯತ್ರ ನಾರ್ಯಾಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಲ್ಲಿ ಸ್ತ್ರೀಯರು ಗೌರವಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಆನಂದದಿಂದ ನಮ್ಮನ್ನು ಆಶೀರ್ವದಿಸುತ್ತಾರೆ. ವಿಶ್ವವೆಲ್ಲಾ ಸ್ತ್ರೀಮೂರ್ತಿಯಿಂದಲೇ ಅನೇಕ ರೀತಿಯಲ್ಲಿ ಸೃಜಿಸಲ್ಪಡುತ್ತಾರೆ. ಸ್ತ್ರೀ ಮೊದಲ ಮಾತೃಮೂರ್ತಿ ನಂತರ ಸಂಬಂಧ ಬಾಂಧವ್ಯಗಳನ್ನು ಆಧರಿಸಿ ಅನೇಕ ಹೆಸರುಗಳಿಂದ ಕರೆಯಲ್ಪಡುತ್ತಾಳೆ. ಆದರೆ ಹಾರಗಳಲ್ಲಿನ ದಾರದಂತೆ ಎಲ್ಲಾ ಹೆಸರುಗಳಲ್ಲೂ ಅಂತರ್ಗತವಾದ ಶಕ್ತಿ ಮಾತೃರೂಪವೇ ಆಗಿರುತ್ತದೆ.! ಅದಕ್ಕೇ ವೇದವು 'ಮಾತೃದೇವೋಭವ" - ಅಂದರೆ, 'ತಾಯಿಯೇ ದೇವರು', ಅವಳನ್ನು ದೇವತೆಯಂತೆ ಪೂಜಿಸು ಎಂದು ತಿಳಿಸಿದೆ. ಈ ವೇದವಾಕ್ಯ ಪ್ರಪಂಚ ದೇಶಗಳೆಲ್ಲದಕ್ಕೂ ಆಚರಿಸುವಂತಹಾ ಮಹಾಮಂತ್ರವಾಗಿದೆ. ನವಶಿಶುವಿಗೆ ಮೊದಲ ಗುರುವು ತಾಯಿಯೇ! ತಂದೆ ಆ ಶಿಶುವಿಗೆ ಲೋಕದ ಬಗೆಗೆ ತಿಳಿಸುತ್ತಾನೆ. ತಾಯಿ ಶಿಶುವನ್ನು ಹಡೆದು ಲೋಕವನ್ನು ತೋರಿಸುತ್ತಾಳೆ. ಈ ರೀತಿ ತಾಯಿ-ತಂದೆ ಇಬ್ಬರೂ ಆ ಮಗುವಿನ ಪಾಲನೆಯಲ್ಲಿ ಸಮತೆ, ಮಮತೆ, ಜವಾಬ್ದಾರಿಯನ್ನು ಹೊಂದಿರುತ್ತಾರೆ. ಪ್ರಾಚೀನ ಕಾಲದಿಂದಲೂ ಮಾತೃ ವ್ಯವಸ್ಥೆ ಇತ್ತು. ಕುಟುಂಬದ ಜವಾಬ್ದಾರಿಯ ನಿರ್ವಹಣೆಯಲ್ಲಿ ತಾಯಿಯೇ ಮಹಾರಾಣಿ. ಭೌತಿಕ, ಆಧ್ಯಾತ್ಮಿಕ ಗುರುವು ತಾಯಿಯೇ ಆಗಿರುತ್ತಾಳೆ. ಆ ತಾಯಿಯ ಮನನೋಯಿಸಿದರೆ ಜೀವನವೇ ಅಸ್ತವ್ಯಸ್ತವಾಗುತ್ತದೆ. ಈ ವಿಷಯವನ್ನು ಇಂದಿನ ಯುವಕರು ನೆನಪಿಡಬೇಕಾಗುತ್ತದೆ. ಸ್ತ್ರೀಯನ್ನು ಗೌರವಿಸಿದರೆ ದೇವತೆಗಳನ್ನು ಗೌರವಿಸಿದಂತೆಯೇ!

ಈ "ಶಾರ್ವರಿ" ನಮ್ಮೆಲ್ಲರ ಮನಸ್ಸಿನಲ್ಲಿರುವ ಹಿಂಸಾಪ್ರವೃತ್ತಿಯ ಮನೋಭಾವವನ್ನು ತೊಲಗಿಸಿ, ಮನುಷ್ಯರನ್ನು ಕುಮಾರ್ಗದಿಂದ ಸುಮಾರ್ಗಕ್ಕೆ ತಂದು ಅದೇ ದಾರಿಯಲ್ಲಿ ಮುನ್ನಡೆಸಿ ನಮ್ಮೆಲ್ಲರಿಗೂ ಶ್ರೀ ವೇಂಕಟೇಶ್ವರಸ್ವಾಮಿಯ ಮೂಲಕ ಶುಭ ಫಲಗಳನ್ನು ನೀಡಿ. ಸಂತೋಷಪಡಿಸಲೆಂದು 'ಸಪ್ತಗಿರಿ' ಹಾರೈಸುತ್ತಿದೆ.

ಹಸಿರುತೋರಣ

# ಕಾಲವೇ ದೈವವಾದ ಯುಗಾದಿ

- ಮೂಲ : ಡಾ॥ ಕೆ. ರಾಮಕೃಷ್ಣ

- ಅನುವಾದ : ಶ್ರೀಮತಿ. ಪಾರ್ವತಿ

9448074928



ವಸುಧೆಯ ಮೇಲೆ ವಸಂತವು ವಿಕಸಿದ ಪುಣ್ಯ ದಿನವೇ ಯುಗಾದಿ. ಉಳಿದ ಹಬ್ಬಗಳಿಗಿಂತಲೂ ಯುಗಾದಿ ಬಹಳ ಪ್ರತ್ಯೇಕವಾದ ಹಬ್ಬ. ಸಾಧಾರಣವಾಗಿ ಹಬ್ಬಗಳು ಯಾವುದೋ ಒಬ್ಬ ದೇವತೆ/ದೇವರಿಗೆ ಸಂಬಂಧಿಸಿದ್ದಾಗಿರುತ್ತದೆ. ಆದರೆ ಯುಗಾದಿಯು ಸಂಪೂರ್ಣವಾಗಿ ಭಿನ್ನವಾಗಿದೆ. ಅಂದು ಯಾವ ದೇವರ ಹೆಸರೂ ಈ ದಿನ ಕೇಳಿಸುವುದಿಲ್ಲ.

ಯುಗಾದಿಯು ಕಾಲದ ಸಂಕೇತ.ಮಾನವನ ಜೀವನದೊಂದಿಗೆ,ಕಾಲಕ್ಕೆ ಇರುವ ಅನುಬಂಧವನ್ನು ಗುರುತಿಸುವ ಆನಂದಮಯ ಹಬ್ಬವೇ ಯುಗಾದಿ. ಕಾಲವನ್ನು ಗುಣಿಸುತ್ತಾ ಕಾಲಕ್ಕೆ ಬದಲಾಗುತ್ತಿರುವ ಅನುಗುಣವಾಗಿ ಜೀವನವನ್ನು ತಿದ್ದುಕೊಳ್ಳಬೇಕೆಂಬ ಸಂದೇಶವನ್ನು ಯುಗಾದಿ ನೀಡುತ್ತದೆ. ಸಹನೆಗೆ,ವ್ಯಕ್ತಿತ್ವ ವಿಕಾಸಕ್ಕೆ ಮನೋವಿಕಾಸಕ್ಕೆ ಅನುವು ಮಾಡಿ ಕೊಡುತ್ತದೆ.

ಕಣ್ಣಿಗೆ ಕಾಣಿಸದ ಬಲವಾದ ಶಕ್ತಿಯೇ ಕಾಲ.ಕಾಲವನ್ನು ನಿರ್ಲಕ್ಷಿಸಿ ಯಾರು ಯಾವ ಕೆಲಸವನ್ನು ಮಾಡಲಾರರು. ಕಾಲಕ್ಕನುಗುಣವಾಗಿಯೇ ಪ್ರತಿ ವ್ಯಕ್ತಿಯೂ ತನ್ನ ದಿನಚರ್ಯೆಯನ್ನು ತಿದ್ದಿ ಕೊಳ್ಳುತ್ತಾನೆ. ಕಾಲವನ್ನು ಕಣ್ಣಿನಿಂದ ದರ್ಶಿಸಿ ಇದು ಕಾಲದ ಪೂರ್ತಿ ಸ್ವರೂಪವೆಂದು ನಿರ್ಧರಿಸಿದವರು ಯಾರೂ ಇಲ್ಲ. ತನ್ನಷ್ಟಕ್ಕೆ ತಾನೇ ಆವಿರ್ಭವಿಸಿ, ತನ್ನೊಂದಿಗೆ ಮನುಷ್ಯನನ್ನು ನಡೆಸುತ್ತಿರುವ ಶಕ್ತಿಯೇ ಕಾಲ. ಇಲ್ಲಿಯವರೆಗೂ ಕಾಲವನ್ನು ಜಯಿಸಿರುವ ವ್ಯಕ್ತಿ ಯಾರು ಇಲ್ಲ.

ಕಾಲವು ಅನಂತವಾದುದು. ಯಾವಾಗ ಹುಟ್ಟಿದೆಯೋ, ಹೇಗೆ ಬದಲಾಗುತ್ತದೆಯೋ ಯಾರೂ ಊಹಿಸಲು ಸಾಧ್ಯವಿಲ್ಲ. ಅದೊಂದು ಸ್ವಯಂಭೂಮೂರ್ತಿ.ಗ್ರಹಗತಿಗಳ ಆಧಾರದ ಮೇಲೆ ಖಗೋಳದಲ್ಲಿ ಆಗುತ್ತಿರುವ ಮಾರ್ಪಾಟುಗಳನ್ನು ಆಧರಿಸಿ ಕಾಲವನ್ನೂ ವಿಭಜನೆ ಮಾಡುತ್ತೇವೆ. ಅಷ್ಟೇ ಹೊರತು ಕಾಲಕ್ಕೆ "ನಿರ್ದಿಷ್ಟವಾದ ವಿಭಜನೆ" ಎನ್ನುವುದಿಲ್ಲ.

**ವೇದದಲ್ಲಿ ಕಾಲಮಾನ**

ಅತೀ ಪ್ರಾಚೀನವಾದ ಋಗ್ವೇದ ಕಾಲದಲ್ಲಿ, ಕಾಲ ವಿಭಜನೆಯ ಕುರಿತು ಬಹಳ ಕಡೆ ಪ್ರಸ್ತಾಪಿಸಲಾಗಿದೆ. ಆಯಾ ಕಾಲದಲ್ಲಿ ನಿರ್ವಹಿಸಬೇಕಾದ ಯಜ್ಞಯಾಗಾದಿ ಕರ್ಮಗಳನ್ನು ವಿವರಿಸುವ ಸಂದರ್ಭದಲ್ಲಿ ಕಾಲವನ್ನು ಪ್ರಸ್ತಾಪಿಸಲಾಗಿದೆ. ಋಗ್ವೇದದಲ್ಲಿ ಏಳನೆಯ ಮಂಡಲದ 103 ನೇ ಸೂಕ್ತದಲ್ಲಿ ಋತುಗಳ ಪ್ರಸ್ತಾಪವಿದೆ. ಸೋಮ, ಅತಿರಾತ್ರ ಯಜ್ಞಗಳ ಕುರಿತು ವಿವರಿಸುತ್ತಾ ಋತ್ವಿಕರು ಆಯಾ ಋತುಗಳಲ್ಲಿ ಯಾವ ಯಾಗಗಳನ್ನು ಮಾಡಬೇಕೆಂದು ಅದರಲ್ಲಿ ತಿಳಿಸಿದ್ದಾರೆ.

ಯಜುರ್ವೇದದಲ್ಲಿಯೇ ಕೂಡ ಅಹೋರಾತ್ರ, ಅರ್ಧಮಾಸ, ಮಾಸ, ಋತುಗಳು, ಸಂವತ್ಸರಗಳು ವಿವರಿಸುವ ಮಂತ್ರಗಳು ಇವೆ. 'ಅರ್ಧಮಾಸಾಸ್ಯೆ ಕಲ್ಪಂತಾಂ ಮಾಸಾಸ್ಯೆ ಕಲ್ಪಂತಾಂ।ಋತುವಸ್ಯೆ ಕಲ್ಪತಾಂ ಸಂವತ್ಸರಸ್ಯೆ ಕಲ್ಪತಾಂ" (ಯಜುರ್ವೇದ, 27:45) ಮಂತ್ರಗಳು ಇದಕ್ಕೆ ಉದಾಹರಣೆಯಾಗಿವೆ.ಯಜುರ್ವೇದದ ನಾಲ್ಕನೆಯ ಏಳನೇ ಕಾಂಡದಲ್ಲಿ ಋತುಗಳ ಪ್ರಸ್ತಾವನೆ ಇದೆ. ಶತಪಥ ಬ್ರಾಹ್ಮಣದಲ್ಲಿಯೂ ಋತುಗಳ ಪ್ರಸ್ತಾಪವಿದೆ. ಆದರೆ ಇದರಲ್ಲಿ ಏಳು ಋತುಗಳ ಪ್ರಸ್ತಾಪ ಮಾಡಿದ್ದಾರೆ.

ಕೌಟಿಲ್ಯನು ತನ್ನ ಅರ್ಥ ಶಾಸ್ತ್ರದಲ್ಲಿ "ಪಂಚವತ್ಸರೋ ಯುಗ ಮಿತಿ' ಐದು ಸಂವತ್ಸರ

ಗಳು ಸೇರಿದರೆ ಒಂದು ಯುಗ ವೆಂದು ಯುಗದ ವ್ಯಾಖ್ಯಾನ ಮಾಡಿದ್ದಾರೆ. ಜ್ಯೋತಿಶಾಸ್ತ್ರವೂ ಇದೇ ಅಂಶವನ್ನು ಸಮರ್ಥಿಸುತ್ತದೆ.

ಯುಗಗಳು, ಯುಗವಿಭಜನೆಯ ಪ್ರಸ್ತಾವನೆಯು ಮಹಾ ಭಾರತದಲ್ಲಿ ಮೊದಲ ಬಾರಿಗೆ ಕಾಣಸಿಗುತ್ತದೆ. ಕೃತಯುಗ, ತ್ರೇತಾಯುಗ, ದ್ವಾಪರಯುಗ, ಕಲಿಯುಗದೊಂದಿಗೆ ಕಲ್ಪ, ಮಹಾಕಲ್ಪ ವಿಭಜನೆಯನ್ನು ಸಹ ವ್ಯಾಸಮಹರ್ಷಿ ಪ್ರಸ್ತಾಪಿಸಿದ್ದಾರೆ. ಮಹಾಭಾರತದ ಅಂತರ್ಭಾಗವಾದ ಭಗವದ್ಗೀತೆಯಲ್ಲಿ "ಕಲ್ಪಕ್ಷಯೇ ಪುನಸ್ತಾನಿ.." "ಕಾಲಃ ಕಲಯತಾ ಮಹಾ" ಎಂಬ ಮೊದಲಾದ ಶ್ಲೋಕಗಳ ಮೂಲಕ ಮಹಾ ಭಾರತದ ಕಾಲದಲ್ಲಿ ಅನುಸರಿಸಿದ ಸ್ಪಷ್ಟವಾದ ಕಾಲ ವಿಭಜನೆಯನ್ನು ಗಮನಿಸಬಹುದು.

**ಕಾಲವಿಭಜನೆ**

ನಾವು ಉಪಯೋಗಿಸುವ ಕಾಲ ವಿಭಜನೆಯಲ್ಲಿ ಅತ್ಯಂತ ಸೂಕ್ಷ್ಮವಾದ ವಿಭಾಗವೆಂದರೆ 'ನಿಮೇಷ'. ಇದನ್ನು ವಾಡಿಕೆಯಲ್ಲಿ "ನಿಮಿಷ" ಎನ್ನುತ್ತೇವೆ. ನಿಮೇಷ ಎಂದರೆ ರೆಪ್ಪೆ ಬಡಿಯುವ ಕಾಲ ಎಂದರ್ಥ. ಋಗ್ವೇದದಲ್ಲಿ ನಿಮೇಷ ಎನ್ನುವ ಪದವನ್ನು ಕಾಲಕ್ಕೆ ಸಂಕೇತವಾಗಲ್ಲದೇ "ರೆಪ್ಪೆ ಬಡಿಯದವರು" (ದೇವತೆಗಳು) ಎನ್ನುವ ಅರ್ಥದಲ್ಲಿ ಬಳಸಿದ್ದಾರೆ. ಉಪನಿಷತ್ತುಗಳ ಕಾಲಕ್ಕೆ ಬರುವ ವೇಳೆಗೆ ಕಾಲವನ್ನು ಸ್ಪಷ್ಟವಾಗಿ ವಿಭಜಿಸಿರುವ ಉದಾಹರಣೆಗಳು ಕಾಣಸಿಗುತ್ತವೆ. "ಕಲಾ ಮುಹೂರ್ತಾಃ ಕಾಷ್ಟಾಶ್ಚ ಅಹೋರಾತ್ರಾಶ್ಚ ಸರ್ವಶಃ। ಅರ್ಧ ಮಾಸಾ ಮಾಸಾ ಋತವಸ್ಸವಂತ್ಸರಶ್ಚ ಕಲ್ಪಂತಾಂ॥" ಎಂದು ಮಾಂಡ್ಯೂಕ್ಯೋಪನಿಷತ್‌ನಲ್ಲಿ ಕಾಲವಿಭಜನೆಯ ಕುರಿತು ವಿವರಿಸಲಾಗಿದೆ.

ಪ್ರಸ್ತುತ ನಾವು ಉಪಯೋಗಿಸುವ ಕಾಲವಿಭಜನೆಗೆ ಸುಮಾರಾಗಿ ಸೌಮ್ಯತೆ ಹೊಂದಿರುವ ಕಾಲವಿಭಜನೆಯ ವಿಧವನ್ನು ಮಹಾಭಾರತದ ಮಹಾಪರ್ವದಲ್ಲಿನ "ಕಾಷ್ಠಾ ನಿಮೇಷಾ ದಶ ಪಂಚಚೈವ.." ಎನ್ನುವ ಶ್ಲೋಕದಲ್ಲಿ ಕಂಡು ಬರುತ್ತದೆ. ಇದರ ಪ್ರಕಾರ

1 ನಿಮೇಷ = ರೆಪ್ಪೆಬಡಿಯುವ ಕಾಲ

15 ನಿಮೇಷಗಳು = 1 ಕಾಷ್ಠ

30 ಕಾಷ್ಟಗಳು = 1 ಕಳ

30 ಕಳಗಳು = 1 ಮುಹೂರ್ತ

30 ಮುಹೂರ್ತಗಳು = 1 ದಿನರಾತ್ರಿ (ಒಂದು ದಿನ)

30 ದಿನ ರಾತ್ರಿಗಳು = 1 ಮಾಸ

12 ಮಾಸಗಳು = 1 ಸಂವತ್ಸರ

ಮನುಧರ್ಮಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲೂ ಕೂಡಾ ಇದೇ ವಿಧವಾದ ವಿಭಜನೆ ಇದೆ. ಭಾಗವತ, ವಿಷ್ಣು ಪುರಾಣಗಳಲ್ಲಿ ಕಾಲವಿಭಜನೆಗೆ ಸಂಬಂಧಿಸಿದ ಶ್ಲೋಕಗಳು ಇವೆ. ಕಾಲವಿಭಜನೆಗೆ ಸಂಬಂಧಿಸಿದ ಗ್ರಂಥಗಳಲ್ಲಿ ಸೂರ್ಯ ಸಿದ್ಧಾಂತವು ಪ್ರಮುಖವಾದುದು. ಇದರಲ್ಲಿ "ಮೂರ್ತ", 'ಅಮೂರ್ತ' ಎಂಬ ಎರಡು ವಿಧದ ಕಾಲಮಾನಗಳು ಇವೆ. ಮೂರ್ತ ಕಾಲಮಾನದಲ್ಲಿ 'ಪ್ರಾಣವು' ಅತ್ಯಂತ ಚಿಕ್ಕದಾದ ಕಾಲ ಪ್ರಮಾಣವಾಗಿದೆ. ಇದನ್ನು ಆಧರಿಸಿ ಕೆಳಗಿನಂತೆ ಇತರೆ ವಿಭಜನೆಗಳಾಗಿವೆ.

6 ಪ್ರಾಣ ಕಾಲಗಳು = 1 ವಿಘಡಿಯ

60 ವಿಘಡಿಗಳು = 1 ಘಡಿಯ

60 ಘಡಿಯಗಳು = 1 ಅಹೋರಾತ್ರ (ಒಂದು ದಿನ)

ಅಮೂರ್ತಕಾಲದಲ್ಲಿ 'ತ್ರುಟಿ'ಯು ಅತ್ಯಂತ ಚಿಕ್ಕದಾದ ಕಾಲಪ್ರಮಾಣವಾಗಿದೆ. ಸೂರ್ಯ ಸಿದ್ಧಾಂತದಲ್ಲಿ 'ತ್ರುಟಿ'ಗೆ ಸಂಬಂಧಿಸಿದಂತೆ ಇದಕ್ಕಿಂತ ಹೆಚ್ಚೇನೂ ವಿವರಗಳಿಲ್ಲ. ಆದರೆ 12 ನೇ ಶತಮಾನದ ಪ್ರಸಿದ್ಧ ಖಗೋಳ ಶಾಸ್ತ್ರಜ್ಞರಾದ ಭಾಸ್ಕರಾಚಾರ್ಯನು ತಾನು ಬರೆದ 'ಸಿದ್ಧಾಂತ ಶಿರೋಮಣಿ' ಗ್ರಂಥದಲ್ಲಿ ಅಮೂರ್ತಕಾಲಕ್ಕೆ ಅನೇಕ ವಿವರಣೆಗಳನ್ನು ಕೊಡುತ್ತಾ ಕಾಲ ವಿಭಜನೆ ಮಾಡಿದ್ದಾನೆ. ಇದರ ಪ್ರಕಾರ ದಿನದಲ್ಲಿ 2916000000 ರಷ್ಟು 'ತ್ರುಟಿ'ಗಳಿವೆ. ಆಧುನಿಕ ಲೆಕ್ಕದ ಪ್ರಕಾರ 1 ಸೆಕೆಂಡಿನಲ್ಲಿ 33750 ರಷ್ಟು ತ್ರುಟಿಗಳಿವೆ. ಎರಡೂ ಲೆಕ್ಕಾಚಾರಗಳು ಸರಿ ಸಮಾನವಾಗಿವೆ. ನೂರಾರು ವರ್ಷಗಳ ಹಿಂದೆಯೇ ಭಾರತೀಯ ಖಗೋಳಶಾಸ್ತ್ರಜ್ಞರು ಯಾವುದೇ ತರಹದ ಆಧುನಿಕ ಯಂತ್ರಗಳ ಸಹಾಯವಿಲ್ಲದೆಯೇ ಮಾಡಿರುವ ಕಾಲವಿಭಜನೆ ಇಂದಿಗೂ ಪ್ರಸ್ತುತವಾಗಿರುವುದು ಆಶ್ಚರ್ಯ ವನ್ನುಂಟು ಮಾಡುತ್ತದೆ.

## ಋತುಗಳು, ರಾಶಿಗಳು, ಮಾಸಗಳ ವಿಭಜನೆ

ವಸಂತ, ಗ್ರೀಷ್ಮ, ವರ್ಷ, ಶರತ್, ಹೇಮಂತ ಹಾಗೂ ಶಿಶಿರ ಋತುಗಳು ಪ್ರಸ್ತುತ ವಾಡಿಕೆಯಲ್ಲಿವೆ. ಪ್ರತಿ ಋತುವು ಎರಡು ತಿಂಗಳು ಇರುತ್ತವೆ. ಇದರ ಪ್ರಕಾರ 12 ತಿಂಗಳುಗಳುಳ್ಳ ಸಂವತ್ಸರದಲ್ಲಿ 6 ಋತುಗಳ ಬರುತ್ತವೆ.ವಾಸ್ತವವಾಗಿ ಭಾರತೀಯ ವೇದವಾಙ್ಮಯದಲ್ಲಿ, ಅತ್ಯಂತ ಪ್ರಾಚೀನವಾದ ಋಗ್ವೇದದಲ್ಲಿ ವಸಂತ, ಗ್ರೀಷ್ಮ ಮತ್ತು ಶರತ್ ಎಂಬ ಮೂರು ಋತುಗಳ ಪ್ರಸ್ತಾಪ ಮಾತ್ರ ಇದೆ. ವರ್ಷವನ್ನು ಪ್ರತ್ಯೇಕ ಋತುವಾಗಿ ಪರಿಗಣಿಸದೇ ಪ್ರತ್ಯೇಕ ಕಾಲವಾಗಿ ಪರಿಗಣಿಸಲ್ಪಟ್ಟಿದೆ (ಋಗ್ವೇದದ ಏಳನೆಯ ಮಂಡಲದ ಪ್ರಕಾರ). ಕೃಷ್ಣ ಯಜುರ್ವೇದದಲ್ಲಿ 5 ಋತುಗಳು ಪ್ರಸ್ತಾಪವಿದೆ. ನಂತರದ ತೈತ್ತರೀಯ ಸಂಹಿತದಲ್ಲಿ ಮೊದಲ ಬಾರಿಗೆ ಆರು ಋತುಗಳ ಪ್ರಸ್ತಾಪವಿದೆ. ಆದರೆ ಪ್ರಸ್ತುತವಾಗಿ ಬಳಸುತ್ತಿರುವ ಚೈತ್ರ, ವೈಶಾಖ, ಜ್ಯೇಷ್ಠ... ಎನ್ನುವ 12 ಹೆಸರುಗಳಲ್ಲದೇ ಮಧು, ಮಾಧವ, ಶುಕ್ರ, ಶುಚಿ, ನಭ, ನಭಸ್ಯ, ಇಷ, ಊರ್ಜ, ಸಹಾ ಸಹಾಸ್ಯ, ತಪ, ತಪಸ್ಯ ಎನ್ನುವ ಹೆಸರುಗಳನ್ನು ಇದರಲ್ಲಿ ಬಳಸಿದ್ದಾರೆ.

ಪ್ರಸ್ತುತ ನಾವು ಉಪಯೋಗಿಸುತ್ತಿರುವ ಚೈತ್ರ, ವೈಶಾಖಗಳೆಂಬ ಮಾಸಗಳ ಹೆಸರುಗಳು ಚಂದ್ರಗ್ರಹದ ಸಂಚಾರವನ್ನು ಆಧರಿಸಿ ಉತ್ಪತ್ತಿಯಾಗಿವೆ. ನಕ್ಷತ್ರಗಳ ಆಧಾರವಾಗಿ ಚಂದ್ರನ ಸಂಚಾರವನ್ನು ಪರಿಶೀಲಿಸಿದಾಗ ಚಂದ್ರನು ಒಂದು ನಕ್ಷತ್ರ ಕೂಟದಿಂದ ಹೊರಟು ಮತ್ತೇ ಅದೇ ನಕ್ಷತ್ರಕೂಟಕ್ಕೆ ಸೇರಲು ಸುಮಾರು 27 ದಿನಗಳು ಬೇಕಾಗುತ್ತದೆ. ಇದನ್ನೇ ನಕ್ಷತ್ರ ಮಾಸ ಎನ್ನುತ್ತೇವೆ. ಈ 27 ದಿನಗಳಲ್ಲಿ ಚಂದ್ರನು ದಾಟುವ ಒಂದೊಂದು ನಕ್ಷತ್ರದ ಆಧಾರವಾಗಿ ಅಶ್ವಿನಿ, ಭರಣಿ, ಕೃತಿಕ ಮೊದಲಾದ 27 ನಕ್ಷತ್ರಗಳ ಹೆಸರುಗಳು ಉಂಟಾಗಿವೆ. ಪ್ರತಿ ತಿಂಗಳು ತುಂಬಿದ ಪೂರ್ಣಿಮೆ ದಿನದಂದು ಚಂದ್ರನು ಯಾವ ನಕ್ಷತ್ರದಲ್ಲಿ ಇರುತ್ತಾನೋ, ಆ ನಕ್ಷತ್ರದ ಹೆಸರನ್ನು ಆಧರಿಸಿ ತಿಂಗಳಿಗೆ ಆ ಹೆಸರನ್ನು ಇಡಲಾಗಿದೆ. ಇದರ ಪ್ರಕಾರ ಚಂದ್ರನು ಪೂರ್ಣಿಮೆ ದಿನದ ಚಿತ್ತ ನಕ್ಷತ್ರದಲ್ಲಿದ್ದರೆ ಚೈತ್ರಮಾಸವಾಗುತ್ತದೆ. ಇದೇ ರೀತಿಯಲ್ಲಿ ವಿಶಾಖ ನಕ್ಷತ್ರದಲ್ಲಿ ಪೂರ್ಣಿಮೆ ಬರುವ ತಿಂಗಳು ವೈಶಾಖಮಾಸ... ಹೀಗೆ ಎಲ್ಲಾ ತಿಂಗಳುಗಳ ಹೆಸರು ಉಂಟಾಗಿವೆ.

ಚಂದ್ರನ ಚಲನೆಯ ಮಾದರಿಯಂತೆ ಸೂರ್ಯನಿಗೆ ಸಂಬಂಧಿಸಿದ ಸಂವತ್ಸರ ಕಾಲವನ್ನು 27 ಭಾಗಗಳಾಗಿ ಮಾಡಿ ಅವುಗಳಿಗೆ "ರಾಶಿ" ಎಂದು ಹೆಸರಿಸಲಾಗಿದೆ. ಒಂದೊಂದು ನಕ್ಷತ್ರ ಕೂಟದಲ್ಲಿ ಸೂರ್ಯನು ಸುಮಾರು ಎರಡು ವಾರಗಳ ಕಾಲ ಇರುತ್ತಾನೆ. ಇದರ ಪ್ರಕಾರ ಒಂದೊಂದು ರಾಶಿಯು ಸುಮಾರು 13 ಅಥವಾ 14 ದಿನಗಳು ಇರುತ್ತವೆ. ಅಶ್ವಿನಿಯಿಂದ ರೇವತಿವರೆಗೆ ಹೀಗೆ ನಕ್ಷತ್ರಗಳ ಹೆಸರುಗಳನ್ನು ಆಧರಿಸಿ ರಾಶಿಗಳು ಉಂಟಾಗಿವೆ.

ಭಾನುವಾರದಿಂದ ಶನಿವಾರದವರೆಗೂ ನಾವು ಉಪಯೋಗಿಸುವ ವಾರ ವಿಭಜನೆಯು ಗ್ರಹಕಕ್ಷೆಗಳನ್ನು ಆಧರಿಸಿದೆ. ಈ ವಿವರಗಳು ಸೂರ್ಯಸಿದ್ಧಾಂತ ಗ್ರಂಥಗಳಲ್ಲಿವೆ.ಇದರ ಪ್ರಕಾರ ಗ್ರಹಕಕ್ಷೆಗಳಲ್ಲಿ ನಾಲ್ಕನೆಯದು ಸೂರ್ಯಕಕ್ಷೆ.ಹೀಗೆ ಮೊದಲ ವಾರ ಭಾನುವಾರವಾಗಿ ಏರ್ಪಟ್ಟಿದೆ. ಸೂರ್ಯನಿಂದ ನಾಲ್ಕನೆಯ ಕಕ್ಷೆಯಲ್ಲಿ ಚಂದ್ರನು ಇರುವುದರಿಂದ ಭಾನುವಾರದ ನಂತರ ಸೋಮವಾರ (ಸೋಮನೆಂದರೆ ಚಂದ್ರ) ಏರ್ಪಟ್ಟಿದೆ. ಚಂದ್ರನಿಂದ ನಾಲ್ಕನೆಯ ಕಕ್ಷೆಯಲ್ಲಿ ಬುಧನು ಇರುವುದರಿಂದ ಬುಧವಾರ..... ಹೀಗೆ ಉಳಿದ ವಾರಗಳು ಏರ್ಪಟ್ಟಿವೆ.

## ಸಂವತ್ಸರಗಳ ಹೆಸರುಗಳ ಕಥೆ

ಆಜನ್ಮ ಬ್ರಹ್ಮಚಾರಿಯಾದ ನಾರದ ಮಹರ್ಷಿಗೆ ಒಮ್ಮೆ ವಿಚಿತ್ರವಾದ ಕೋರಿಕೆ ಉಂಟಾಯಿತು. ಸಂಸಾರವೇ ಮಾಯೆ ಎನ್ನುತ್ತಾರೆ. ಅದನ್ನೇ ಸಂಸಾರ ಬಂಧ ಎನ್ನುತ್ತಾರೆ. ಇದೆಲ್ಲಾ ಏನೆಂದು ತಿಳಿದುಕೊಳ್ಳಬೇಕೆಂಬ ಕುತೂಹಲ ಉಂಟಾಯಿತು. ತಕ್ಷಣವೇ ತನ್ನ ಕೋರಿಕೆಯನ್ನು ವಿಷ್ಣುವಿಗೆ ತಿಳಿಸಿದನು. ಭೂಲೋಕದಲ್ಲಿರುವ ಒಂದು ಕೊಳವನ್ನು ತೋರಿಸಿ ಅದರಲ್ಲಿ ಸ್ನಾನ ಮಾಡಿ ಬರುವಂತೆ ವಿಷ್ಣು ತಿಳಿಸಿದನು. ನಾರದರು ಸರಿಯೆಂದು ಸ್ನಾನಕ್ಕೆ ತೆರಳಿದರು. ಸ್ನಾನ ಮಾಡಿ ಹಿಂದಿರುಗಿ ಬರುವ ವೇಳೆಗೆ ನಾರದನು ಸ್ತ್ರೀ ವೇಷಧಾರಿಯಾಗುತ್ತಾನೆ. ಪೂರ್ವ ಜ್ಞಾನವನ್ನು ಮರೆಯುತ್ತಾನೆ. ಅಷ್ಟರಲ್ಲಿ ಅಲ್ಲಿಗೆ ಬಂದ ಆ ದೇಶದ ರಾಜನು ಸ್ತ್ರೀರೂಪದಲ್ಲಿ ಇರುವ ನಾರದನನ್ನು ನೋಡಿ ಮೋಹಿಸಿ ಆಕೆಯನ್ನು ವಿವಾಹವಾಗುತ್ತಾನೆ. ಇವರಿಗೆ 60 ಮಕ್ಕಳು ಹುಟ್ಟುತ್ತಾರೆ. ಕೆಲಕಾಲದ ನಂತರ ಶತ್ರುಗಳೊಂದಿಗೆ ಜರುಗಿದ ಯುದ್ಧದಲ್ಲಿ ರಾಜನು ತನ್ನ 60 ಮಕ್ಕಳೊಂದಿಗೆ ಮರಣ ಹೊಂದುತ್ತಾನೆ. ಸ್ತ್ರೀರೂಪದಲ್ಲಿರುವ ನಾರದನಿಗೆ ಅತ್ಯಂತ ದುಃಖ ಉಂಟಾಗುತ್ತದೆ.ಮರಣ ಹೊಂದಿದ ಎಲ್ಲರ ಉತ್ತರ ಕ್ರಿಯೆಗಳು ಪೂರ್ಣಗೊಂಡ ನಂತರ ತಾನು ಈ ಹಿಂದೆ ಸ್ನಾನ ಮಾಡಿದ ಕೊಳದಲ್ಲಿ ಸ್ನಾನ ಮಾಡುತ್ತಾನೆ.

ತಕ್ಷಣವೇ ಹಿಂದಿನ ನಾರದನ ರೂಪವನ್ನು ಹೊಂದುತ್ತಾನೆ. ತನ್ನ ಪುತ್ರರ ಮರಣ ದುಃಖದಿಂದ ಹೊರ ಬರಲು ಅಸಾಧ್ಯವೆನಿಸುತ್ತದೆ. ಅನೇಕ ವಿಧದಲ್ಲಿ ವಿಷ್ಣು ದೇವರನ್ನು ಪ್ರಾರ್ಥಿಸುತ್ತಾನೆ. ಆಗ ವಿಷ್ಣುವು ಪ್ರತ್ಯಕ್ಷನಾಗಿ ನಾರದನು ಕೇಳಿರುವ ಸಂದೇಹವನ್ನು ನಿವಾರಿಸಲು ತಾನೇ ಈ ಮಾಯಾ ನಾಟಕವನ್ನು ನಡೆಸಿರುವುದಾಗಿ ತಿಳಿಸುತ್ತಾನೆ. ನಾರದನ ಸಂತಾನದ ಹೆಸರುಗಳು ಶಾಶ್ವತವಾಗಿ ಉಳಿಯುವಂತೆ ಮಾಡಲು ಹೆಸರುಗಳನ್ನೇ ಸಂವತ್ಸರದ ಹೆಸರುಗಳಾಗಿ ಮಾರ್ಪಡಿಸಿ ಕಾಲದೊಂದಿಗೆ ಅವರ ಹೆಸರುಗಳು ಶಾಶ್ವತವಾಗಿ ಉಳಿಯುವಂತೆ ವರ ನೀಡುತ್ತಾನೆ. ಹೀಗೆ ನಾರದನ ಸಂತಾನಗಳಾದ ಪ್ರಭವ, ವಿಭವ, ಶುಕ್ಲ....ಎಂಬ 60 ಹೆಸರುಗಳು ಇಂದು ನಾವು ಉಪಯೋಗಿಸುತ್ತಿರುವ ಸಂವತ್ಸರಗಳ ಹೆಸರುಗಳಾಗಿ ಚಲಾವಣೆಗೆ ಬಂದಿವೆ.

### ಪಂಚಾಂಗಗಳು, ಸಿದ್ಧಾಂತಗಳು

ಯುಗಾದಿ ಎಂದಾಕ್ಷಣ ಯುಗಾದಿಯಂದು ಮಾಡುವ ಪ್ರಸಾದದ ನಂತರ ಪಂಚಾಂಗವೇ ಸ್ಮೃತಿ ಪಥಲದಲ್ಲಿ ಹಾದು ಹೋಗುತ್ತದೆ. ಮುಂಬರುವ ಸಂವತ್ಸರ ಕಾಲದಲ್ಲಿ ತಮ್ಮ ಭವಿಷ್ಯವು ಹೇಗಿರುತ್ತದೆ ಎಂದು ತಿಳಿದುಕೊಳ್ಳುವ ಆಸಕ್ತಿ ಪ್ರತಿಯೊಬ್ಬರಲ್ಲೂ ಇರುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ಯುಗಾದಿ ದಿನದಂದು ಪಂಚಾಂಗ ಶ್ರವಣ ಮಾಡುತ್ತಾರೆ. ಪಂಚಾಂಗ ರಚನೆಗೆ ಸೂರ್ಯ, ದೃಕ್ ಎಂಬ ಎರಡು ಸ್ಷಿದ್ಧಾಂತಗಳು ನಮ್ಮ ದೇಶದಲ್ಲಿ ಪ್ರಚಲಿತದಲ್ಲಿದೆ. ಇದರಲ್ಲಿ ಸೂರ್ಯ ಸಿದ್ಧಾಂತವು ಅತ್ಯಂತ ಪ್ರಾಚೀನವಾದುದು. ಸುಮಾರು 1800 ವರ್ಷಗಳಿಂದಲೂ ಪ್ರಚಲಿತದಲ್ಲಿದೆ. ಭಟ್ಟೋತ್ಪಲ, ದಿವಾಕರ, ಕೇಶವ, ವಿಜಯನಂದಿ, ಚಿತ್ರಭಾನು, ಶ್ರೀರಂಗನಾಥ ಮಕರಂದ, ನರಸಿಂಹ, ಭಾಸ್ಕರಾಚಾರ್ಯ ಆರ್ಯಭಟ, ವರಹಾಮಿಹಿರದಂತಹ ಖಗೋಳ ಗಣಿತಜ್ಞರು (ಆಸ್ಟ್ರೋಮ್ಯಾಥಮೆಟಿಕ್ಸ್) ಖಗೋಳ ಜ್ಞಾನವನ್ನು ಆಧರಿಸಿ ಕಾಲವಿಭಜನೆ ಮಾಡಿ, ಸ್ಪಷ್ಟವಾದ ವಿವರಣೆ ನೀಡಿದ್ದಾರೆ. ಇವರಲ್ಲಿ ಕ್ರಿ.ಶ. 1178 ರ ಕಾಲದಲ್ಲಿ ಜೀವಿಸಿದ್ದ ಮಲ್ಲಿಕಾರ್ಜುನ ಸೂರಿಯವರು ಬರೆದ 'ಸೂರ್ಯ ಸಿದ್ಧಾಂತ ಭಾಷ್ಯ'ವು ತೆಲುಗು, ಸಂಸ್ಕೃತ ಭಾಷೆಗಳಲ್ಲಿ ಮುದ್ರಿತವಾಗಿ ಇಂದು ವಾಡಿಕೆಯಲ್ಲಿದೆ. ಪಂಚಾಂಗ ರಚನೆಗೆ ಇದೇ ಅತ್ಯಂತ ಪ್ರಮಾಣೀಕೃತ ಗ್ರಂಥವಾಗಿದೆ. ಸೂರ್ಯ ಸಿದ್ಧಾಂತ, ಆರ್ಯಭಟ್ಟೀಯಂ, ಬ್ರಹ್ಮಸ್ಫುಟ ಸಿದ್ಧಾಂತ ಈ ಮೂರು ಗ್ರಂಥಗಳ ಆಧಾರವಾಗಿ ಪ್ರಪಂಚದಲ್ಲಿರುವ ಅನೇಕ ದೇಶದವರು ತಮ್ಮ ಕ್ಯಾಲೆಂಡರ್‌ನ್ನು ತಯಾರು ಮಾಡಿ ಕೊಳ್ಳುತ್ತಿದ್ದಾರೆ. ದೃಕ್ ಸಿದ್ಧಾಂತವನ್ನು ಕೇರಳ ರಾಜ್ಯದ ಖಗೋಳ ಶಾಸ್ತ್ರಜ್ಞನಾದ 'ಪರಮೇಶ್ವರ (ಕ್ರಿ.ಶ. 1431) ಬಳಕೆಗೆ ತಂದರು. ಸೂರ್ಯ, ದೃಕ್ ಸಿದ್ಧಾಂತಗಳನ್ನು ಆಧರಿಸಿಯೇ ಇಂದು ಪಂಚಾಂಗಗಳನ್ನು ತಯಾರಿಸಲಾಗುತ್ತಿದೆ.


## STATEMENT ABOUT OWNERSHIP AND OTHER PARTICULARS ABOUT

## SAPTHAGIRI

**(MONTHLY)**
**FORM IV**
*See Rule 8*

| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Honorary Editor | : | **Sri Anil Kumar Singhal,** I.A.S., Executive Officer, TTD |
| 4. Printer's Name | : | ***Sri R.V. Vijaya Kumar,*** B.A., B.Ed., |
| Whether citizen of India | : | Yes |
| Address | : | Dy. E.O.,(Publication & Press), T.T.D., Tirupati. |
| 5. Editor & Publisher's Name | : | **Dr. K. Radha Ramana,** MA.,M.Phil., Ph.D. |
| Whether citizen of India | : | Yes |
| Address | : | Chief Editor, Sapthagiri T.T.D. Journal, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Board of Trustees represented by the Executive Officer on behalf of T.T.D., Tirupati |

*I, K. Radha Ramana, hereby declare that the particulars given above are true to the best of my knowledge and belief.*

TIRUPATI
Date : 29-2-2020

**(Sd.) Dr. K. Radha Ramana**
*Signature of the Publisher*



# ವೃತ್ತಾಸುರನ ವೃತ್ತಾಂತ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
9821914642
ಅನುವಾದ : ಡಿ.ಎಸ್.ಬದ್ರಿನಾಥ್

ವೃತ್ತಾಸುರನ ವೃತ್ತಾಂತ ಶ್ರೀ ಮದ್ಭಾಗವತದ ಷಷ್ಠಸ್ಕಂದದಲ್ಲಿ ಬರುತ್ತದೆ. ದೇವಗುರು ಬೃಹಸ್ಪತಿ ದೇವತೆಗಳನ್ನು ತೊರೆದು ಹೊರಟು ಹೋಗಲು ಗುರುಕರುಣ ಬಾಹಿರರಾದ ದೇವತೆಗಳು ಸುಲಭವಾಗಿ ದಾನವರ ಕೈಯಿಂದ ಸೋಲಿಸಲ್ಪಟ್ಟಿದ್ದಾರೆ. ಆಗ ಬ್ರಹ್ಮನ ಆದೇಶದ ಮೇರೆಗೆ ದೇವತೆಗಳು ವಿಶ್ವರೂಪನನ್ನು ಪುರೋಹಿತನಾಗಿ ಸ್ವೀಕರಿಸಿ ತಮ್ಮ ಗತ ವೈಭವವನ್ನು ಪುನಃ ಹೊಂದಿದ್ದಾರೆ. ಆದರೆ ತದನಂತರ ವಿಶ್ವರೂಪನು ದೇವತೆಗಳ ಹೆಸರನ್ನೊಂದೇ ಅಲ್ಲದೆ ಅಸುರರ ಹೆಸರು ಸಹಾ ರಹಸ್ಯವಾಗಿ ಹೇಳಿ ಆಹುತಿಗಳನ್ನು ಅರ್ಪಿಸುವುದನ್ನು ಕಂಡ ಇಂದ್ರನು ಆತನನ್ನು ವಧೆ ಮಾಡಿದ್ದಾನೆ. ಅಂತಹ ಬ್ರಹ್ಮಹತ್ಯಾ ಪಾತಕದಿಂದ ಇಂದ್ರನು ನಂತರದಲ್ಲಿ ಅದೆಷ್ಟೋ ಕಷ್ಟದಿಂದ ಹೊರಬಂದಿದ್ದಾನೆ.

ವಿಶ್ವರೂಪನು ಈ ರೀತಿಯಾಗಿ ಇಂದ್ರನ ಕೈಯಿಂದ ವಧಿಸಲ್ಪಟ್ಟ ವಿಷಯವು ವಿಶ್ವರೂಪನ ತಂದೆಗೆ ಬಹು ಬಾಧೆಯನ್ನುಂಟು ಮಾಡಿದೆ. ವಿಶ್ವರೂಪನ ತಂದೆ ತ್ವಷ್ಟನು. ಪುತ್ರನ ಮರಣಕ್ಕೆ ಪ್ರತೀಕಾರ ಮಾಡುವ ಉದ್ದೇಶದಿಂದ ಆತನು ಇಂದ್ರನನ್ನು ಸಂಹರಿಸಬಲ್ಲ ವ್ಯಕ್ತಿಯನ್ನು ಉದ್ಭವಿಸುವಂತಹ ಒಂದು ಮಹಾಯಜ್ಞವನ್ನೇ ಮಾಡಿದ್ದಾನೆ. ಈ ರೀತಿಯಾಗಿ ತ್ವಷ್ಟ ಯಜ್ಞ ಮಾಡಲು ದಕ್ಷಿಣಾಗ್ನಿಯಿಂದ ಪ್ರಳಯಾಗ್ನಿಯನ್ನೇ ಉಂಟು ಮಾಡಬಲ್ಲವನಾಗಿ ಗೋಚರಿಸುವ ವೃತ್ತಾಸುರನು ಹೊರಗೆ ಬಂದಿದ್ದಾನೆ. ಆ ಅಸುರನು ಎತ್ತರವಾಗಿ, ಕಪ್ಪಾಗಿದ್ದು ದಷ್ಟಪುಷ್ಟನಾದ ಪರ್ವತದಂತೆ ಗೋಚರಿಸಿದ್ದಾನೆ. ಆತನ ಶಿಖವು, ಗಡ್ಡ-ಮೀಸೆಗಳು ತಾಮ್ರ ವರ್ಣದ್ದಾಗಿವೆ. ಆ ಅಸುರನನ್ನು ನೋಡುತ್ತಲೇ ಎಲ್ಲರೂ ಭಯದಿಂದ ನಾಲ್ಕು ದಿಕ್ಕುಗಳಿಗೆ ಓಡಕಿತ್ತಿದ್ದಾರೆ. ಆತನು ತನ್ನ ತೇಜಸ್ಸಿನಿಂದ, ಶರೀರದಿಂದ ಸಕಲ ಲೋಕಗಳನ್ನು ಆವರಿಸಿದಂತೆ ಕಾಣುವುದರಿಂದ ಆತನಿಗೆ ವೃತ್ತಾ ಸುರನೆಂಬ ಹೆಸರು ಬಂದಿದೆ. ವೃತ್ತಾಸುರನನ್ನು ನೋಡುತ್ತಲೇ ಇಂದ್ರಾದಿ ದೇವತೆಗಳು ಧೈರ್ಯದಿಂದ ತಮ್ಮ ಆಯುಧಗಳಿಂದ ಧಾಳಿ ಮಾಡಿದ್ದಾರೆ. ಆದರೆ ಆ ಅಸುರನು ಅವರ ಆಯುಧಗಳನ್ನು ಕ್ಷಣದಲ್ಲಿ ನುಂಗಿಹಾಕಿದ್ದಾನೆ. ತಾವು ಪ್ರಯೋಗಿಸಿದ ಶಸ್ತ್ರಾಸ್ತ್ರಗಳನ್ನು ಒಂದೇ ಉಸಿರಿಗೆ ಅಸುರನ ಬಾಯಲ್ಲಿ ಮಾಯವಾದುದನ್ನು ಕಂಡು ದೇವತೆಗಳೆಲ್ಲರೂ ನಿರುತ್ಸಾಹಗಳಾಗಿದ್ದಾರೆ. ತೇಜೋಹೀನರಾಗಿದ್ದಾರೆ. ಆಗ ಅವರು ತಮ್ಮ ಏಕೈಕ ಶರಣ್ಯನಾದ ದೇವದೇವನನ್ನು ಮೊರೆ ಹೋಗಿದ್ದಾರೆ.

ದೇವತೆಗಳು ಪ್ರಾರ್ಥಿಸಲು ಭಗವಂತನು ಕೂಡಲೇ ಅವರ ಹೃದಯಗಳಲ್ಲಿ ದರ್ಶನವಿತ್ತು ಅನಂತರ ಪ್ರತ್ಯಕ್ಷವಾಗಿ ಅವರೆದುರು ದರ್ಶನ ವಿತ್ತಿದ್ದಾನೆ. ಚತುರ್ಭುಜಗಳಿಂದ ಸಾಕ್ಷಾತ್ತಾಗಿ ವೈಕುಂಠವೇ ತಮ್ಮ ಎದುರು ನಿಲ್ಲಲು ದೇವತೆಗಳು ಸಾಷ್ಟಾಂಗವೆರಗಿ, ಮುಕುಳಿತ ಹಸ್ತರಾಗಿ ಮತ್ತೊಮ್ಮೆ ದೇವನನ್ನು ಸ್ತುತಿಸಿದ್ದಾರೆ. ದೇವತೆಗಳ ಸ್ತುತಿಗೆ ಪ್ರಸನ್ನನಾದ ನಾರಾಯಣನು ದೇವತೆಗಳಿಗೆ ಮಾರ್ಗೋಪದೇಶ ಮಾಡುತ್ತಾ ಹೀಗೆಂದಿದ್ದಾನೆ.

"ದೇವತೆಗಳೇ! ನಾನು ಪ್ರಸನ್ನನಾದೊಡೆ ಮನುಷ್ಯನಿಗೆ ದುರ್ಲಭವಾದುದು.

ಯಾವುದಿರುವುದಿಲ್ಲ ಆದರೂ ನಾನು ಮುಂದೆ ಬಂದಿರುವಾಗ ಪರಿಶುದ್ಧನಾದ ಭಕ್ತನು ಭಕ್ತಿ ಯೋಗವಕಾಶವನ್ನು ಬಿಟ್ಟು ಬೇರೆಯದೇನನ್ನು ಕೋರುವುದಿಲ್ಲ. ಇಂದ್ರಾ! ಈಗ ನೀವು ದಧೀಚಿಯ ಬಳಿ ಹೋಗಿರಿ. ತಪದಿಂದ ಆತನ ದೇಹವು ಸದೃಢವಾಗಿದೆ. ನೀವು ಆತನಿಂದ ಆತನ ದೇಹವನ್ನು ಯಾಚಿಸಿರಿ. ದಧೀಚಿ ಮುನಿಯು ಎಷ್ಟು ಶಕ್ತಿವಂತನೆಂದರೆ ಆತನ ಮೂಲಕ ಆಧ್ಯಾತ್ಮಿಕ ಜ್ಞಾನವನ್ನು ಹೊಂದಿದ ಅಶ್ವಿನಿಕುಮಾರರು ಜೀವನ್ಮುಕ್ತರಾಗಿದ್ದಾರೆ. ಆ ದಧೀಚಿಯೇ 'ನಾರಾಯಣ ಕವಚ'ವನ್ನು ತ್ವಷ್ಟನಿಗೆ ಕೊಟ್ಟಿರುವುದು. ತ್ವಷ್ಟ ದ್ವಾರ ಅದನ್ನು ವಿಶ್ವರೂಪನು ಕಲಿತಕೊಂಡಿದ್ದಾನೆ. ವಿಶ್ವರೂಪ ನಿಂದ ನಾರಾಯಣ ಕವಚವನ್ನು ನೀವು ಕಲಿತು ಅಸುರ

ರನ್ನು ಜಯಿಸಿರಿ. ನಾರಾಯಣ ಕವಚ ಪ್ರಭಾವದಿಂದ ದಧೀಚಿ ತನ್ನ ದೇಹವನ್ನು ದೃಢ ಮಾಡಿಕೊಂಡಿದ್ದಾನೆ. ನಿಮ್ಮ ವಕ್ಷಃಸ್ಥಳದಲ್ಲಿ ಅಶ್ವಿನಿ ಕುಮಾರರು ನಿಂದು, ಆತನ ದೇಹವನ್ನು ಯಾಚಿಸಿದರೆ ಆತನು ತಪ್ಪದೇ ತನ್ನ ದೇಹವನ್ನು ಕೊಡುತ್ತಾನೆ. ಆತನು ಧರ್ಮಜ್ಞ ನಾದ್ದರಿಂದ ಇದರಲ್ಲಿ ಯಾವುದೇ ಸಂದೇಹವಿಲ್ಲ. ಆತನ ಶರೀರ ದಲ್ಲಿರುವ ಎಲುಬುಗಳಿಂದ ವಜ್ರಾಯುಧವನ್ನು ವಿಶ್ವಕರ್ಮ ತಯಾರು ಮಾಡಬಲ್ಲನು. ಆತನ ಮೂಲಕವೇ ವೃತ್ರಾಸುರನ ವಧೆ ಸಾಧ್ಯವಾಗುತ್ತದೆ. ಆ ಅಸುರನು ಮರಣಿಸಿದ ನಂತರ ನಿಮ್ಮ ಆಯುಧಗಳೆಲ್ಲವೂ ತಿರುಗಿ ನಿಮಗೆ ಸಿಗುತ್ತವೆ. ಲೋಕ ಭೀಕರವಾದ ವೃತ್ರಾಸುರನು ಸಹಾ ನನ್ನ ಭಕ್ತನೇ. ಆದ್ದರಿಂದ ನಿಮಗೆ ಯಾವುದೇ ಭಯವಿಲ್ಲ."

ದೇವತೆಗಳಿಗೆ ಬೋಧನೆಯುಣಿಸಿದ ಭಗವಂತನು ಕೂಡಲೇ ಅಂತರ್ಧಾನನಾಗಿದ್ದಾನೆ. ನಂತರ ದೇವತೆಗಳು ದಧೀಚಿ ಮುನಿಯ ಬಳಿ ಹೋಗಿ ಆತನ ದೇಹವನ್ನು ಯಾಚಿಸಿದ್ದಾರೆ. ಜೊತೆಗೆ ಮುನಿಗೆ ಧರ್ಮೋಪದೇಶವನ್ನು ಮಾಡಿದ್ದಾರೆ. ದೇವತೆಗಳಿಂದ ಧರ್ಮೋಪದೇಶವನ್ನು ಪಡೆಯುತ್ತಲೇ ಮುನಿ ಸಂತುಷ್ಟನಾಗಿದ್ದಾನೆ. ಆನಂತರ ದೇವತೆಗಳ ಕೋರಿಕೆ ಮೇರೆಗೆ ಆತ್ಮವನ್ನು ಭಗವಚ್ಚರಣಾರವಿಂದಗಳಲ್ಲಿ ನಿಲ್ಲಿಸಿ ಪಂಚಭೌತಿಕ ದೇಹವನ್ನು ತ್ಯಜಿಸಿದ್ದಾನೆ. ನಂತರ ದಧೀಚಿ ಅಸ್ಥಿಗಳಿಂದ ವಿಶ್ವಕರ್ಮ ವಜ್ರಾಯುಧವನ್ನು ತಯಾರು ಮಾಡಿದ್ದಾನೆ. ಅದನ್ನು ಧರಿಸಿದ ಇಂದ್ರನು ತೇಜೋಮಯನಾಗಿದ್ದಾನೆ. ಆಗ ಇಂದ್ರನು ಐರಾವತವೆನ್ನುವ ತನ್ನ ಆನೇಯನ್ನೇರಿ ದೇವತೆಗಳಿಂದಾವೃತನಾಗಿ ವೃತ್ರಾಸುರನ ಮೇಲೆ ದಾಳಿಯಿಟ್ಟಿದ್ದಾನೆ. ಗಜಾರೂಢನಾಗಿ ದಂಡೆತ್ತಿದ ಇಂದ್ರನು ಮೂರು ಲೋಕಗಳಿಗೂ ಆನಂದವಿತ್ತಿದ್ದಾನೆ. ಈ ರೀತಿಯಾಗಿ ದೇವದಾನವರ ಮಧ್ಯ ನರ್ಮದಾನದಿ ತೀರದಲ್ಲಿ ಭೀಕರವಾದ ಯುದ್ಧವು ಆರಂಭಗೊಂಡಿದೆ. ಸಕಲ ದೇವತಾ ಪರಿವೃತ್ತನಾದ ಇಂದ್ರನು ವಜ್ರಾಯುಧವನ್ನು ಪ್ರಹಾರ ಮಾಡುತ್ತಾ ದಾನವರಿಗೆ ದುಃಸಾಹಸನಾಗಿ ಕಂಡಿದ್ದಾನೆ. ಆದರೂ ಅವರು ಧೈರ್ಯದಿಂದ ದೇವತೆಗಳ ಮೇಲೆ ತಮ್ಮ ಆಯುಧಗಳ ಮಳೆಯನ್ನೇ ಕರೆದಿದ್ದಾರೆ. ಇದರಿಂದ ಅಸುರರ ಯುದ್ಧಾವೇಶ ನಶಿಸಿದೆ. ಅವರು ತಮ್ಮ ನಾಯಕನನ್ನು ತೊರೆದು ಓಡಿಹೋಗಲು ಸಿದ್ಧರಾಗಿದ್ದಾರೆ. ಇದನ್ನು ಕಂಡ ವೃತ್ರಾಸುರನು ಅವರನ್ನು ಕಂಡು ಹೀಗೆ ನುಡಿದ್ದಾನೆ.

"ಅಸುರವೀರರೇ! ನನ್ನ ಮಾತು ಕೇಳಿ. ರಣಭೂಮಿಯನ್ನು ಬಿಟ್ಟು ಹೋಗದಿರಿ. ಮರಣವೆನ್ನುವುದು ಈ ಲೋಕದಲ್ಲಿ ನಿಶ್ಚಿಯವಾದುದು. ಆದ್ದರಿಂದ ಯಶೋವಂತನಾದ ಮರಣಕ್ಕಾಗಿ ಪ್ರಯತ್ನ ಮಾಡಿರಿ. ಯೋಗಸಾಧನೆಯಲ್ಲಿ ಪ್ರಾಣವನ್ನು ನಿಗ್ರಹಿಸಿ ಭಗವಚ್ಚಿಂತನೆಯಲ್ಲಿರುವವನಾಗಿದ್ದು ಮರಣಿಸುವುದು, ಶತ್ರುವಿಗೆ ಬೆನ್ನು ತೋರಿಸದೇ ಯುದ್ಧ ಭೂಮಿಯಲ್ಲಿ ವೀರಗತಿ ಹೊಂದುವುದು ಮಹೋನ್ನತವಾದ ಮರಣಗಳೆಂದು ಶಾಸ್ತ್ರಗಳು ಹೇಳುತ್ತವೆ."

ವೃತ್ರಾಸುರನ ಮಾತುಗಳನ್ನು ಅಸುರರು ಕೇಳಲಿಲ್ಲ. ರಣರಂಗದಿಂದ ಅವರು ಪಲಾಯನ ಮಾಡಿದ್ದಾರೆ. ದೇವತೆಗಳು ಅವರನ್ನು ಹಿಡಿದು ತಂದು ಹಿಂಸಿಸಿದ್ದಾರೆ. ಅದನ್ನು ಕಂಡು ವೃತ್ರಾಸುರನು ವ್ಯಗ್ರನಾಗಿದ್ದಾನೆ. ಭೀಕರವಾಗಿ ಗರ್ಜಿಸುತ್ತಾ ದೇವತೆಗಳನ್ನು ಎದುರು ಗೊಂಡಿದ್ದಾನೆ. ಅಸುರನ ಗರ್ಜನೆಗೆ ದೇವತೆಗಳು ತತ್ತರಿಸಿ ಹೋಗಿದ್ದಾರೆ. ಆಗ ವೃತ್ರಾಸುರನು ಮತ್ತು ಇಂದ್ರನ ಮಧ್ಯೆ ಭೀಕರವಾದ ಯುದ್ಧ ವೇರ್ಪಟ್ಟಿದೆ. ಅಸುರನು ದೇವತೆಗಳನ್ನು ತನ್ನ ಪಾದಗಳ ಕೆಳಗೆ ನಲುಗಿಸಿ ನಡೆದು ಮುಂದೆ ಹೋಗಿದ್ದಾನೆ. ಆದರೆ ಇಂದ್ರನು ವಜ್ರಾಯುಧದಿಂದ ವೃತ್ರಾಸುರನ ಎರಡು ಭುಜಗಳನ್ನು ಖಂಡಿಸಿದ್ದಾನೆ. ಎರಡು ಭುಜಗಳು ಸೀಳಿ ಕೆಳಕ್ಕುರುಳಿದ ವೃತ್ರಾಸುರನು ರೆಕ್ಕೆ ಕತ್ತರಿಸಿದ ಪರ್ವತದಂತೆ ಕಾಣಿಸಿದ್ದಾನೆ. ಆದರೂ ಆ ಅಸುರನು ದೊಡ್ಡದಾಗಿ ಬಾಯಿ ತೆರೆದು ಐರಾವತದೊಂದಿಗೆ ಇಂದ್ರನನ್ನು ನುಂಗಿ ಹಾಕಿದ್ದಾನೆ. ಅದನ್ನು ಕಂಡ ಬ್ರಹ್ಮಾದಿ ದೇವತೆಗಳು ಹಾಹಾಕಾರ ಮಾಡಿದ್ದಾರೆ. ನಾರಾಯಣಕವಚ ರಕ್ಷಿತವಾದ ಇಂದ್ರನು ವೃತ್ರಾಸುರನಿಂದ ನುಂಗಲ್ಪಟ್ಟರೂ ಮರಣಿಸಲಿಲ್ಲ. ಆತನು ವೃತ್ರಾಸುರನ ಹೊಟ್ಟೆಯಿಂದ ಕೈಯಲ್ಲಿದ್ದ ವಜ್ರಾ ಯುಧದಿಂದ ಬಗೆದು ಹೊರಗೆ ಬಂದಿದ್ದಾನೆ. ಹೊರಗೆ ಬರುತ್ತಲೆ ಆತನು ವೃತ್ರಾಸುರನ ಶಿರವನ್ನು ಖಂಡಿಸಿದ್ದಾನೆ. ಆದರೆ ವೃತ್ರಾಸುರನ ಶಿರಸ್ಸನ್ನು ಛೇಧಿಸಲು ಇಂದ್ರನಿಗೆ ಒಂದು ವರ್ಷ ಹಿಡಿದಿದೆ. ವೃತ್ರಾಸುರನ ಶಿರವು ನೆಲದ ಮೇಲೆ ಬೀಳುತ್ತಲೇ ದೇವತೆಗಳು ಹರ್ಷಗೊಂಡಿದ್ದಾರೆ. ಪುಷ್ಪವೃಷ್ಟಿ ಆಕಾಶದಿಂದ ಸ್ಫುರಿಸಿವೆ. ಆ ವೇಳೆಯಲ್ಲಿ ವೃತ್ರಾಸುರನ ದೇಹದಿಂದ ಆತ್ಮ ಜ್ಯೋತಿ ಹೊರಗೆ ಹೊಮ್ಮಿ ಎಲ್ಲರೂ ನೋಡುತ್ತಲೇ ಭಗವದ್ಧಾಮದೆಡೆಗೆ ಪ್ರಯಾಣಿಸಿದೆ. ಈ ರೀತಿಯಾಗಿ ಆ ಆತ್ಮ ದಿವ್ಯಲೋಕಕ್ಕೆ ಸೇರಿ ಸಂಕರ್ಷಣ ಭಗವಂತನ ಪಾದರಕ್ಷೆಯಾಯಿತು.

ಋಷಿಗಳ ವಚನದಂತೆ ಇಂದ್ರನು ವೃತ್ರಾಸುರನನ್ನು ವಧಿಸಿದ್ದಾನೆ. ಆದರೆ ಕೂಡಲೇ ಇಂದ್ರನನ್ನು ಬ್ರಹ್ಮಹತ್ಯಾ ದೋಷ ಬೆನ್ನಟ್ಟಿದೆ. ಅದು ಒಂದು ಚಂಡಾಲ ಸ್ತ್ರೀಯ ರೂಪದಲ್ಲಿ ಆತನನ್ನು ಸಮೀಪಿಸಿದೆ. ಇಂದ್ರನು ಸುಮಾರಾಗಿ ಭಾಗ್ಯ ಹೀನನಾಗಿದ್ದಾನೆ. ಇಂದ್ರನು ಪದ್ಮನಾಳದಲ್ಲಿರುವ ವೇಳೆಯಲ್ಲಿ ಜ್ಞಾನತಪೋಸಂಪನ್ನನಾದ ನಹುಷನು ಸ್ವರ್ಗ ರಾಜ್ಯವನ್ನು ಪಾಲಿಸಿದ್ದಾನೆ. ಮಾನಸ ಸರೋವರದಲ್ಲಿರುವ ಕಮಲಗಳಲ್ಲಿ ವಾಸಿಸುವುದು ವಿಷ್ಣು ಪತ್ನಿಯಾದ ಲಕ್ಷ್ಮೀದೇವಿಯಿಂದ ರಕ್ಷಿಸಲ್ಪಟ್ಟ ಕಾರಣದಿಂದ ಇಂದ್ರನ ಮೇಲಿನ ಪಾಪ ಪ್ರಭಾವ ಕಾಣಿಸಿಗಲಿಲ್ಲ. ವಿಷ್ಣುವನ್ನೇ ಧ್ಯಾನಿಸಿದ ಇಂದ್ರನು ಕಡೆಗೆ ಸರ್ವಪಾಪವಿಮುಕ್ತನಾಗಿದ್ದಾನೆ. ನಂತರ ಬ್ರಾಹ್ಮಣರು ತಿರುಗಿ ಆತನನ್ನು ಸ್ವರ್ಗಕ್ಕೆ ಕರೆಯಿಸಿ ಯಥಾಸ್ಥಾನವನ್ನು ನೀಡಿದ್ದಾರೆ.

ವೃತ್ರಾಸುರ ಸಂಹಾರದ ಕಥೆಯನ್ನೂ, ಇಂದ್ರನು ಪಾಪ ವಿಮೋಚನೆಯಾದ ವಿಧಾನವನ್ನು ಕೇಳುವುದರ ಮೂಲಕ ಮನುಷ್ಯನು ಸಕಲ ಪಾಪವಿಮುಕ್ತನಾಗುತ್ತಾನೆ. ಆದ್ದರಿಂದಲೇ ಪಂಡಿತರು ಈ ಉಪಾಖ್ಯಾನವನ್ನು ಯಾವಾಗಲೂ ಪಠಿಸುತ್ತಾರೆ. ಇದರಿಂದ ಮನುಷ್ಯನಿಗೆ ಇಂದ್ರಿಯ ಪಟುತ್ವವು, ಯಶೋವೃದ್ಧಿ, ಐಶ್ವರ್ಯ ವೃದ್ಧಿಯುಂಟಾಗುತ್ತವೆ. ಪಾಪವಿಮೋಚನೆ, ಶತ್ರುಜಯವು, ಆಯುವೃದ್ಧಿಯೂ ಸಹ ಉಂಟಾಗುತ್ತದೆ.



# ದಾನದ ಗರಿಮೆ

– ಬಿ. ಆರ್. ಶ್ರೀಕಂಠಯ್ಯ

9449457684

ದಾನ - ಎಂದರೆ ಕೊಡುಗೆ, ದಾನಿ - ದಾನ ಮಾಡುವವನು,ಪರಿಗ್ರಹ - ಸ್ವೀಕರಿಸುವುದು. ದಾನಗಳು ಅನೇಕವಿವೆ. ವಿವಿಧ ಕಾರ್ಯಗಳಲ್ಲಿ ದಾನ ಕೊಡುವ ಪದ್ಧತಿಗಳಿವೆ. ಸತ್ಪಾತ್ರನಿಗೆ ದಾನ ಕೊಡಬೇಕು. ಸಜ್ಜನ ಮತ್ತು ಸದ್ಭಾವನೆಯಿಂದ ಕೂಡಿದವನಾಗಿರಬೇಕು. ವಿದ್ಯಾದಾನ, ಅನ್ನದಾನ, ವಸ್ತ್ರದಾನ ಇತ್ಯಾದಿ.

ದಾನಮಾಡುವನೆಂದು ಸಂಕಲ್ಪಮಾಡಿದ ಮೇಲೆ ಕೊಡಬೇಕು. ದಾನದಿಂದ ಯಾವ - ಯಾವ ಫಲಸಿಗುತ್ತದೆ ಎಂಬುದನ್ನು ನಮಗೆ ಶಾಸ್ತ್ರಗಳು ತಿಳಿಸುತ್ತವೆ.ಕೆಲವು ವರದಾನಗಳು - ಗೋ, ಭೂ, ಹಿರಣ್ಯ ಆಜ್ಯ, ವಸ್ತ್ರ, ಧಾನ್ಯ, ಬೆಲ್ಲ (ಗುಡ), ಬೆಳ್ಳಿ, ಉಪ್ಪು, ತಿಲ ಇತ್ಯಾದಿ. ದಾನ ಕೊಟ್ಟಷ್ಟು, ಬಾವಿಯಲ್ಲಿ ಹೇಗೆ ನೀರು ತೆಗೆದಷ್ಟು ಬರುತ್ತದೆಯೋ, ಆ ರೀತಿ ದಾನ ಕೊಟ್ಟಷ್ಟು ಉತ್ಪತ್ತಿಯಾಗುತ್ತದೆ.

ಯಾವ ಕರ್ಮ ಮಾಡಿದರೂ ಅದರ ಫಲ ಬರುತ್ತದೆ. ಎಂಬುದು ಶಾಸ್ತ್ರಾಧಾರ, ಎಲ್ಲರ ಅನುಭವ ಮತ್ತು ನಂಬಿಕೆ. ಪೂರ್ವಜನ್ಮಕರ್ಮದ ಪರಿಣಾಮವಾಗಿ ವಿವಿಧ ಯೋನಿಗಳಲ್ಲಿ ಜನ್ಮವಾಗುತ್ತದೆ. ನಾವು ಹಿಂದಿನ ಜನ್ಮದಲ್ಲಿ ದಾನಗಳನ್ನು ಮಾಡಿದ್ದರೆ ಅದರ ಫಲ ಈ ಜನ್ಮದಲ್ಲಿ ಬರುತ್ತದೆ. ಎಲ್ಲರಿಗೂ ತಿಳಿದ ಹಾಗೆ ಬಾಲ ಬ್ರಹ್ಮಚಾರಿಯಾದ ಶ್ರೀ ಶಂಕರರನು ಒಬ್ಬ ಬ್ರಾಹ್ಮಣ ಮನೆಯ ಮುಂದೆ "ಭವತಿ ಭಿಕ್ಷಾಂ ದೇಹಿ" ಎಂದು ಕೇಳಿದಾಗ, ಆ ಮನೆಯ ಒಡತಿ ಎಷ್ಟು ಹೊತ್ತಾದರೂ ಭಿಕ್ಷೆ ಹಾಕಲು ಆಚೆ ಬರುವುದಿಲ್ಲ. ಅದು ಬಡ ಬ್ರಾಹ್ಮಣನ ಮನೆ, ಮನೆಯಲ್ಲಿ ಏನು ಇರುವುದಿಲ್ಲ, ಮನೆಯಲ್ಲಾ ಹುಡುಕಿ, ಕೊನೆಗೆ ಒಂದು ಒಣಗಿದ "ನೆಲ್ಲಿಕಾಯಿ"ಯನ್ನು ಬ್ರಹ್ಮಚಾರಿಯ ಪಾತ್ರೆಗೆ ಹಾಕುತ್ತಾಳೆ. ಈಕೆಯ ಪರಿಸ್ಥಿತಿಯನ್ನು ಗ್ರಹಿಸಿದ ಬಾಲಕ ಶಂಕರನು ಬಹಳ ಕನಿಕರದಿಂದ "ಲಕ್ಷ್ಮಿ" ಯನ್ನು ಕುರಿತು ಪ್ರಾರ್ಥನೆ ಮಾಡುತ್ತಾನೆ. ಇದೇ ಪ್ರಸಿದ್ಧವಾದ "ಕನಕಧಾರ" ಸ್ತೋತ್ರ. ಆಗ ಲಕ್ಷ್ಮಿಯು ಪ್ರತ್ಯಕ್ಷವಾಗಿ ಹೇಳುತ್ತಾಳೆ, ಈ ಗೃಹಿಣಿ ತನ್ನ ಪೂರ್ವಜನ್ಮದಲ್ಲಿ ಯಾವ ದಾನ ಧರ್ಮಗಳನ್ನು ಮಾಡಿಲ್ಲ, ಆದರಿಂದ ಈ ರೀತಿ ದಾರಿದ್ರ್ಯ ಉಂಟಾಗಿದೆ. ಅದಕ್ಕೆ ಶಂಕರನು ಹೋದ ಜನ್ಮದ ಕಥೆ ಬಿಡು,ಈಗ ಭಕ್ತಿ ಮತ್ತು ಶ್ರದ್ಧೆಯಿಂದ ಮಾಡಿದ ದಾನಕ್ಕೆ ಫಲ ಕೊಡು ಎಂದು ಕೇಳಿದಾಗ, ಆಗ ಲಕ್ಷ್ಮಿಯು "ಬಂಗಾರದ ನೆಲ್ಲಿಕಾಯಿ"ಯ ಮಳೆಯನ್ನೇ ಸುರಿಸುತ್ತಾಳೆ. ಈಗಲೂ ಆ ಗೃಹಣಿಯ ಪೂರ್ವಿಕರ ಮನೆಯನ್ನು (ಸ್ವರ್ಣತ್ತಿಲಂ) ನಾವು ಶಂಕರರ ಜನ್ಮ ಸ್ಥಳವಾದ ಕಾಲಡಿಯಲ್ಲಿ ಕಾಣಬಹುದು. ಇದರಿಂದ,ನಮಗೆ ಗೋಚರವಾಗುತ್ತದೆ.ನಾವು ಭಕ್ತಿ ಶ್ರದ್ಧೆಯಿಂದ ದಾನ ಮಾಡಿದರೆ ಅದರ ಪ್ರತಿಫಲ ಬಂದೇ ಬರುತ್ತದೆ.ವಿವಿಧ ಸಂದರ್ಭಗಳಲ್ಲಿ, ಹಲವಾರು ರೀತಿಯ ದಾನವನ್ನು ಮಾಡುತ್ತಾರೆ. ಹಿಂದಿನಿಂದಲೂ ದಾನ ಮತ್ತು ದಾನಿಗಳ ಬಗ್ಗೆ ನಮಗೆ ತಿಳಿದಿದೆ. ಕರ್ಣಬಲಿ ಇನ್ನೂ ಅನೇಕರ ಹೆಸರನ್ನು ನಾವು ಸ್ಮರಿಸಬಹುದು. ಕೆಲವರು ಹೆಸರಿಗಾಗಿ, ಪ್ರಶಂಸೆ ಮತ್ತು ಪ್ರಚಾರಕ್ಕಾಗಿ ದಾನ ಮಾಡುತ್ತಾರೆ.ಇಂತಹ ದಾನಗಳು ಪ್ರಯೋಜನವಿಲ್ಲ ಮತ್ತು ಫಲಕೊಡುವುದಿಲ್ಲ. ದಾನಗಳ ಬಗ್ಗೆ ಅನೇಕರು ಹೇಳಿದ್ದಾರೆ ಮತ್ತು ಸುಭಾಷಿತಗಳಿವೆ.

ಹಸ್ತಸ್ಯ ಭೂಷಣಂ ದಾನಂ ಸತ್ಯಂ ಕಂಠಸ್ಯ ಭೂಷಣಮ್ ।
ಶ್ರೋತ್ರಸ್ಯ ಭೂಷಣಂ ಶಾಸ್ತ್ರಂ ಭೂಶಣೈಃ ಕಿಂ ಪ್ರಯೋಜನಮ್॥

ದಾನವೇ ಕೈಗಳಿಗೆ ಆಭರಣ, ಸತ್ಯವಚನವೇ ಕಠಕ್ಕೆ ಆಭರಣ, ಸದ್ವಿಚಾರ ಶ್ರವಣವೇ ಕಿವಿಗಳಿಗೆ ಆಭರಣ, ಇತರ ಆಭರಣವೆಲ್ಲ ಬರೀ ವಿಡಂಬನ

ಕಿಂ ದಾತುರಖಿಲೈರ್ದೋಷೈಃ ಕಿಂ ಲುಬ್ಧಸ್ಯ ಖಿಲೈ ರ್ಗುಣೈಃ ।
ನ ಲೋಬಾದಧಿಕೋ ದೋಷೋನ ದಾನಾದ ಧಿಕೋ ಗುಣಃ ॥

ದಾನಿಯಲ್ಲಿ ಎಷ್ಟು ದೋಷಗಳಿದ್ದರೆ ತಾನೆ ಏನು? ಲೋಭಿಯಲ್ಲಿ ಎಷ್ಟು ಗುಣಗಳಿದ್ದರೆ ತಾನೇ ಏನು? ದಾನಕ್ಕಿಂತ ದೊಡ್ಡ ಗುಣವಿಲ್ಲ.ಲೋಭಕ್ಕಿಂತ ದೊಡ್ಡ ದೋಷವಿಲ್ಲ.

ಸರ್ವಜ್ಞ ತ್ರಿಪದಿಯಲ್ಲಿರುವ ವಚನಗಳು ಸಾಮಾನ್ಯರಿಗೆ ಅನೇಕ ಉಪದೇಶಗಳನ್ನು ಕೊಡುತ್ತವೆ. ಅದರಲ್ಲಿ ದಾನದ ಬಗ್ಗೆ "ಸರ್ವಜ್ಞ" ಈ ರೀತಿ ಹೇಳಿದ್ದಾನೆ. ಇದರ ಸಾಮಾನ್ಯ ಅರ್ಥ ಎಲ್ಲರಿಗೂ ತಿಳಿದಿದೆ.

ಸಿರಿಬಂದ ಕಾಲಕ್ಕೆ ಕರೆದು ದಾನವ ಮಾಡು
ಪರಿಣಾಮವಕ್ಕು ಪದವಕ್ಕು, ಕೈಲಾಸ
ನೆರೆಮನೆಯು ಆಕ್ಕು ಸರ್ವಜ್ಞ.

ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಂಗೆ
ಕೊಟ್ಟಿದ್ದು ಹೋಯಿತೆನಬೇಡ ಮುಂದಕ್ಕೆ
ಕಟ್ಟಿಹುದು ಬುತ್ತಿ ಸರ್ವಜ್ಞ.

ಆಡದೆ ಕೊಡುವವನು ರೂಢಿಯೊಳಗುತ್ತಮನು
ಆಡಿ ಕೊಡುವುವನು ಮಧ್ಯಮನಧಮ ತಾ -
ನಾಡಿ ಕೊಡದವನು ಸರ್ವಜ್ಞ

ಇದೇ ರೀತಿ ಒಂದು ಸುಭಾಷಿತವನ್ನು ನಾನು ಓದಿದ್ದೇನೆ.

ಕೃಪಣೇನ ನಮೋ ದಾತ ನ ಭೂತೋ ನ ಭವಿಷ್ಯತಿ।
ಅಸ್ಪೃಶನ್ನೇವ ವಿತ್ತಾನಿ ಯಃ ಪರೇಭ್ಯಂ ಪ್ರಯಚ್ಛತಿ.

ಈ ಭೂಮಿಯಲ್ಲಿ ಜಿಪುಣನಿಗೆ ಸಮಾನನಾದ ದಾನಿಯು ಹಿಂದೆಯೂ ಇರಲಿಲ್ಲ. ಮುಂದೆಯೂ ಇರುವುದಿಲ್ಲ, ಏಕೆಂದರೆ ಇತರ ದಾನಿಗಳು ತಾವು ಸಂಪಾದಿಸಿದ ಹಣವನ್ನು ಕೈಯಿಂದ ಮುಟ್ಟಿ ಇತರರಿಗೆ ಕೊಡುತ್ತಾರೆ. ಆದರೆ ಜಿಪುಣನು ಹಾಗಲ್ಲ ತಾನು ಗಳಿಸಿದ ಸಂಪತ್ತನ್ನು ತಾನು ಸ್ವಲ್ಪವು ಮುಟ್ಟದೆ. ಪರರಿಗೆ ಒಪ್ಪಿಸಿ ಬಿಡುತ್ತಾನೆ. ಅಂದರೆ ಜಿಪುಣನು ಕೇವಲ ಸಂಪಾದನೆಯನ್ನು ಮಾತ್ರವೇ ಮಾಡುತ್ತಾನೆಯೋ ಹೊರತು ತಾನು ಸಂಪಾದಿಸಿದ ಸಂಪತ್ತನ್ನು ತನಗಾಗಿ ಎಂದಿಗೂ ಉಪಯೋಗಿಸುವುದಿಲ್ಲ ಎಂದು ವ್ಯಂಗವಾಗಿ ಹೇಳುತ್ತಾರೆ. ಇಂದಿನ ದಿನಗಳಲ್ಲಿ, ನಾವು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಕಾಣುತ್ತೇವೆ. ಯಾವ - ಯಾವ ರೀತಿಯಲ್ಲಿ ತಾವು ಸಂಗ್ರಹಣೆ ಮಾಡಿದ ಧನವನ್ನು ಮುಚ್ಚಿಡುತ್ತಾರೆ. ಇಲ್ಲಿ ಹೆದರಿಕೆ, ಎಲ್ಲರಿಗೂ ತಿಳಿದಿದೆ, ವಿವರಣೆ ಬೇಕಿಲ್ಲ. ಇದರಿಂದ ಮುಚ್ಚಿಟ್ಟ ಹಣದ ಮೇಲೆ ಇತರರ ಕಣ್ಣು ಬಿದ್ದು ಅದು ಬೇರೆಯವರ ಪಾಲಾಗುತ್ತದೆ. ದಾನಗಳ ಬಗ್ಗೆ, ನಾವು ಮಹಾಭಾರತ, ರಾಮಾಯಣದಲ್ಲಿ ಕಾಣಬಹುದು. ಇನ್ನು ಭಗವದ್ಗೀತೆಯಲ್ಲಿ "ಸಾತ್ವಿಕ, ರಾಜಸ, ಮತ್ತು ತಾಮಸ" ದಾನಗಳ ಬಗ್ಗೆ ಶ್ರೀ ಕೃಷ್ಣ ಪರಮಾತ್ಮನು ನಮಗಾಗಿ ತಿಳಿಸಿದ್ದಾನೆ.

- ದಾತವ್ಯಮಿತಿ ಯದ್ದಾನಂ ದೀಯತೇಽ ನುಪಕಾರಿಣೇ। ದೇಶೇ ಕಾಲೇ ಚ ಪಾತ್ರೇ ಚ ತದ್ದಾನಂ ಸಾತ್ವಿಕಂ ಸ್ಮೃತಮ್, (೧೭/೨೦)

ದಾನ ಕೊಡುವುದೂ ಸಹ ಕರ್ತವ್ಯ ಎಂಬ ಉದ್ದೇಷ್ಯದಿಂದ, ಯಾವ ದಾನವು ದೇಶ, ಕಾಲ, ಮತ್ತು ಪಾತ್ರನು ಒದಗಿ ಬಂದಾಗ ಪ್ರತ್ಯುಪಕಾರ ಮಾಡಲು ಸಮರ್ಥರಲ್ಲದವರಿಗೆ ಕೊಡಲಾಗುವುದೋ ಆ ದಾನ "ಸಾತ್ವಿಕ" ದಾನವೆಂದು ಹೇಳಲ್ಪಟ್ಟಿದೆ.

- ಯತ್ತು ಪ್ರತ್ಯುಪಕಾರ್ಥಂ ಫಲಮುದ್ದಿಶ್ಯ ವಾ ಪುನಃ। ದೀಯತೇ ಚ ಪರಿಕ್ಲಿಷ್ಟಂ ತದ್ದಾನಂ ರಾಜಸಂ ಸ್ಮೃತಮ್ (೧೭/೨೧)

ಯಾವ ದಾನವು ಸಂಕಟಪಡುತ್ತಾ, ಪುನಃ ಪ್ರತ್ಯುಪಕಾರದ ಪ್ರಯೋಜನವನ್ನು ಬಯಸಿ ಅಥವಾ ಫಲವನ್ನು ಉದ್ದೇಷದಲ್ಲಿಟ್ಟುಕೊಂಡು ಕೊಡಲಾಗುವುದೋ ಆ ದಾನವು "ರಾಜಸ" ವೆಂದು ಹೇಳಲ್ಪಟ್ಟಿದೆ;

- ಆದೇಶಕಾಲೇ ಯದ್ದಾನಂಅಪಾತ್ರೇಭ್ಯಶ್ಚ ದೀಯತೇ ಅಸತ್ಕೃತಮವಜ್ಞಾತಂ ತತ್ತಾಮಸಮುದಾಹೃತಮ್ (೧೭/೨೨)

ಯಾವ ದಾನವು ಸತ್ಕಾರಮಾಡದೇ ತಿರಸ್ಕಾರ ಪೂರ್ವಕ ಅಯೋಗ್ಯನಾದ ಮತ್ತು ಪಾತ್ರರಲ್ಲದವನಿಗೆ ಕೊಡಲಾಗುವುದೋ ಅದು "ತಾಮಸ" ವೆಂದು ಹೇಳಲ್ಪಟ್ಟಿದೆ.

ಇನ್ನು ತೈತೀರೀಯೋಪನಿಷತ್ತಿನ "ಶೀಕ್ಷಾವಲ್ಲಿ" ಯಲ್ಲಿ, ಗುರುಕುಲದಲ್ಲಿ ವಿದ್ಯಾಭ್ಯಾಸ ಮುಗಿಸಿದ ಶಿಷ್ಯನನ್ನು ಬೀಳ್ಕೊಡುವಾಗ (ಕಾನ್ವೋಕೇಷನ್ ಓತ್) ಗುರುವು ಕೆಲವು ನಿಯಮಗಳನ್ನು ಪಾಲಿಸಬೇಕೆಂದು ತನ್ನ ಶಿಷ್ಯನಿಗೆ ಉಪದೇಶಿಸುತ್ತಾನೆ. (ಶಿಷ್ಯಾನುಷಾಸನಮ್) ಆ ಅನುವಾಕದಲ್ಲಿ, ದಾನದ ಬಗ್ಗೆ -

"ವೇದಮನೂಚ್ಯಾಚಾರ್ಯೋ ನ್ತೇವಾಸಿನಮನುಶಾಸ್ತಿ ... ಯೇ ಕೇ ಚಾಸ್ಮಚ್ಛ್ರೇಯಾಗಂಸೋ ಬ್ರಾಹ್ಮಣಾಃ। ತೇಷಾಂ ತ್ವಯಾ ಸನೇ ಪ್ರಶ್ವಸಿತವ್ಯಮ್। ಶ್ರದ್ಧಯಾ ದೇಯಮ್ ಅಶ್ರದ್ಧಯೊ ಽದೇಯಮ್।ಶ್ರಿಯಾ ದೇಯಮ್। ಭಿಯಾ

ದೇಯಮ್। ಸಂವಿದಾ ದೇಯಮ್।... ಏಷ ಆದೇಶಃ । ಏಷ ಉಪದೇಷಃ।ಏಷಾ ವೇದೋಪನಿಷಥ್। ಏತದನು ಶಾಸನಮ್।ಏವಮುಪಾಸಿತ್ವ್ಯಮ್। ಏವಮುಚೈತದು ಪಾಸ್ಯಮ್।।"

ಯಾವ ಯಾವ ಸಜ್ಜನರು ನಮಗಿಂತ ಉತ್ತಮರೋ, ಅವರಿಗೆ ಆಸನವನ್ನು ಕೊಟ್ಟು, ನೀನು ಆದರ ಮಾಡಬೇಕು. ಶ್ರದ್ಧೆಯಿಂದ ಕೊಡಬೇಕು. ಅಶ್ರದ್ಧೆಯಿಂದ ಕೊಡಬಾರದು. ನಾಚಿಕೆಯಿಂದ ಕೊಡಬೇಕು. (ನಾನು ಯಾವ ದಾನವನ್ನು ಮಾಡಲಿಲ್ಲವಲ್ಲ ಎಂಬ ನಾಚಿಕೆಯಿಂದ). ದಾನವೆಂಬ ನಿತ್ಯ ಕರ್ಮ ಮಾಡಲಿಲ್ಲವೆಂಬ ಅಂಜಿಕೆಯಿಂದ. ತನ್ನ ಸಂಪತ್ತಿಗೆ ತಕ್ಕಂತೆ, ಸಾತ್ವಿಕ ದಾನ ಕೊಡಬೇಕು. ಹೆದರಿಕೆಯಿಂದ ಕೊಡಬೇಕು. ತಿಳಿವಳಿಯಿಂದ ಕೊಡಬೇಕು.ದಾನ ಅಪಾತ್ರನಿಗೆ ಕೊಡಬಾರದು. ಕೆಲವರು ದಾನ ಪತ್ರವನ್ನು ಬರೆದಿಡುತ್ತಾರೆ. (ವಿಲ್ಲ್). ಪೂಜ್ಯ "ವಿನೋಭ" ಪ್ರಾರಂಭಿಸಿದ ಭೂದಾನ ಯಜ್ಞ ಹೇಗಿತ್ತು ಮತ್ತು ಇಂದಿನ ಭೂದಾನ ಯಜ್ಞ ಹೇಗಿದೆ ಎಂದು ಕೆಲವರಿಗೆ ತಿಳಿದಿದೆ. ದಾನದ ಮಹಿಮೆಯ ಬಗ್ಗೆ ಅನೇಕರು ಹೇಳಿದ್ದಾರೆ. ಸರ್ವಜ್ಞ, ದಾಸರು ಮತ್ತು ಅನೇಕ ಸುಭಾಷಿತಗಳನ್ನು ನಾವು ನೋಡಬಹುದು.

ದಾನವನ್ನು ಫಲ ಅಪೇಕ್ಷಣೆ ಇಲ್ಲದೆ ಮಾಡುವುದು. ನಾವು ವಿವಿಧ ರೀತಿಯ ದಾನಗಳನ್ನು ಅಯಾಯ ಸಂದರ್ಭಗಳಲ್ಲಿ ಕೊಡುತ್ತೇವೆ. ಗ್ರಹದೋಷ ಕಾಲದಲ್ಲಿ, ಗ್ರಹ ದೋಷ ನಿವಾರಣೆಗಾಗಿ ನವಗ್ರಹಪೂಜೆಯನ್ನು ಮಾಡಿ ದಾನ ಕೊಡುತ್ತೇವೆ. ಕಲಶಗಳ ಪೂಜೆ, ಇತ್ಯಾದಿ ಮಾಡುತ್ತೇವೆ. ಈಗಿನ ಪರಿಸ್ಥಿತಿಯಲ್ಲಿ, ಕೆಲವು ಕಡೆ ನೋಡಿದ್ದೇನೆ.ಅದು "ರೋಟೇಶನ್",ಯಾರಿಗೂ ದಾನ ಕೊಡುವುದಿಲ್ಲ. ನವಗ್ರಹ ಪೊಟ್ಟಣಗಳಿರುತ್ತವೆ. ಒಳಗೆ ಧಾನ್ಯ ಹೇಗಿರುತ್ತದೆ ಎಂಬುದು ತಿಳಿಯುವುದಿಲ್ಲ. ಹಾಗೆ ಅರಶಿನ, ಕುಂಕುಮ ಪೊಟ್ಟಣ, ಅಡಿಕೆಯ ಪೊಟ್ಟಣ ಇತ್ಯಾದಿಯನ್ನು ಕೊಡುತ್ತಾರೆ. ಪೂಜೆ ಮಾಡಿದೆವು ದಾನ ಕೊಟ್ಟೆವು, ಏನು ಪ್ರಯೋಜನವಾಗಲಿಲ್ಲ. ಎಂದು ಹೇಳುತ್ತಾರೆ. ಏಕೆ ಹೀಗಾಯಿತು ಎಂದು ಯೋಚಿಸಿದರೆ, ನಾವು ದಾನ ಕೊಟ್ಟ ವಸ್ತುಗಳು ಯೋಗ್ಯವಾಗಿರಲಿಲ್ಲ, ಇದರಿಂದ, ನಾವು ಶ್ರದ್ಧೆಯಿಂದ ಒಳ್ಳೆಯ ವಸ್ತುಗಳನ್ನು ದಾನ ಮಾಡಿದರೆ, ಅದರ ಫಲ ಬಂದೇ ಬರುತ್ತದೆ. ಈ ಉಪಯೋಗಕ್ಕೆ ಬರದ ದಾನದ ಪೊಟ್ಟಣಗಳನ್ನು ಬೇಸರದಿಂದ ಕಸಕ್ಕೆ ಹಾಕುತ್ತಾರೆ. ಹಾಗೂ, ಪೂಜೆಗಾಗಿ ತನ್ನ ಮನೆಯಲ್ಲಿ ಬೆಳೆದ ಹೂ ಅಥವಾ ಹಣಕೊಟ್ಟು ತಂದ ಹೂವನ್ನು ಉಪಯೋಗಿಸಬೇಕು. ಆಗ ಅದರ ಫಲಬರುತ್ತದೆ. ಆದರೆ ಬೆಳಗಿನ ವೇಳೆ ಬೇರೆಯವರ ಮನೆಯ ಬೇಲಿಯಲ್ಲಿದ್ದ ಹೂವು ಪತ್ರೆಯನ್ನು ಕದ್ದು ತಂದು ಪೂಜೆ ಮಾಡಿದರೆ, ಅದರಿಂದ ಏನು ಪ್ರಯೋಜನವಿಲ್ಲ ಮತ್ತು ಫಲ ಕೊಡುವುದಿಲ್ಲ ಇದರಿಂದ ಪಾಪವೇ ಹೊರತು ಪುಣ್ಯವಲ್ಲ. ಏಕೆಂದರೆ, ಹೂವು ಬೆಳೆದ ಮನೆಯಾತ ಬೇಸರಪಟ್ಟು ಬಯ್ಯುತ್ತಾನೆ. ಪೂಜೆಗೆ ಮನೆಯಲ್ಲಿ ಬೆಳೆದ ಹೂವು ಉತ್ತಮ, ಬೇಡಿ ತಂದಿದ್ದು ಅಧಮ, ಕಂಡವರ ಮನೆಯಲ್ಲಿ ಕದ್ದು ತಂದಿದ್ದು ಮಹಾಪಾಪ.

ಉತ್ತಮಂ ಗೃಹ ಪುಷ್ಪಾಣಿ ಮಧ್ಯಮಂ ವನ ಪುಷ್ಪಕಂ ।
ಅಧಮಂ ಯಾಚಿತಂ ಪುಷ್ಪಂ ಚಾನ್ಯತೋ ನಿಷ್ಪ ಯೋಜನಂ।

ದಾನವನ್ನು ಮಾಡಬೇಕಾದರೆ, ಪತ್ನಿಯ ತನ್ನ ಅಭಿಮತ ಪೂರ್ವಕವಾಗಿ ಒಂದು ತೊಟ್ಟು ನೀರನ್ನು ಹಾಕುತ್ತಾಳೆ. ಆಗಲೆ ಆ ದಾನಕ್ಕೆ ಫಲ.ಯಾವ ದಾನವನ್ನು ಕೊಟ್ಟರು ಅದು ನನ್ನದಲ್ಲ, ದಾನ ತೆಗೆದುಕೊಳ್ಳುವವರದು ಎಂಬ ಭಾವನೆಯಿಂದ "ನಮಮ" ಎಂಬ ಭಾವನೆಯಿಂದ ಕೊಡಬೇಕು. ಆದರೆ "ಕನ್ಯಾದಾನ" ಕಾಲದಲ್ಲಿ "ನಮಮ" ಎಂದು ಹೇಳುವುದಿಲ್ಲ. ಇದಕ್ಕೆ ಕಾರಣ ಎಲ್ಲರಿಗೂ ತಿಳಿದಿದೆ.ಉಪಾಯನ ದಾನ - ವ್ರತ ಅಥವಾ ಪೂಜೆಗಳ ನಂತರ ಪೂಜೆ ಮಾಡಿಸಿದ ಪುರೋಹಿತನಿಗೆ ದಾನವನ್ನು ಕೊಡಬೇಕು. ಇದನ್ನು "ಉಪಾಯದಾನ"ವೆಂದು ಕರೆಯುತ್ತಾರೆ. "ಇದಂ ಉಪಾಯನದಾನಂ ಬ್ರಾಹ್ಮಣಾಯ.... (ಆಯಾಯ ವ್ರತದ ಪ್ರಕಾರ) ಸ್ವರೂಪಾಯ ತುಭ್ಯ ಮಹಂ ಕಾಮಯಮಾನಃ ಸಂಪ್ರದದೇ ನಮಮ ನಮಮ " ಇದರಿಂದ ಪೂಜೆಯ ಫಲ ದೊರೆಯುತ್ತದೆ.

"ಶ್ರೀ ಅನಂತಪದ್ಮನಾಭ " ವ್ರತಕಥೆಯಲ್ಲಿ ದಾನದ ಬಗ್ಗೆ ಬರುತ್ತದೆ. ಕೌಂಡಿನ್ಯನು ತಾನು ಅಹಂಕಾರದಿಂದ ಕಷ್ಟಗಳನ್ನು ಅನುಭವಿಸಬೇಕಾಗುತ್ತದೆ. ನಂತರ ತನ್ನ ತಪ್ಪಿನ ಅರಿವಾಗಿ, ಸ್ವಾಮಿಯಾದ ಅನಂತನನ್ನು ಹುಡುಕಿಕೊಂಡು ಹೋಗುವಾಗ, ಅನೇಕರನ್ನು ಕೇಳುತ್ತಾನೆ. ಅದರಲ್ಲಿ ೧) ಹೂವು, ಕಾಯಿ, ಹಣ್ಣುಗಳಿದ್ದ ಮಾವಿನ ಮರ , ಅಲ್ಲಿ ಯಾವ ಪಕ್ಷಿ ಅಥವಾ ಕ್ರಿಮಿಗಳು ಸಂಚಾರ ಮಾಡುತ್ತಿರಲಿಲ್ಲ. ೨) ಎಳೇ ಕರುವಿನೊಡನೆ ಕೂಡಿ ಕೊಂಡಿರುವ ಹಸೀ ಹುಲ್ಲಿನ ಮಧ್ಯೆ ಇದ್ದರು ಹುಲ್ಲನ್ನೂ ತಿನ್ನದೆ ಅಲ್ಲಿ ಇಲ್ಲಿ ತಿರುಗಾಡುತ್ತ ಇದ್ದ ಆಕಳು ; ೩) ಹಚ್ಚಗಿರುವ ಹುಲ್ಲಿನ್ನಲ್ಲಿ ನಿಂತಿರುವ ವೃಷಭನನ್ನು ನೋಡಿದನು. ಯಾರನ್ನು ಕೇಳಿದರು ತಾವು ಅನಂತಪದ್ಮನಾಭನನ್ನು ನೋಡಲಿಲ್ಲ ಎಂದು ಹೇಳುತ್ತಾರೆ. ಕೊನೆಗೆ ಅನಂತನ ದರ್ಶನವಾಗುತ್ತದೆ. ಆಗ ಕೌಂಡಿನ್ಯನು, ಸ್ವಾಮಿಯನ್ನು ಮಾವಿನಮರ, ಹಸು ಕರುವಿನ ಮತ್ತು ವೃಷಭದ ವಿಚಾರವಾಗಿ ಕೇಳಲಾಗಿ -

೧) ಪೂರ್ವದಲ್ಲಿ ಒಬ್ಬ ಬ್ರಾಹ್ಮಣನು ಸಕಲ ವಿದ್ಯೆಗಳನ್ನು ಓದಿಕೊಂಡು ಗರ್ವಿಸಿ ಯಾವ ಶಿಷ್ಯರಿಗೂ ಹೇಳದೆ ಹೋದದ್ದರಿಂದ ಅಡವಿಯಲ್ಲಿ ಯಾರಿಗೂ ಉಪಯೋಗವಿಲ್ಲದ ಮಾವಿನ ಗಿಡವಾದನು;

೨) ಪೂರ್ವದಲ್ಲಿ ಒಬ್ಬ ಮಹಾ ಭಾಗ್ಯವಂತನಾದರೂ ಯಾರಿಗೂ ಅನ್ನದಾನವನ್ನು ಮಾಡಲಿಲ್ಲ. ಆದ ಕಾರಣ ಹುಲ್ಲು ತಿನ್ನಲು ಬಾಯಿಯಿಲ್ಲದೆ ಆಕಳಾಗಿ ಜನಿಸಿ ಭೂಮಿಯಲ್ಲಿ ಸುತ್ತುತ್ತಿದ್ದಾನೆ;

೩) ಹಿಂದಿನ ಜನ್ಮದಲ್ಲಿ ಒಬ್ಬ ಶ್ರೀಮಂತನು ಗರ್ವಿಸಿ ಬ್ರಾಹ್ಮಣರಿಗೆ ಊಷರ ಭೂಮಿಯನ್ನು ದಾನ ಕೊಟ್ಟನಾದ್ದರಿಂದ ಆತನು ವೃಷಭನಾಗಿ ಕಾಡಿನಲ್ಲಿ ತಿರುಗುತ್ತಿದ್ದಾನೆ.

ಇದರಿಂದ ದಾನ ಹೇಗಿರಬೇಕು ಮತ್ತು ಯಾವ ರೀತಿಯಲ್ಲಿರಬೇಕೆಂದು ತಿಳಿಯುತ್ತದೆ. ರಕ್ತದಾನ, ಅನ್ನದಾನ ಮತ್ತು ವಿದ್ಯಾದಾನ ಬಹಳ ಶ್ರೇಷ್ಠವಾದುದು. ಇದರ ಬಗ್ಗೆ ನಮಗೆಲ್ಲರಿಗೂ ತಿಳಿದಿದೆ. ಆದರೆ ವಿದ್ಯಾದಾನವು ಬಹಳ ಪವಿತ್ರವಾದುದು ಎಂಬುದನ್ನು ಅನೇಕ ಸುಭಾಷಿತಗಳಿಂದ ತಿಳಿಯಬಹುದು.

ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಮ್।
ಅನ್ನೇನ ಕ್ಷಣಿಕಾತೃಪ್ತಿ ರ್ಯಾವಜ್ಜೀವಂ ಚ ವಿದ್ಯಯಾ॥

ಅನ್ನದಾನ ಪರಮ ದಾನ, ಅದಕ್ಕಿಂತ ಹಿರಿದಾದುದು ವಿದ್ಯಾದಾನ, ಕಾರಣ ಅನ್ನವು ಕ್ಷಣಿಕ ತೃಪ್ತಿಕೊಡುತ್ತದೆ ಆದರೆ ವಿದ್ಯೆಯು ತನ್ನ ಜೀವಿತಕಾಲಪೂರ್ತಿ ಸುಖವನ್ನು ಕೊಡುತ್ತದೆ. ಹಾಗೂ ವಿದ್ಯೆಯನ್ನು ಯಾರು ಅಪಹರಿಸಲಾಗದು ಮತ್ತು ವಿದ್ವಾಂಸನಿಗೆ ಎಲ್ಲ ಕಡೆಯು ಗೌರವ ದೊರೆಯುತ್ತದೆ.

ವಿದ್ಯಾ ದದಾತಿ ವಿನಯಂ ವಿನಯಾತ್ ಯಾತಿ ಪಾತ್ರತಾಂ।
ಪಾತ್ರತ್ ಧನಮಾಪ್ನೋತಿ ಧನಾತ್ ಧರ್ಮಂ ತತಃ ಸುಖಮ್॥

ಒಳ್ಳೆಯ ವಿದ್ಯಾವಂತನಾದರೆ ವಿನಯಗುಣವು ತಾನಾಗಿ ಬರುತ್ತದೆ. ವಿನಯವಂತನಾದರೆ ಸಮಾಜದಲ್ಲಿ ಉತ್ತಮವಾದ ಸ್ಥಾನ-ಮಾನಗಳು ದೊರೆಯುತ್ತವೆ. ಅದರಿಂದ ಹಣವನ್ನು ಸಂಪಾದಿಸಬಹುದು. ಹಣದಿಂದ ಉತ್ತಮ ಕೆಲಸಗಳನ್ನು ಮಾಡಬಹುದು ಅದರ ಫಲವಾಗಿ ಸುಖವು ಲಭಿಸುವುದು. ಈಗಿನ ಪರಿಸ್ಥಿತಿಯಲ್ಲಿ ಸರಿಯಾದ ವಿದ್ಯೆಯ ಅವಶ್ಯಕತೆ ಇದೆ. ಆದರಿಂದ ಉತ್ತಮವಾದ ವಿದ್ಯೆಯನ್ನು ದಾನಮಾಡಬೇಕು. ಆಗ ಮಾತ್ರ ವಿದ್ಯಾರ್ಥಿಗಳು ಸಜ್ಜನರಾಗಿ, ಸಾತ್ವಿಕರಾಗಿ ಒಳ್ಳೆಯ ಸುಸಂಸ್ಕೃತವಾದ ನಾಗರೀಕರಾಗುತ್ತಾರೆ. ಹಾಗೂ,ಈಗ ವಿದ್ಯಾರ್ಥಿಗಳಿಂದ ನಡೆಯುತ್ತಿರುವ ಅನೇಕ ಅನಾಹುತಗಳನ್ನು ತಡೆಯಬಹುದು ಎಂದು ನನ್ನ ಅನಿಸಿಕೆ.

ನಮಸ್ತೇ ಶಾರದೇ ದೇವಿ ಕಾಶ್ಮೀರ (ಶೃಂಗೇರಿ ) ಪುರವಾಸಿನಿ॥
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾದಾನಂ ಚ ದೇಹಿ ಮೇ ॥

ಹೇ ದೇವಿ, ಕಾಶ್ಮೀರ (ಶೃಂಗೇರಿ) ಪುರವಾಸಿನಿಯಾದ ಶಾರದೆ, ನಿನಗೆ ನಮಸ್ಕಾರ. ನಾನು ಯಾವಾಗಲೂ ನಿನ್ನನ್ನು ಪ್ರಾರ್ಥಿಸುತ್ತೇನೆ. ನನಗೆ ವಿದ್ಯಾದಾನವನ್ನು ಮಾಡು. ಎಲ್ಲರೂ ಆ ತಾಯಿ ಶಾರದೆಯಲ್ಲಿ ಸದ್ವಿದ್ಯೆಯನ್ನು ಕೊಡು ಎಂದು ಪ್ರಾರ್ಥಿಸೋಣ.




**ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.**

ತಿರುಮಲೆ ತಿರುಪತಿ ದೇವಸ್ಥಾನಗಳು
**ಟೋಲ್ ಫ್ರಿ ನಂಬರ್**
**18004254141**

**ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!**

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**

# ಶ್ರೀ ಮಹಾಲಕ್ಷ್ಮೀ! ಕೊಲ್ಹಾಪುರ ನಾಯಕಿ!

– ತೆಲುಗು ಮೂಲ : ಎಂ. ರಾಮಕೃಷ್ಣಾ ಮಾಚಾರ್ಯಲು

– ಅನುವಾದ : ಶ್ರೀಮತಿ. ಭಾರತಿ ರಘುನಾಥ್
8277334079

'ಶ್ರೀ' ಎಂದರೆ ಸಿರಿಗಳನ್ನು ಸುರಿಸುವ 'ಶ್ರೀಮಹಾಲಕ್ಷ್ಮಿ' ಎಂದು ಅರ್ಥ. 'ಶ್ರೀ' ಎಂಬ ಲಕ್ಷ್ಮಿಗೆ ನೆಲೆಯನ್ನು ನೀಡಿದವನಾದ ಕಾರಣಕ್ಕೆ ಶ್ರೀನಿವಾಸನಾಗಿದ್ದಾನೆ. ತಿರುಮಲೆಯ ಶ್ರೀ ವೇಂಕಟೇಶ್ವರಸ್ವಾಮಿ. ಸಮಸ್ತ ಚರಾಚರ ವಿಶ್ವವೆಲ್ಲಾ ಶ್ರೀ ಲಕ್ಷ್ಮಿಯದೇ ಸ್ವರೂಪವೆಂದು ಅನೇಕ ರೀತಿಯಲ್ಲಿ ಅನೇಕ ಸಂದರ್ಭಗಳಲ್ಲಿ ಲಕ್ಷ್ಮಿ ಕೀರ್ತಿಸಲ್ಪಟ್ಟಿದ್ದಾಳೆ. ಶ್ರೀಮಾನ್ ಮಹಾವಿಷ್ಣುವು ಅವತರಿಸಿದಾಗಲೆಲ್ಲಾ ಆತನ ಸತಿಯಾಗಿ,ಪಟ್ಟದರಸಿಯಾಗಿ ಶ್ರೀ ಮಹಾಲಕ್ಷ್ಮಿ ಅವತರಿಸಿದ ಸಂದರ್ಭಗಳು ಅನೇಕ.

ಭೃಗುಮಹರ್ಷಿಯ ಪರೀಕ್ಷೆಯಿಂದಾಗಿ ಉಂಟಾದ ಅವಮಾನದಿಂದಾಗ ಶ್ರೀ ಮಹಾಲಕ್ಷ್ಮಿ ಶ್ರೀ ವೈಕುಂಠವನ್ನು ತೊರೆದು ಬಿಟ್ಟು ಭೂಲೋಕದಲ್ಲಿರುವ ಕೊಲ್ಹಾಪುರ ಕ್ಷೇತ್ರವನ್ನು ಸೇರಿಕೊಂಡಿದ್ದಾಳೆ. ಈ ಕ್ಷೇತ್ರದಲ್ಲಿ ಕೊಲ್ಹಾಸುರ, ಕರವೀರರೆಂಬ ರಾಕ್ಷಸರನ್ನು ಸಂಹರಿಸಿ ಕೋಲ್ಹಾಪುರವಾಸಿನಿ, ಕರವೀರಪುರ ನಿವಾಸಿನಿ ಎಂಬ ಹೆಸರನ್ನು ಪಡೆದಿದ್ದಾಳೆ. ಈ ಕ್ಷೇತ್ರದಲ್ಲಿ ಸಾಕ್ಷಾತ್ ಶ್ರೀ ಮಹಾಲಕ್ಷ್ಮಿಯಾಗಿ ಪೂಜೆಗಳನ್ನು ಸ್ವೀಕರಿಸುತ್ತಾಳೆ. ಆ ಬಳಿಕ ಶ್ರೀ ವೈಕುಂಠದಿಂದ ಮಹಾಲಕ್ಷ್ಮಿಯನ್ನು ಹುಡುಕುತ್ತಾ ಭೂಲೋಕಕ್ಕೆ ಬಂದು ಸೇರಿದ ಶ್ರೀಮಾನ್ ವಿಷ್ಣುವು 'ಶ್ರೀ ವೇಂಕಟೇಶ್ವರ'ನಾಗಿ ವೇಂಕಟಾಚಲ ಕ್ಷೇತ್ರದಲ್ಲಿ ನೆಲೆಗೊಂಡಿದ್ದಾನೆ. ಆ ಸ್ವಾಮಿ 'ಶ್ರೀ ಮಹಾಲಕ್ಷ್ಮಿ'ಯ ಅನುಗ್ರಹಕ್ಕಾಗಿ ಕೊಲ್ಹಾಪುರದಲ್ಲಿ ಹತ್ತು ವರುಷಗಳವರೆಗೆ ತಪಸ್ಸು ಮಾಡಿದ್ದಾನೆ. ಆದರೆ ಅಲ್ಲಿ ಪ್ರತ್ಯಕ್ಷಳಾಗಲಿಲ್ಲ ಲಕ್ಷ್ಮಿ. ಆಗ ಅಶರೀರವಾಣಿ ರೀತ್ಯಾ ಶ್ರೀ ವೇಂಕಟೇಶ್ವರನು ಸ್ವರ್ಣಮುಖರಿ ನದಿ ತೀರದಲ್ಲಿ ಪದ್ಮಸರೋವರದ ಬಳಿ ಹನ್ನೆರಡು ವರ್ಷ ಕಾಲ ತಪಸ್ಸು ಮಾಡಿದ್ದಾನೆ. ಈ ತಪಸ್ಸಿಗೆ ಶ್ರೀ ಮಹಾಲಕ್ಷ್ಮಿ ಪದ್ಮಸರೋವರದಲ್ಲಿ ಸಹಸ್ರದಳಗಳುಳ್ಳ ಸ್ವರ್ಣಕಮಲದಲ್ಲಿ ಅಲಮೇಲು ಮಂಗಮ್ಮ- ಪದ್ಮಾವತಿ ಎಂಬ ಅನೇಕ ಹೆಸರುಗಳಿಂದ ಅವತರಿಸಿ, ಶ್ರೀ ವೇಂಕಟೇಶ್ವರನನ್ನು ಸೇರಿ ಸ್ವಾಮಿಯನ್ನು ಲಕ್ಷ್ಮಿ ಸುಸಂಪನ್ನನನ್ನಾಗಿ ಮಾಡಿದ್ದಾಳೆ.

**ಸ್ಥಳಪುರಾಣ**

ಶ್ರೀ ಮಹಾಲಕ್ಷ್ಮಿ ಮುನಿಸಿಕೊಂಡು ಪಾತಾಳವನ್ನು ಸೇರಿ ಅಲ್ಲಿ ತಪಸ್ಸು ಮಾಡುತ್ತಾ ಕಾಲ ಹಾಕುತ್ತಿದ್ದಾಳೆ. ಆಗ ಅಗಸ್ತ್ಯಾದಿ ಮಹರ್ಷಿಗಳೆಲ್ಲರೂ ಅಲ್ಲಿಗೆ ಬಂದು, ತಪವನ್ನಾಚರಿಸುತ್ತಿರುವ ಶ್ರೀ ಮಹಾಲಕ್ಷ್ಮೀಯನ್ನು ಸಂದರ್ಶಿಸಿ, ಹೀಗೆ ನುಡಿದ್ದಾರೆ. "ಅಮ್ಮಾ! ಪದ್ಮಾವತಿಪುರವೆಂದೂ,ಯಕ್ಷಾಲಯವೆಂದೂ, ಶಿವಾಲಯವೆಂದೂ, ದಕ್ಷಿಣಕಾಶಿಯೆಂದೂ, (ದಕ್ಷಯಜ್ಞ ಸಮಯದಲ್ಲಿ ಸತೀದೇವಿಯ ನೇತ್ರಗಳು ಬಿದ್ದ ದಿವ್ಯಕ್ಷೇತ್ರ) ಕರೆಯಲ್ಪಡುವ ಕರವೀರಪುರವು, ಕರವೀರಪುರವೆಂದೇ ಪ್ರಸಿದ್ಧಿಗೊಳ್ಳುವಂತೆ ಅಲ್ಲಿ ಬಂದು ನೆಲೆಸಿ ಭಕ್ತರನ್ನು ಅನುಗ್ರಹಿಸು ತಾಯೇ" ಎಂದು ಎಷ್ಟೋ ಗೋಗರೆದಿದ್ದಾರೆ. ಅವರ ಪ್ರಾರ್ಥನೆಗೆ ಪ್ರಸನ್ನಳಾದ 'ಶ್ರೀಮಹಾಲಕ್ಷ್ಮಿ' ಕರವೀರಪುರದಲ್ಲಿ ಅರ್ಚಾರೂಪದಲ್ಲಿ ಹಲವು ಕಳಾಂಶಗಳಿಂದ ಮಾತ್ರವೇ ನೆಲೆಗೊಂಡು ಭಕ್ತರನ್ನು ಅನುಗ್ರಹಿಸಿದ್ದಾಳೆ.

ಕೋಲ್ಹಾಪುರ - ಕರವೀರಪುರಗಳೆಂಬ ಹೆಸರುಗಳು ಬಂದದ್ದೇಗೆ?

ಹಿಂದೆ ಬ್ರಹ್ಮನು ಗಯಾಸುರ, ಲವಣಾಸುರ ಮತ್ತು ಕೋಲ್ಹಾಸುರರೆಂಬ ಮೂವರನ್ನು ತನ್ನ ಮಾನಸ ಪುತ್ರರಾಗಿ ಹುಟ್ಟಿಸಿದ್ದಾನೆ. ಆ ಮೂವರೂ ರಾಕ್ಷಸ ಪ್ರವೃತ್ತಿಯುಳ್ಳ





ವರಾಗಿ ಜನಿಸಿದ್ದಾರೆ. ಹಾಗೆ ಅವರು ಮಾಡಿದ ಅವಘಡಗಳನ್ನು ಸಹಿಸದೇ ವಿಷ್ಣುವು ಗಯಾಸುರನನ್ನು ಲವಣಾಸುರನನ್ನು ಸಂಹರಿಸಿದ್ದಾನೆ. ಇನ್ನುಳಿದದ್ದು ಕೋಲ್ಹಾಸುರನೊಬ್ಬನೇ.

ತನ್ನ ಅಣ್ಣಂದಿರನ್ನು ಕೊಂದ ಕಾರಣಕ್ಕಾಗಿ ಕೋಲ್ಹಾಸುರನು ವಿಷ್ಣುವಿನ ಮೇಲೆ, ದೇವತೆಗಳ ಮೇಲೆ ದ್ವೇಷವನ್ನು ಬೆಳಸಿಕೊಂಡಿದ್ದಾನೆ. ಇವರೆಲ್ಲರನ್ನು ತಪದ ಮೂಲಕವೇ ಜಯಿಸಬಹುದೆಂದು ಆಲೋಚಿಸಿದ್ದಾನೆ. ತಾನು ಪರಿಪಾಲಿಸುವ ಪದ್ಮಾವತಿಪುರವನ್ನು ತನ್ನ ಪುತ್ರಿಗೆ ಬಿಟ್ಟುಕೊಟ್ಟು ತಪಸ್ಸಿಗೆ ಹೊರಟು ಹೋಗಿದ್ದಾನೆ. ಆಗ ಶತ್ರುರಾಜನಾದ 'ಸುಕೇಶಿ' ದಂಡೆತ್ತಿ ಬಂದು ಕೋಲ್ಹಾಸುರನ ಪುತ್ರರನ್ನು ವಧಿಸಿ ರಾಜ್ಯವನ್ನು ಆಕ್ರಮಿಸಿಕೊಂಡಿದ್ದಾನೆ. ಹೀಗೆ ಸುಕೇಶಿ ದೇವತೆಗಳನ್ನು ನಾನಾ ರೀತಿಯಾಗಿ ಹಿಂಸಿಸಿ ಬಾಧೆಗೊಳಪಡಿಸಿದ್ದಾನೆ. ಆಗ ದೇವತೆಗಳೆಲ್ಲರೂ ಈತನಿಗಿಂತ ಆ ಕೋಲ್ಹಾಸುರನೇ ಮೇಲೆಂದು ಕೋಲ್ಹಾಸುರನ ಬರುವನ್ನೇ ಎದುರು ನೋಡುತ್ತಿದ್ದಾರೆ. ಅಷ್ಟರಲ್ಲಿ ಬ್ರಹ್ಮನಿಂದ ವರಗಳನ್ನು ಪಡೆದುಕೊಂಡು ಕೋಲ್ಹಾಸುರನು ಹಿಂತಿರುಗಿ ಬಂದಿದ್ದಾನೆ. ಆದರೆ ಸುಕೇಶಿ ತನ್ನ ಪುತ್ರರನ್ನು ಕೊಂದಿರುವನೆಂಬ ಕೋಪದಿಂದ ಸುಕೇಶಿಯನ್ನು, ಆತನ ಪುತ್ರರನ್ನು ಬಂಧುಗಳನ್ನು ಸಂಹರಿಸಿ ರಾಜ್ಯವನ್ನು ತಿರುಗಿ ಕೈವಶ ಮಾಡಿ ಕೊಂಡಿದ್ದಾನೆ. ಆದರೂ ದೇವತೆಗಳ ಮೇಲಿರುವ ಹಗೆ ಮಾತ್ರ ಕಡಿಮೆಯಾಗಲಿಲ್ಲ. ಎಷ್ಟೋ ಬಾರಿ ದೇವತೆಗಳ ಮೇಲೆ ದಂಡೆತ್ತಿ ಹೋದರೂ ಅವರನ್ನೇನೂ ಮಾಡಲಾಗದೇ ಕೈಚಲ್ಲಿದ್ದಾನೆ. ಇದಕ್ಕೆ ಕಾರಣವಾದರೂ ಏನಿರಬಹುದೆಂದು ಅಲೋಚಿಸಲಾರಂಭಿಸಿದ್ದಾನೆ.



ಆಗ ತಿಳಿದು ಬಂದಿದೆ ಕೋಲ್ಹಾಸುರನಿಗೆ - ಸಾಕ್ಷಾತ್ ಶ್ರೀ ಮಹಾಲಕ್ಷ್ಮಿಯೇ ವೈಕುಂಠದಿಂದಿಳಿದು ಬಂದು ತನ್ನ ರಾಜಧಾನಿ ಪದ್ಮಾವತಿಪುರ (ಕೋಲ್ಹಾಪುರ)ದಲ್ಲಿ ನೆಲೆಗೊಂಡಿದ್ದಾಳೆಂದು. ಆ ತಾಯಿಯ ದಯೆಯಿಂದಲೇ ದೇವತೆಗಳೆಲ್ಲರೂ ರಕ್ಷಿಸಲ್ಪಡುತ್ತಿದ್ದಾರೆಂದು. ಅದಕ್ಕೇ ದೇವತೆಗಳ ಮೇಲೆ ತನಗೆ ಜಯಸಾಧಿಸಲಾಗುತ್ತಿಲ್ಲವೆಂದು ಗ್ರಹಿಸಿದ್ದಾನೆ. ಆ ದೇವತೆಗಳಿಗೆ ಶ್ರೀಮಹಾಲಕ್ಷ್ಮಿಯು ಧಕ್ಕದಂತೆ ಮಾಡಬೇಕೆಂದು ಅದಕ್ಕೇ ತಪಸ್ಸೇ ಮಾರ್ಗವೆಂದು ಎಣಿಸಿದ್ದಾನೆ. ಅಂದು ಕೊಳ್ಳುತ್ತಲೇ ತಡ ಮಾಡದೇ ತನ್ನ ರಾಜ್ಯವನ್ನು 'ಕರವೀರ'ನೆಂಬ ತನ್ನ ಪುತ್ರನಿಗೆ ಒಪ್ಪಿಸಿ ತಪಸ್ಸಿಗೆ





ಹೊರಟು ಹೋಗಿದ್ದಾನೆ. ಶ್ರೀ ಮಹಾಲಕ್ಷ್ಮಿಯನ್ನು ಕುರಿತು ಘೋರವಾದ ತಪವನ್ನಾಚರಿಸಿ ದ್ದಾನೆ.ಆ ತಪಸ್ಸಿಗೆ ಮೆಚ್ಚಿ ಆ ತಾಯಿ ಪ್ರತ್ಯಕ್ಷವಾಗಿ ವರವನ್ನು ಕೇಳೆಂದಿದ್ದಾಳೆ ಅದಕ್ಕೆ ಕೋಲ್ಹಾಸುರನು"ಅಮ್ಮಾ! ಜಗಜ್ಜನನಿ! ಒಂದು ನೂರು ವರುಷದವರೆಗೆ ಪದ್ಮಾವತಿ ಪುರವನ್ನು ಬಿಟ್ಟು ಎಲ್ಲಿಯಾದರೂ ಹೊರಟುಹೋಗು. ನನ್ನ ರಾಜ್ಯದಲ್ಲಿ ಮಾತ್ರ ಇರಬೇಡ" ಎಂದು ವರ ಕೇಳಿದ್ದಾನೆ ಆಗ ಮಹಾಲಕ್ಷ್ಮಿ ಆ ರಾಜ್ಯವನ್ನೇ ಬಿಟ್ಟು ಹೊರಟು ಹೋಗಿದ್ದಾಳೆ. ತದನಂತರ ತನಗೆ ವಯಸ್ಸಾದುದರಿಂದ ತನ್ನ ರಾಜ್ಯವನ್ನು ಕರವೀರನಿಗೆ ಒಪ್ಪಿಸಿ ತಪಸ್ಸಿಗೆ ಹೊರಟು ಹೋಗಿದ್ದಾನೆ ಕೋಲ್ಹಾಸುರನು.



ತಂದೆಗಿಂತಲೂ ಕಾರ್ಕೋಟಕವಾಗಿ ಪುತ್ರನು ದೇವತೆಗಳ ಮೇಲೆ ದಂಡೆತ್ತಿ ಅವರನ್ನು ಬಾಧೆಗೊಳಿಪಡಿಸಿದ್ದಾನೆ. ಆಗ ಶಿವನೇ ಸ್ವತಃ ಅವನನ್ನು ಸಂಹರಿಸಿದ್ದಾನೆ. ಅವನು ಆ ತೆರದಿ ಮರಣಿಸುವಾಗ ಶಿವನಿಗೆ ಈ ಊರು ತನ್ನ ಹೆಸರಿನಿಂದಲೇ ಕರೆಯಲ್ಪಡ ಬೇಕೆಂದು ಕೇಳಿಕೊಂಡಿದ್ದಾನೇ. ಅದಕ್ಕೆ ಅನುಗ್ರಹಿಸಿದ್ದಾನೆ ಶಿವನು. ಅಂದಿನಿಂದ ಈ ಊರು 'ಕರವೀರಪುರ' ವೆಂದು ಕರೆಯಲ್ಪಟ್ಟಿದೆ.



ಈ ವಿಷಯವನ್ನು ತಿಳಿದುಕೊಂಡ ಕೋಲ್ಹಾಸುರನು ತಾನಾಯ್ದುಕೊಂಡ ಧರ್ಮಮಾರ್ಗವನ್ನು ತೊರೆದು ಅಧರ್ಮ ಮಾರ್ಗದಲ್ಲಿ ದೇವತೆಗಳನ್ನು ಹಿಂಡಲಾರಂಭಿಸಿ ದ್ದಾನೆ. ಆಗ ಶ್ರೀಮಹಾಲಕ್ಷ್ಮಿಯು ದೇವತೆಗಳೊಂದಿಗೆ ಒಂದು ನೂರು ವರ್ಷಗಳವರೆಗೆ ಯಾರೂ ಅವನನ್ನು ಏನೂ ಮಾಡಬಲ್ಲಲಾರರೆಂದೂ, ಅಲ್ಲಿಯವರೆಗೂ ಸಹನೆಯಿಂದಿರ ಬೇಕೆಂದು ಹೇಳಿದ್ದಾಳೆ. ಹೀಗೆಯೇ ಕಾಲಚಕ್ರದಲ್ಲಿ ಒಂದು ನೂರು ವರ್ಷಗಳುರುಳಿವೆ. ಆ ನೂರುವರ್ಷಗಳ ಕಾಲ ಪೂರ್ತಿಯಾಗುತ್ತಲೇ ಶ್ರೀ ಮಹಾಲಕ್ಷ್ಮಿ ಕೋಲ್ಹಾಸುರನನ್ನು ವಧಿಸಿ ದ್ದಾಳೆ. ಆತನು ತನ್ನ ಮರಣದ ವೇಳೆ ಲಕ್ಷ್ಮಿಯನ್ನು ಕುರಿತು "ತಾಯೇ! ಲಕ್ಷ್ಮೀದೇವಿ! ಇನ್ನು ಮುಂದೆ ಈ ಕ್ಷೇತ್ರ 'ಕೊಲ್ಹಾಪುರ' ವೆಂಬ ತನ್ನ ಹೆಸರಿನಿಂದಲೇ ಕರೆಯಲ್ಪಡುವಂತೆ ಅನುಗ್ರಹಿಸೆಂದೂ, ನೀನು ಕೂಡಾ ಸ್ವತಃ ಇಲ್ಲಿ ನೆಲೆನಿಂತು ಭಕ್ತರನ್ನು ಕಾಪಾಡು ತಾಯೇ!" ಎಂದು ವರವನ್ನು ಬೇಡಿದ್ದಾನೆ. ಆ ದಿನದಿಂದ ಕೋಲ್ಹಾಪುರವು ಕೋಲ್ಹಾಪುರವೆಂದು ಸಾಧನ ಕ್ಷೇತ್ರವಾಗಿ, ಸಿದ್ಧಿ ಕ್ಷೇತ್ರವಾಗಿ ಪ್ರಸಿದ್ಧಿ ಹೊಂದಿದೆ. ಈ ರೀತಿ ಅಲ್ಲಿ ಕಳಾಂಶಗಳಿಂದ ಶೋಭಿಸುತ್ತಿದ್ದಾಳೆ ಶ್ರೀ ಮಹಾಲಕ್ಷ್ಮಿ.



### ಶ್ರೀ ಮಹಾಲಕ್ಷ್ಮೀ

ಗರ್ಭಗುಡಿಯಲ್ಲಿರುವ ಅಮ್ಮನವರ ವಿಗ್ರಹ ಸುಮಾರು ಆರೆಡೆ ಚದುರ ಅಡಿಗಳಿಂದ ಎತ್ತರವಾದ ವೇದಿಕೆಯ ಮೇಲೆ ಎರಡು ಅಂಗುಲದ ಪೀಠವಿದೆ. ಅದರ ಮೇಲೆ ಮಹಾಲಕ್ಷ್ಮಿ ಕುಳಿತಿರುವ ಭಂಗಿಯಲ್ಲಿ ಸ್ಥಿತ ಗೊಂಡಿದ್ದಾಳೆ. ನಾಲ್ಕು ಕೈಗಳಲ್ಲಿ





ಹಣ್ಣು, ಡಾಲು, ಖಡ್ಗ, ಪಾನಪಾತ್ರೆಗಳಿವೆ. ಮೂರಡಿ ಎತ್ತರದಲ್ಲಿ ಮೂಲವಿಗ್ರಹ. ಅನೇಕ ಆಭರಣಗಳಿಂದ ಬಹಳಾ ಅಂದವಾಗಿ ಆಕರ್ಷಣೀಯವಾಗಿದೆ. ತಾಯಿಯ ಮೂಲ ವಿಗ್ರಹದ ಹಿಂಭಾಗದಲ್ಲಿ ಸಿಂಹವಾಹನವಿದೆ. ಮೂಲರೂಪ ಪಶ್ಚಿಮಾಭಿ ಮುಖವಾಗಿರುತ್ತದೆ. ವರ್ಷಕ್ಕೆ ಎರಡು ಮೂರು ಬಾರಿ ಮೂರು ದಿನಗಳು ಸೂರ್ಯಾಸ್ತದ ವೇಳೆ ಸೂರ್ಯಕಿರಣಗಳು ಪಶ್ಚಿಮ ದಿಕ್ಕಿಗಿರುವ ಕಿಟಕಿಯಿಂದ ತೂರಿ ಅಮ್ಮನವರ ಮುಖದ ಮೇಲೆ ಬೀಳುತ್ತವೆ. ಈ ಪ್ರತ್ಯೇಕ ದರ್ಶನಕ್ಕಾಗಿ ಭಕ್ತರು ಅಧಿಕ ಸಂಖ್ಯೆಯಲ್ಲಿ ಬರುತ್ತಾರೆ. ಗರ್ಭಗುಡಿಯ ಮೇಲೆ ಶ್ರೀ ಚಕ್ರವಿರುವುದೊಂದು ಈ ಕ್ಷೇತ್ರದ ವಿಶೇಷತೆ. ಮೊದಲು ಶ್ರೀ ಮಹಾಲಕ್ಷ್ಮೀಯನ್ನು ಮಾತ್ರ ಪ್ರತಿಷ್ಠಾಪಿಸಲಾಯ್ತು. ನಂತರ 11 ನೇ ಶತಮಾನದಲ್ಲಿ ಗಂಡಿರಾದಿತ್ಯನ ಸಮಯದಲ್ಲಿ ಪ್ರದಕ್ಷಿಣಾಕಾರದಲ್ಲಿ ಮಹಾಕಾಳಿ, ಮಹಾಸರಸ್ವತಿಯ ಪ್ರತಿಷ್ಠಾಪನೆಗಳನ್ನು ಜರುಗಿಸಲಾಯ್ತು. ಮೂಲವಿಗ್ರಹಕ್ಕೆ ಮಹಾಕಾಳಿಗೂ ಮಧ್ಯೆ ಶ್ರೀ ಮಹಾಲಕ್ಷ್ಮಿ ಯಂತ್ರವನ್ನು ಸಹಾ ಪ್ರತಿಷ್ಠಾಪಿಸಲಾಯ್ತು.

**ಆಲಯ ನಿರ್ಮಾಣ ಶೈಲಿ**

ಶ್ರೀ ಮಹಾಲಕ್ಷ್ಮೀಗೆಂದು ಪ್ರತ್ಯೇಕವಾಗಿರುವ ಆಲಯಗಳಲ್ಲಿ ಕೋಲ್ಹಾಪುರ ಆಲಯವೂ ಒಂದು. ಈ ಆಲಯವು ಮಹಾರಾಷ್ಟ್ರದಲ್ಲಿರುವ ಕೋಲ್ಹಾಪುರದ ಪಂಚಗಂಗಾ ನದಿ ತೀರದಲ್ಲಿದೆ. ಇದು ಸುಮಾರು ಆರುನೂರು ವರ್ಷಗಳ ಹಿಂದಿನ ಕಾಲದ್ದು. ಯಾರೋ ರಾಜರು ಇದನ್ನು ನಿರ್ಮಿಸಿದ್ದಾರೆ. ಇದು ವಿಶಾಲವಾದ ಪ್ರಾಂಗಣದಲ್ಲಿ ಮೇವಾಡಪಂತ್ ಶೈಲಿಯಲ್ಲಿ ಶಿಲ್ಪಕಲಾ ನೈಪುಣ್ಯತೆಯಿಂದ ನಿರ್ಮಿತಗೊಂಡಿದೆ. ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮುಖ್ಯ ದ್ವಾರಗಳಿವೆ. ಐದು ಗೋಪುರಗಳ ಕೆಳಗೆ ಆಲಯವಿದೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗೋಪುರಗಳು ಮಧ್ಯದಲ್ಲೊಂದು ಗೋಪುರವಿದೆ. ಆದರಲ್ಲಿ ಪೂರ್ವಕ್ಕಿರುವ ಗೋಪುರದಡಿಯಲ್ಲಿ ಮಹಾಲಕ್ಷ್ಮಿ ಇದ್ದಾಳೆ. ಮಧ್ಯದಲ್ಲಿ ಕುಮಾರ ಮಂಟಪ, ಬಲಮುರಿ ಗಣಪತಿ, ಉತ್ತರದಲ್ಲಿ ಮಾಂಕಾಳಿ, ದಕ್ಷಿಣದಲ್ಲಿ ಮಹಾಸರಸ್ವತಿ ಕೆತ್ತನೆಗೊಂಡಿದ್ದಾರೆ. ಆಲಯಗಳಲ್ಲಿ ವೇಂಕಟೇಶ್ವರಸ್ವಾಮಿ, ನವಗ್ರಹಗಳು, ರಾಧಾ ಕೃಷ್ಣ, ಕಾಲಭೈರವ, ವಿನಾಯಕ, ಸಿಂಹವಾಹಿನಿ, ತುಳಜಾ ಭವಾನಿ ಮೊದಲಾದ ಅನೇಕ ದೇವತೆಗಳಿದ್ದಾರೆ.

**ಪೂಜೆ - ಉತ್ಸವಗಳು**

ಇಲ್ಲಿ ಪ್ರತಿನಿತ್ಯ ಮಹಾಲಕ್ಷ್ಮಿ ಮಾತೆಗೆ ಐದು ಬಾರಿ ಅರ್ಚನೆ ನಡೆಯುತ್ತದೆ. ಮುಂಜಾನೆ 5 ಗಂಟೆಗೆ ಸುಪ್ರಭಾತ ಸೇವೆಗೈಯುತ್ತಾರೆ. ಕಾಕಡಾರತಿ ಕೊಡುತ್ತಾರೆ. ಬೆಳಗ್ಗೆ 8 ಗಂಟೆಗೆ ಷೋಡಶೋಪಚಾರ ಪೂಜೆ ಮಾಡುತ್ತಾರೆ. ಮಧ್ಯಾಹ್ನ ಸಾಯಂಕಾಲಗಳಲ್ಲಿ ಪೂಜೆ, ಮಹಾಮಂಗಳಾರತಿ ನಡೆಸುತ್ತಾರೆ. ಪ್ರತಿ ಶುಕ್ರವಾರ ವಿಶೇಷ ಪೂಜೆಗಳು ನಡೆಯುತ್ತವೆ. ಚೈತ್ರ ಮಾಸದಲ್ಲಿ ಬರುವ ಹುಣ್ಣಿಮೆಯಿಂದ ನವರಾತ್ರೋತ್ಸವಗಳನ್ನು ಅಮ್ಮನವರಿಗೆ ನಡೆಸಲಾಗುತ್ತದೆ. ಪ್ರತಿ ಶುಕ್ರವಾರ ಸಾಯಂಕಾಲದಲ್ಲಿ ಹುಣ್ಣಿಮೆದಿನ ಅಮ್ಮನವರಿಗೆ ಆಲಯ ಪ್ರಾಂಗಣದಲ್ಲಿ ಪಲ್ಲಕ್ಕಿಯಲ್ಲಿ ಮೆರವಣಿಗೆಯನ್ನು ಜರುಗಿಸುತ್ತಾರೆ.

ಹೈದರಾಬಾದಿನಿಂದ 540 ಕಿ.ಮೀ. ದೂರದಲ್ಲಿರುವ ಕೋಲ್ಹಾಪುರಕ್ಕೆ ಬಸ್ಸು-ರೈಲುಗಳ ಸಂಪರ್ಕ ಸೌಕರ್ಯಗಳುಂಟು. ಇಂತಹ ವಿಶೇಷವಾದ ಪ್ರಸಿದ್ಧಿ ಪಡೆದಿರುವ ಕೊಲ್ಹಾಪುರ ಮಹಾಲಕ್ಷ್ಮಿಯನ್ನು ದರ್ಶಿಸಿ ಅಮ್ಮನವರ ಕೃಪಾಕಟಾಕ್ಷಕ್ಕೆ ಪಾತ್ರರಾಗೋಣ. ಆ ಮಹಾತಾಯಿಯೇ ತಿರುಚಾನೂರಿನಲ್ಲಿ ಪದ್ಮಾವತಿಯಾಗಿ ಆವಿರ್ಭವಿಸಿದ ಕಾರಣಕ್ಕೆ ಶ್ರೀ ಪದ್ಮಾವತಿ ಅಮ್ಮನವರನ್ನು ಸಹಾ ದರ್ಶಿಸಿ ಪುನೀತರಾಗೋಣ.

**ದೇವಿ ಮಹಾತ್ಮೆ ಹೇಳುವುದೇನು?**

**ಮಹಾಲಕ್ಷ್ಮಿ ಒಂಭತ್ತು ರೂಪಗಳಲ್ಲಿ ಅವತರಿಸಿದ್ದಾಳೆ.**

ಅವು ಮಹಿಷಾಸುರಮರ್ದಿನಿ, ಯೋಗೀಂದ್ರ (ಮಹಾಕಾಳಿ), ಕೌಶಿಕಿ, (ಮಹಾವಿದ್ಯ), ಸುನಂದ (ವಿಂಧ್ಯಾವಾಸಿನಿ), ರಕ್ತ ದಂತಿಕ, ಶಾಕಾಂಬರಿ (ಧಾನ್ಯಲಕ್ಷ್ಮಿ), ದುರ್ಗ, ಭೀಮ, ಭ್ರಾಮರಿ ಮೊದಲಾದುವುಗುಳು.

**ಶ್ರೀ ಮಹಾಲಕ್ಷ್ಮಿ - ಶ್ರೀನಿವಾಸರು**

ಮಹಾಲಕ್ಷ್ಮಿ ಶ್ರೀನಿವಾಸನ ಹೃದಯದಲ್ಲೊಂದೇ ಅಲ್ಲದೇ, ಅಷ್ಟಲಕ್ಷ್ಮಿಯಾಗಿ ಸ್ವಾಮಿಯ ಶರೀರವನ್ನೆಲ್ಲಾ ಆಕ್ರಮಿಸಿದ್ದಾಳೆ. ಅವುಗಳೆಂದರೆ: ಶರೀರದಲ್ಲಿ ಭಾಗ್ಯಲಕ್ಷ್ಮಿಯಾಗಿ, ಎರಡು ಕೈಗಳಲ್ಲೂ ದಾನಲಕ್ಷ್ಮಿಯಾಗಿ, ಎರಡು ಭುಜಗಳಲ್ಲಿ 'ವೀರಲಕ್ಷ್ಮಿಯಾಗಿ, ಹೃದಯ ಕಮಲದಲ್ಲಿ 'ಭೂತಕಾರುಣ್ಯ ಲಕ್ಷ್ಮಿಯಾಗಿ ನಂದಕ ಖಡ್ಗಗಳಲ್ಲಿ 'ಶೌರ್ಯ ಲಕ್ಷ್ಮಿಯಾಗಿ', ಗುಣಾವಗುಣಗಳಲ್ಲಿ 'ಕೀರ್ತಿಲಕ್ಷ್ಮಿ'ಯಾಗಿ ಶಾಂತ ಸ್ವರೂಪದಲ್ಲಿ 'ಸೌಮ್ಯಲಕ್ಷ್ಮಿ'ಯಾಗಿ, ಸರ್ವಾಂಗಗಳಲ್ಲಿ 'ಸರ್ವ ಸಾಮ್ರಾಜ್ಯಲಕ್ಷ್ಮಿ' ಯಾಗಿ, ಶ್ರೀನಿವಾಸನ ಶರೀರವೆಲ್ಲಾ ಪಾದದಿಂದ ಹೃದಯದವರೆಗೆ 'ಅಷ್ಟಲಕ್ಷ್ಮಿ' ಯಾಗಿ ಆಯಾ ಸ್ಥಾನಗಳಲ್ಲಿ ನೆಲೆನಿಂತು ಸ್ವಾಮಿಗೆ 'ಶ್ರೀಮಹಾಲಕ್ಷ್ಮಿ ಶ್ರೀನಿವಾಸ'ನೆಂಬ ಹೆಸರನ್ನು ಸಾರ್ಥಕಗೊಳಿಸಿದ್ದಾಳೆ.



(ಕ್ರಿ.ಶ. 1447 - 1539) ಆರಾಧನೆ 13-3-2020





# ಶ್ರೀ ವ್ಯಾಸರಾಜರು ಮತ್ತು ತಿರುಪತಿ

– ಡಾ॥ ರಾಮಚಂದ್ರ ದಾಸ್ ಸಿ.ಜಿ.
9483384584

ಅರ್ಥಿಕಲ್ಪಿತ ಕಲ್ಪೋಯಂ, ಪ್ರತ್ಯರ್ಥಿ ಗಜ ಕೇಸರಿ।
ವ್ಯಾಸ ತೀರ್ಥ ಗುರುರ್ಭೂಯಾತ್, ಅಸ್ಮದಿಷ್ಟಾರ್ಥ ಸಿದ್ಧಯೇ ॥

ವಿಜಯನಗರ ಸಾಮ್ರಾಜ್ಯದ ಕರ್ನಾಟಕ ರತ್ನ ಸಿಂಹಾಸನಾಧೀಶ್ವರರಾಗಿ, ಅದರ ಉನ್ನತಿಯ ಪರಮಾವಧಿಗೆ ಕಾರಣರಾಗಿ, ಮಹಾಗ್ರಂಥಗಳನ್ನು ರಚಿಸಿ, ಮಧ್ವಮತದ ಪುನರುದ್ಧಾರ ಮಾಡಿ, ಅನೇಕ ವಿದ್ವಜ್ಜನರಿಗೆ ಸ್ವಹಸ್ತದಿಂದ ಗ್ರಾಮ ಭೂಮಿಗಳ ಧಾರೆಯೆರೆದು, ಸ್ವಯಂ ಕರ್ನಾಟಕರೂ ಆಗಿ ಸಾವಿರಾರು ಕನ್ನಡ ದೇವರನಾಮ,ಸುಳಾದಿಗಳನ್ನು ರಚಿಸಿ, ನಿಜವಾದ ಅರ್ಥದಲ್ಲಿ ಕನ್ನಡದ ಏಳ್ಗೆಗೆ ಕಾರಣರಾದವರು ಶ್ರೀ ವ್ಯಾಸರಾಯರು. ಈ ವಿಷಯದಲ್ಲಿ ಅವರನ್ನು ಸ್ಮರಿಸುವವರೇ ಅಪರೂಪವಾಗಿದ್ದಾರೆ. ಇವರು ಕರ್ನಾಟಕಕ್ಕೆ ಮಾಡಿದ ಮಹದುಪಕಾರವನ್ನು ಇತಿಹಾಸಜ್ಞರು ಬರೆದಿರುವಷ್ಟು ಮಾತುಗಳಿಂದ ನೋಡಿದರೂ, ಸುವರ್ಣಾಕ್ಷರಗಳಿಂದ ಬರೆದಿಡಲು ಯೋಗ್ಯವಾದ ಮಹತ್ಕಾರ್ಯಗಳನ್ನೆಸಗಿದ್ದಾರೆ.

ಇಂತಹ ಮಹಾನುಭಾವರು, ವಿದ್ವಾಂಸರ ಕ್ರೋಢಿಕೃತ ಅಭಿಪ್ರಾಯದಂತೆ, ಪ್ರಭವ ಸಂವತ್ಸರದ, ಅಧಿಕ ವೈಶಾಖ ಶುದ್ಧ ಸಪ್ತಮಿ ಭಾನುವಾರ, ಏಪ್ರಿಲ್ ಇಪ್ಪತ್ತೆರಡನೆಯ ತಾರೀಖು ಕ್ರಿ.ಶ.1447 ರಲ್ಲಿ ಬನ್ನೂರು ಗ್ರಾಮದಲ್ಲಿ ಭೂಸ್ಪರ್ಷವಿಲ್ಲದೆ, ಶ್ರೀ ಬ್ರಹ್ಮಣ್ಯತೀರ್ಥರ ಅನುಗ್ರಹದಿಂದ ಅವತರಿಸಿದವರು, ಇವರು ಶೇಷಾಂಶಯುಕ್ತರಾದ ಪ್ರಹ್ಲಾದರು ಎಂಬ ಮಾತನ್ನು ಶ್ರೀವಿದ್ಯಾರತ್ನಾಕರತೀರ್ಥರು ಅವತಾರ ಸೂಚನೆಯ ಶ್ಲೋಕದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.ಮಗುವಿಗೆ 'ಯತಿರಾಜ" ನೆಂಬ ಅನ್ವರ್ಥ ನಾಮವನ್ನೇ ಇಟ್ಟಿದ್ದರು.ಯತಿರಾಜನು ಚಿಕ್ಕ ವಯಸ್ಸಿನಲ್ಲಿಯೇ ಕಾವ್ಯ, ನಾಟಕ, ಅಲಂಕಾರ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ಪಾರಂಗತನಾದನು.

ಶಾಸ್ತ್ರಜ್ಞನೂ, ಚುರುಕುಬುದ್ದಿಯವನೂ ಆದ ಯತಿರಾಜನಿಗೆ ಶ್ರೀ ಬ್ರಹ್ಮಣ್ಯತೀರ್ಥರು ಯತ್ಯಾಶ್ರಮವನ್ನು ಕೊಟ್ಟು, "ಶ್ರೀವ್ಯಾಸತೀರ್ಥ" ರೆಂದು ನಾಮಕರಣ ಮಾಡಿದರು. ಶಾಸನಗಳಲ್ಲಿಯೂ ಸಹ "ಬ್ರಹ್ಮಣ್ಯತೀರ್ಥ ಶಿಷ್ಯಾಯಾ, ವ್ಯಾಸ ತೀರ್ಥಾಯಾ..." ಎಂದು ಸ್ಪಷ್ಟವಾಗಿ ಉಲ್ಲೇಖಿತವಾಗಿದೆ.

ಈ ವ್ಯಾಸತೀರ್ಥರು ದೇಶಪರ್ಯಾಟನತ್ವೇನ ಮಿಥಿಲಾ ದೇಶದಲ್ಲಿರುವಾಗ,ಉತ್ತರ ಹಿಂದೂಸ್ಥಾನದ ಮಿಥಿಲೆಯಲ್ಲಿ, ವಾದದಲ್ಲಿ ಅಜೇಯನಾದ ಪಕ್ಷಧರ ಮಿಶ್ರನನ್ನು ಸೋಲಿಸಿ, ದಿಗ್ವಿಜಯ ಸಾಧಿಸಿದರು. ಆಗ ಪಕ್ಷದರ ಮಿಶ್ರನು ಇವರನ್ನು ಕೊಂಡಾಡುತ್ತ "ನಾನು ಅಧ್ಯಯನ ಮಾಡಿದ, ಹಾಗೂ ಮಾಡದ ಎಲ್ಲವನ್ನು ಇವರು ಅಧ್ಯಯಿಸಿ, ನನಗೆ ಪ್ರತಿವಾದಿಯಾಗಿ ನಿಂತು, ನನ್ನನ್ನು ಸೋಲಿಸಿದವರಲ್ಲಿ ನವೀನ ವ್ಯಾಸರ ವಿನಾ ಮತ್ತೊಬ್ಬರನ್ನು ಭರತ ಭೂಮಿಯಲ್ಲಿ ನಾನು ನೋಡಲಿಲ್ಲ ಎಂದಿದ್ದಾನೆ. ಹೀಗಾಗಿ ಉತ್ತರ ಹಿಂದೂಸ್ಥಾನದಲ್ಲಿ ಇವರ ಕೀರ್ತಿ ಅಜರಾಮರವಾಗಿದೆ. ದೆಹಲಿಯ ಸುಲ್ತಾನ ಬಹಲೂಲ್

ಲೂಧಿಯೆಂಬ ಆಫ್ಘನ್ ದೊರೆಯು, ಆನೆ, ಒಂಟೆ, ಹಸಿರು ನಿಶಾನೆ, ಚಿತ್ರಗಳನ್ನು ಗೌರವ ಕಾಣಿಕೆಯಾಗಿ ಶ್ರೀ ವ್ಯಾಸ ತೀರ್ಥರಿಗೆ ಅರ್ಪಿಸಿದನು.

ಕಂಚಿಯಲ್ಲಿದ್ದಾಗ ವ್ಯಾಸತೀರ್ಥರಿಗೆ ವಿಷ ಪ್ರಯೋಗ ವಾಗಿ, ಅವರು ಅದನ್ನು ಜೀರ್ಣಿಸಿಕೊಂಡು,ತಾವು ಪ್ರಹ್ಲಾ ದಾಂಶರು ಎಂಬುದನ್ನು ಪರೋಕ್ಷವಾಗಿ ನಿರೂಪಿಸಿದರು. ಅಲ್ಲಿನ ಪಂಡಿತರ ಕೋರಿಕೆಯಂತೆ, ತಮ್ಮ ಮತದ ಸಾರ ಸರ್ವಸ್ವವನ್ನು ಒಂದೇ ಶ್ಲೋಕದಲ್ಲಿ "ಶ್ರೀಮನ್ಮಧ್ವಮತೇ ಹರಿಃ ಪರತರಹ..... ವೇದ್ಯೋ ಹರಿಃ" ಎಂಬುದಾಗಿ ಹೇಳಿ ತತ್ತ್ವ ಸಮರ್ಥಿಸಿದರು.

ಶ್ರೀ ವ್ಯಾಸತೀರ್ಥರು ದಕ್ಷಿಣೋತ್ತರ ದೇಶಗಳಲೆಲ್ಲ ದಿಗ್ವಿಜಯ ಸಾಧಿಸಿ ತಮ್ಮ ವಿದ್ಯಾಗುರುಗಳಾದ ಶ್ರೀಪಾದ ರಾಜರಲ್ಲಿ ಬಂದು, ಪುನಃ ಪಾಠಕ್ಕಾರಂಭ ಮಾಡಿದರು. ಶ್ರೀ ವ್ಯಾಸತೀರ್ಥರ ಪ್ರೌಢಿಮೆಯನ್ನು ಕಂಡು, ಮನಃಪೂರ್ತಿ ಯಾಗಿ ಶ್ಲಾಘಿಸಿದವರು, ಗುರುಗಳಾದ ಶ್ರೀಪಾದರಾಜರು.

ವಿಜಯನಗರದ ಅರಸನಾಗಿದ್ದ ವಿರೂಪಾಕ್ಷ (ಕ್ರಿ.ಶ. 1465 - 1485 ) ನ ಅಕೃತ್ಯಗಳಿಂದ ಎಲ್ಲ ಸಾಮಂತರು ಬೇಸತ್ತಿದ್ದರು. ಸಾಳುವ ನರಸಿಂಹನು, (ಕ್ರಿ.ಶ. 1485-1493) ತಿರುಪತಿ ವೆಂಕಟೇಶ್ವರ ದೇವಾಲಯದ ಅರ್ಚಕರ ಅಕೃತ್ಯ ಗಳಿಗೆ ಬೇಸತ್ತು ಅವರ ಸಂತತಿಯನ್ನೇ ನಾಶ ಮಾಡಿದಾಗ ಬಂದ ಬ್ರಹ್ಮಹತ್ಯಾ ದೋಷವನ್ನು ಶ್ರೀಪಾದರಾಜರಿಂದ ಪರಿಹರಿಸಿಕೊಂಡು, ವಿಜಯನಗರದ ಚಕ್ರವರ್ತಿಯಾಗಿ, ಶ್ರೀ ವ್ಯಾಸತೀರ್ಥರನ್ನು ರಾಜಗುರುಗಳಾಗಿ ಸ್ವೀಕರಿಸಿ, ಅವರನ್ನು ವೇತ್ರಾಸನದಲ್ಲಿ ಕೂಡಿಸಿ, ಸಕಲ ರಾಜ ಮಾರ್ಯಾದೆಯನ್ನು ತಾನೇ ಸ್ವತಃ ಮಾಡಿದನು. ಇಲ್ಲಿಂದ ಶ್ರೀ ವ್ಯಾಸತೀರ್ಥರ ರಾಜ ಸಭಾ ಪ್ರವೇಶ ಮತ್ತು ರಾಜ್ಯಾಡಳಿತ ಪ್ರಾರಂಭವಾಯಿತು. ಅಂದಿನಿಂದಲೇ ವೆಂಕಟಗಿರಿಯ ಆಧಿಪತ್ಯವು ಶ್ರೀವ್ಯಾಸ ತೀರ್ಥರದಾಯಿತು. ತಿರುಪತಿ ಶ್ರೀ ಕ್ಷೇತ್ರದ ಪೂಜೆಯನ್ನು ತಾವೇ ವಹಿಸಿಕೊಂಡು, ಒಬ್ಬರಿಗೆ ಮತ್ತೊಬ್ಬರು ಜವಾಬ್ದಾರರಿ ರುವಂತೆ ಅಧಿಕಾರವರ್ಗವನ್ನು ನಿಯಮಿಸಿ, ತಂತ್ರ ಸಾರೋ ಕ್ತವಾಗಿ ಪೂಜಾವಿಧಾನವನ್ನು ಏರ್ಪಡಿಸಿದರು.

ವೆಂಕಟಪತಿಯ ಪೂಜೆಯನ್ನು ಬ್ರಹ್ಮಾದಿ ದೇವತೆಗಳು ಸನಕಾದಿಗಳೂ ಅಪೇಕ್ಷಿಸುತ್ತಾರೆ. ಈ ಭಾಗ್ಯವು ಪೂರ್ವ ಪುಣ್ಯದಿಂದ ತಾನಾಗಿ ಬಂದೊದಗಿದ್ದರಿಂದ, ಬೆಟ್ಟವನ್ನು ಪಾದ ದಿಂದ ಸ್ಪರ್ಶಿಸದೆ, ಮೊಣಕಾಲಿನಿಂದ ಹತ್ತಿ ಭಕ್ತಿಯಿಂದ ಪೂಜಿಸುತ್ತಿದ್ದರು. ಶ್ರೀ ವ್ಯಾಸತೀರ್ಥರು, ದೇವಸ್ಥಾನದ ಎಲ್ಲ ಕಾರ್ಯಗಳ ನಿರ್ವಹಣೆಗೆ ಅನೇಕ ದಾನ, ದತ್ತಿಗಳನ್ನು ನೀಡಿದ್ದಾರೆಂದು, ದೇವಾಲಯದ ಗರ್ಭಗುಡಿಯ ಶಿಖರಕ್ಕೆ ಚಿನ್ನದ ರೇಖುನ್ನು ಹೊದಿಸಿ ಅದರಲ್ಲಿ ಉತ್ತರ ದಿಕ್ಕಿನಲ್ಲಿ ವಿಮಾನ ಶ್ರೀನಿವಾಸನ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಎದುರಿಗೆ ಬೇಡಿ ಹನುಮಂತನನ್ನು ಪ್ರತಿಷ್ಠಾಪಿಸಿದರೆಂದು, ಅನೇಕ ಧರ್ಮ ಶಾಸನಗಳಲ್ಲಿ ಕಂಡು ಬಂದಿದೆ. ಇವರು ಸುಮಾರು ಹನ್ನೆರಡು ವರ್ಷಗಳ ಕಾಲ ಅಂದರೆ, ಸುಮಾರು ಕ್ರಿ.ಶ. 1486 ರಿಂದ 1498ರ ವರೆಗೆ, ಪ್ರತಿ ಶುಕ್ರವಾರದ ಪುಳಕಾಭಿಷೇಕ ಪೂಜೆ ಯನ್ನು ತಾವೇ ಸ್ವತಃ ಮಾಡುತ್ತಿದ್ದರು. ಇದರ ಜೊತೆಗೆ ಸಂಸ್ಥಾನದ ಪೂಜೆ, ವಿದ್ವತ್ಸಭಾ,ವಾದಿ ನಿಗ್ರಹ ಕಾರ್ಯ ಇತ್ಯಾದಿಗಳನ್ನೂ ನಿರ್ವಹಿಸುತ್ತಿದ್ದರು. ಶ್ರೀಗಳವರು, ಸಾಳುವ ನರಸಿಂಹನ ಕಾಲದಲ್ಲೇ ವ್ಯಾಸತ್ರಯಗಳೆಂದು ಪ್ರಸಿದ್ಧಿ ಯಾಗಿರುವ ನ್ಯಾಯಾಮೃತ, ತರ್ಕ ತಾಂಡವವನ್ನು, ಶ್ರೀರಂಗ ದಲ್ಲಿ ಮತ್ತು ಚಂದ್ರಿಕಾ,ಗ್ರಂಥಗಳನ್ನು ರಚಿಸಿದರೆಂಬ ಪ್ರತೀತಿ ಇದೇ. ಶ್ರೀವ್ಯಾಸತೀರ್ಥರು ತಮ್ಮ ದಿವ್ಯ ದೃಷ್ಟಿಯಿಂದ, ವೆಂಕಟಪತಿಯ ಅರ್ಚಕ ತಾತಚಾರ್ಯರ ವಂಶದಲ್ಲಿ ಪುತ್ರ ಸಂತಾನವಾಗಿ ರುವುದನ್ನು ಅರಿತು, ಅವರೇ ಆ ಮಗುವಿಗೆ ವಿದ್ಯಾಭ್ಯಾಸ, ತಂತ್ರ ಸಾರ, ಆಗಮಾದಿ ಶಾಸ್ತ್ರಾಭ್ಯಾಸ ಮಾಡಿಸಿ, ಆ ವಂಶಕ್ಕೆ ಪೂಜಾಧಿಕಾರವನ್ನು ವಹಿಸಿದ, ಉದಾರ ಮನೋ ಭಾವ ದಾಖಲೆಯೇ ಆಗಿದ್ದು, ಸರ್ವ ವಂದ್ಯವಾಗಿದೆ.

ಸಾಳುವ ನರಸಿಂಹ, ತಮ್ಮಾರಾಯ, ನರಸನಾಯಕ ಮತ್ತು ವೀರನರಸಿಂಹ ಭೂಪತಿಗಳ ಕಾಲದಲ್ಲೂ ಶ್ರೀವ್ಯಾಸ ತೀರ್ಥರು ರಾಜಗುರುಗಳಾಗಿ ರಾಜ್ಯಾಧಿಕಾರವನ್ನು ನಡೆಸಿದ ಹೆಗ್ಗಳಿಗೆ ಅವರಿಗೆ ಸಲ್ಲುತ್ತದೆ. ಈ ಮಧ್ಯೆ ರಾಜಧಾನಿಯಾದ ವಿಜಯನಗರದಲ್ಲಿ ನೆಲೆಸಿದರು. ಸುಮಾರು ಕ್ರಿ.ಶ.1500 ರಲ್ಲಿ ಚಕ್ರತೀರ್ಥದ ಬಳಿ ಯಂತ್ರೋದ್ಧಾರಕ ಪ್ರಾಣದೇವರನ್ನು, ನಂತರದ ಅವಧಿಯಲ್ಲಿ ಸುಮಾರು 732 ಪ್ರಾಣದೇವರ ಪ್ರತೀಕಗಳನ್ನು ಪ್ರತಿಷ್ಠಾಪಿಸಿರುವುದು ಇತಿಹಾಸ.

ಶ್ರೀಪಾದರಾಜರಿಗೆ ಪಂಢರಪುರದಲ್ಲಿ ದೊರೆತ ಸಂಪುಟ ಗಳಲ್ಲಿ ಒಂದನ್ನು ಮಾತ್ರ ತೆರೆಯಲು ಸಾಧ್ಯವಾಗದಿದ್ದನ್ನು ಶ್ರೀ ವ್ಯಾಸತೀರ್ಥರು ಅನಾಯಾಸ ತೆರೆದಾಗ ಅದರಲ್ಲಿ ರುಕ್ಮಿಣೀ ಸತ್ಯಭಾಮ ಸಮೇತ ಶ್ರೀ ಗೋಪಾಲ ಕೃಷ್ಣನ ವಿಗ್ರಹಗಳು ಇದ್ದು, ಇವುಗಳು ಜಾಂಬವತಿಯಿಂದ ಪೂಜಿತವಾದುವುಗಳೆಂದು ವ್ಯಾಸವಿಜಯಕಾರರು ಅಭಿಪ್ರಾಯ ಪಟ್ಟಿದ್ದಾರೆ.

ಕ್ರಿಶ. 1509 ರಲ್ಲಿ ಶ್ರೀ ಕೃಷ್ಣದೇವರಾಯನು ವಿಜಯ ನಗರದ ಚಕ್ರವರ್ತಿಯಾಗಿದ್ದು, ಅದು ಸುವರ್ಣಾಧ್ಯಾಯದಲ್ಲಿ ಬರೆದಿಡುವ ಕಾಲವಾಗಿದ್ದು, ಪ್ರಖ್ಯಾತ ವಿದ್ಯಾ ಕೇಂದ್ರವೂ ಆಗಿತ್ತು. ಶ್ರೀ ಕೃಷ್ಣದೇವರಾಯನು ಚಕ್ರವರ್ತಿಯಾಗಿದ್ದರೂ ,

ಗುರುಗಳಾದ ಶ್ರೀ ವ್ಯಾಸತೀರ್ಥರ ದರ್ಶನ ಮಾಡಲು, ಮಠದ ಬಾಗಿಲ ಬಳಿ ನಿಂತು ಅವರ ಅನುಮತಿ ಪಡೆದೇ ಒಳಗೆ ಪ್ರವೇಶಿಸುತ್ತಿದ್ದನು. ಇಂತಹ ದಾಸ್ಯ ಭಾವವನ್ನು ಚಕ್ರವರ್ತಿಯೇ ಪ್ರದರ್ಶಿಸಬೇಕಾದರೆ, ಇನ್ನು ಒಳಗಿರುವ ಯತಿಸೌರ್ವಭೌಮರಾದ ಶ್ರೀ ವ್ಯಾಸತೀರ್ಥರ ವ್ಯಕ್ತಿ ಗೌರವವೆಷ್ಟು ಮೆಟ್ಟಿನದಿರಬೇಕು, ಎಂಬುದನ್ನು ಊಹಿಸಲು ಸಾಧ್ಯವಿಲ್ಲ.

ಶ್ರೀ ಕೃಷ್ಣ ದೇವರಾಯನಿಗೆ ಕುಹುಯೋಗವಿರುವುದನ್ನರಿತ ಶ್ರೀ ವ್ಯಾಸತೀರ್ಥರು ಸಕಲ ಶಾಂತಿ ಕರ್ಮಗಳನ್ನು ತಾವೇ ಮಾಡಿಸಿ,ರಾಜ್ಯವನ್ನು ದಾನ ಪಡೆದು "ಕರ್ನಾಟಕ ರತ್ನ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾಗಿ, ಅನೇಕ ದಾನಗಳನ್ನು ನೀಡಿದರು. ಆಗ ಶ್ರೀ ಕೃಷ್ಣ ದೇವರಾಯನು, ಸೇವಕನಂತೆ ಕೈಜೋಡಿಸಿ ನಿಂತಿದ್ದನು. ಕುಹುಯೋಗವು ನಿಶ್ಚಿತ ಸಮಯದಲ್ಲಿ ಬಂದಾಗ, ಶ್ರೀ ಗಳು ತಮ್ಮ ಕಾವೀಶಾಟಿಯನ್ನು ಒಗೆದಾಗ ಆ ಯೋಗವು ಅದನ್ನು ಭಸ್ಮ ಮಾಡಿ ಶಾಂತಿಯಾಗಿ ಪರಿಹಾರವಾಯಿತು. ಈ ಸಂದರ್ಭದ ನೆನಪಿಗಾಗಿಯೇ ಶ್ರೀ ವ್ಯಾಸತೀರ್ಥರ ಹೆಸರಿನ ಕೊನೆಯಲ್ಲಿ "ರಾಯ" "ರಾಜ" ಶಬ್ಧ ಪ್ರಯೋಗ ಪ್ರಾರಂಭವಾಗಿ, ಶ್ರೀ ಶ್ರೀ ವ್ಯಾಸರಾಯರೆಂದು ಶ್ರೀ ವ್ಯಾಸರಾಜರೆಂಬ ಹೆಸರು ಶಾಶ್ವತವಾಯಿತು. ನಂತರ ಶ್ರೀ ವ್ಯಾಸರಾಯರು ಶ್ರೀ ಕೃಷ್ಣದೇವರಾಯನಿಗೆ ಸಾಮ್ರಾಜ್ಯಾಧಿ ಪತ್ಯವನ್ನು ಹಿಂತಿರುಗಿಸಿದರು.ಶ್ರೀ ಕೃಷ್ಣದೇವರಾಯನು, ಕುಹುಯೋಗ ಪರಿಹಾರದ ನಂತರ ತನ್ನ ಹಾಗೂ ಪತ್ನಿಯರ ವಿಗ್ರಹಗಳನ್ನು ವೆಂಕಟಪತಿಯ ದೇವಾಲಯದ ಪ್ರಾಕಾರದಲ್ಲಿ ನಿರಂತರ ಭಕ್ತಿ ವಿಗ್ರಹವಾಗಿರುವಂತೆ ಪ್ರತಿಷ್ಠಾಪಿಸಿದನು. ಸೋಸಲೆ ಶ್ರೀ ವ್ಯಾಸರಾಯರ ಮಠದಲ್ಲಿ ಇಂದಿಗೂ "ದರ್ಬಾರ"ನ್ನು ನಡೆಸುತ್ತಿರುವುದು, ಅದರ ಪ್ರತೀಕವಾಗಿದ್ದು, ತಿರುಪತಿಯ ದೇವಸ್ಥಾನದಲ್ಲಿ ಸೋಸಲೆ ವ್ಯಾಸರಾಜ ಮಠಕ್ಕೆ ರಾಜಗೌರವ ಸಿಗುತ್ತಿರುವುದು. ವಿಜಯನಗರದ ಅರಸರೊಬ್ಬರೇ ಶ್ರೀ ವ್ಯಾಸರಾಯರ ಮಠಕ್ಕೆ ನೀಡಿದ ಜಹಗೀರುಗಳನ್ನು ಇದುವರೆಗೆ ದೊರೆತಿರುವಷ್ಟು ಶಾಸನಗಳ ಆಧಾರದ ಮೇಲೆ ಒಟ್ಟು ಗೂಡಿಸಿದರೆ ಒಂದು ಪ್ರತ್ಯೇಕ ರಾಷ್ಟ್ರವಾಗುವಷ್ಟಿದೆ. ಆದರೆ ..?

ಶ್ರೀ ವ್ಯಾಸರಾಯರು ವ್ಯಾಸ ಮತ್ತು ದಾಸ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆ ಅಪಾರ, ಇವರು, ಶ್ರೀ ವಾದಿರಾಜರು, ಶ್ರೀ ಪುರಂದರದಾಸರು, ಶ್ರೀ ಕನಕದಾಸರನ್ನು ಧಾರ್ಮಿಕ ಸಮಾಜಕ್ಕೆ ಪರಿಚಯಿಸಿದವರು, ಅದಕ್ಕೆ ಶ್ರೀ ಪುರಂದರ ದಾಸರು " ಈಸು ಮುನಿಗಳಿದ್ದೇನು ಮಾಡಿದರು ವ್ಯಾಸ ಮುನಿ ಮಧ್ವಮತವನುದ್ಧರಿಸಿದ" ಎಂದು ಕೊಂಡಾಡಿದ್ದಾರೆ. ಇಂತಹ ಮಹಾನುಭಾವರು ಹೇವಿಳಂಬಿ ಸಂವತ್ಸರದ ಫಾಲ್ಗುಣ ಬಹುಳ ಚೌತಿ, ಕ್ರಿ.ಶ. 1539, ಮಾರ್ಚ 8 ನೇ ತಾರೀಖು ಶನಿವಾರ ನವವೃಂದಾವನ ಗಡ್ಡೆಯಲ್ಲಿ ವೃಂದಾವನಸ್ಥರಾದರೆಂದರೆ ಎಂತಹ ಕನ್ನಡಿಗನ ಹೃದಯವೂ ದುಃಖತಪ್ತವಾಗದೇ ಇರದು.

"ಶ್ರೀ ಕೃಷ್ಣಾರ್ಪಣ ಮಸ್ತು"


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.



# ನಮ್ಮ ದೇವಾಲಯ

# ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಆಲಯ, ತರಿಗೊಂಡ


– ಮೂಲ. ಐ.ಎಲ್.ಎನ್. ಚಂದ್ರಶೇಖರರಾವ್

ಅನುವಾದ : ಸೂರ್ಯವಂಶಿ

0877 - 2233840


ಕಲಿಯುಗದ ಪ್ರತ್ಯಕ್ಷದೈವ, ಕೋಟಿಜೀವರಾಶಿಗಳ ಮನ, ಮನೆ ದೇವರಾದ ಶ್ರೀ ವೇಂಕಟೇಶ್ವರಸ್ವಾಮಿಯ ಭಕ್ತಾಗ್ರಣಿಯಾದ ಮಾತೃಶ್ರೀ ತರಿಗೊಂಡವೆಂಗಮಾಂಬ ಜನ್ಮಸ್ಥಳವಾದ ತರಿಗೊಂಡದಲ್ಲಿ ಆಕೆಯ ಕೈಯಲ್ಲಿ ಪೂಜೆಗಳನ್ನು ಸ್ವೀಕರಿಸಿದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ, ಬೇಡಿದ ವರಗಳನ್ನು ನೀಡಿ ಭಕ್ತರ ಅಭೀಷ್ಟಗಳನ್ನು ನೆರವೇರಿಸುವ ದೇವರೆಂದು ಪ್ರಸಿದ್ಧಿಯಾಗಿ ಅಶೇಷ ಭಕ್ತರ ವಿಶೇಷ ಆರಾಧನೆಗಳನ್ನು ಸ್ವೀಕರಿಸುತ್ತಿದ್ದಾನೆ.

ಚಿತ್ತೂರು ಜಿಲ್ಲೆಯಲ್ಲಿ ವಾಲ್ಮೀಕಿಪುರಂ ಪಟ್ಟಣಕ್ಕೆ ಆರು ಕಿಲೋ ಮೀಟರ್ ದೂರದಲ್ಲಿ ''ತರಿಗೊಂಡ'' ಗ್ರಾಮವಿದೆ. ಹಿಂದೆ ಈ ಕ್ಷೇತ್ರಕ್ಕೆ ತರಿಕುಂಡ ಎಂಬ ಹೆಸರು ಇತ್ತು. ತರಿಕುಂಡ ಅಂದರೆ ಮೊಸರನ್ನು ಕಡೆಯುವ ಮಡಕೆ ಎಂದರ್ಥ. ಹಿಂದಿನ ಕಾಲದಲ್ಲಿ ಈ ಪ್ರಾಂತ್ಯದಲ್ಲಿ ಒಬ್ಬ ಹೆಂಗಸು ಮೊಸರನ್ನು ಕಡೆಯುತ್ತಿರುವ ಸಮಯದಲ್ಲಿ ಆ ಮಡಕೆಯಲ್ಲಿ ಸಾಲಿಗ್ರಾಮ ಶಿಲಾ ರೂಪದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಉದ್ಭವಿಸಿದನಂತೆ. ಆದ್ದರಿಂದಲೇ ಆ ಪ್ರಾಂತ್ಯಕ್ಕೆ ತರಿಕುಂಡ ಎಂಬ ಹೆಸರು ಬಂತೆಂದು ಸ್ಥಳ ಪುರಾಣ ಹೇಳುತ್ತದೆ. ತರಿಕುಂಡ ಪ್ರಜೆಗಳ ಬಳಕೆಯಲ್ಲಿ ಕ್ರಮೇಣ ತರಿಗೊಂಡ ಎಂದು ಬದಲಾಯಿತು.

## ಸ್ಥಳ ಪುರಾಣ

ಸ್ಥಳ ಪುರಾಣದ ಪ್ರಕಾರ ಹಿಂದೆ ಆ ಪ್ರಾಂತ್ಯವೆಲ್ಲಾ ಕಾಡಿನಂತೆ ಇತ್ತು. ಆ ಕಾಡಿನಲ್ಲಿ ಕೆಲವರು ನಿವಾಸಗಳನ್ನು ಏರ್ಪಡಿಸಿಕೊಂಡು ಹಸುಗಳು, ಎಮ್ಮೆಗಳನ್ನು ಸಾಕುತ್ತಾ ಹಾಲು, ಮೊಸರು, ಮಜ್ಜಿಗೆ ಮುಂತಾದವುಗಳನ್ನು ಗ್ರಾಮದ ಪ್ರಜೆಗಳಿಗೆ ಸರಬರಾಜು ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಒಂದು ದಿನ ಬೆಳಿಗ್ಗೆಯೇ ಒಬ್ಬ ಹೆಂಗಸು ರಾತ್ರಿ ಹೆಪ್ಪು ಹಾಕಿದ ಹಾಲು ಮೊಸರಾದ್ದರಿಂದ ಅದನ್ನು ಕಡೆಯಲು ಆರಂಭಿಸಿದಳು. ಸ್ವಲ್ಪ ಹೊತ್ತಿಗೆ ಮಡಕೆಯಲ್ಲಿ ಕಡಗೋಲಿಗೆ ಅಡ್ಡವಾಗಿ ಯಾವುದೋ ವಸ್ತು ತಗುಲಿದಂತೆ ಭಾಸವಾಯಿತು ನೋಡಿದಾಗ ಒಂದು ಶಿಲೆ ಕಂಡು ಬಂತು. ಅದಕ್ಕೂ ಹಿಂದಿನ ದಿನ ರಾತ್ರಿ ''ರಾಮನಾಯ ನಿಂಗಾರು'' ಎಂಬ ರೈತನ ಸ್ವಪ್ನದಲ್ಲಿ ನರಸಿಂಹ ದೇವರು ದರ್ಶನವನ್ನು ನೀಡಿ ತಾನು ಆ ಗ್ರಾಮದಲ್ಲಿ ಸ್ವಯಂಭೂವಾಗಿ ಶಿಲಾರೂಪದಲ್ಲಿ ದರ್ಶನವನ್ನು ನೀಡುತ್ತೇನೆಂದು, ಆಲಯವನ್ನು ನಿರ್ಮಿಸಬೇಕೆಂದು ಆದೇಶಿದಂತೆ. ಮಜ್ಜಿಗೆಯ ಮಡಕೆಯಲ್ಲಿ ಸ್ವಾಮಿಯು ಸ್ವಯಂಭೂವಾಗಿ ಶಿಲಾರೂಪದಲ್ಲಿ ಕಂಡು ಬಂದ ವಿಷಯವನ್ನು ಆ ಮಹಿಳೆ ಗ್ರಾಮಸ್ಥರಿಗೆ ತಿಳಿಸಿದ್ದರಿಂದ ....ಈ ವಿಷಯ ಆ ರೈತನಿಗೆ ತಿಳಿದು ಆತ ಆಲಯವನ್ನು ನಿರ್ಮಿಸಿ ಸ್ವಾಮಿಯನ್ನು ಪ್ರತಿಷ್ಠಾಪಿಸಿದಂತೆ ಆ ಸ್ಥಳ ಪುರಾಣ ತಿಳಿಸುತ್ತಿದೆ.

## ಮಾತೃಶ್ರೀ ತರಿಗೊಂಡ ವೆಂಗಮಾಂಬಯಿಂದ ಪೂಜೆಗಳನ್ನು ಸ್ವೀಕರಿಸಿದ ಭಗವಂತ

18 ನೆಯ ಶತಮಾನದ ಪ್ರಾರಂಭದಲ್ಲಿ ತರಿಗೊಂಡ ಗ್ರಾಮದಲ್ಲಿ ಕಾನಾಲ ಕೃಷ್ಣಯ್ಯ,ಮಂಗಮ್ಮ ಎಂಬ ದಂಪತಿಗಳಿಗೆ ತಿರುಮಲೆಯ ಯಾತ್ರೆ

ಯನ್ನು ಮಾಡಿ ಬಂದ ನಂತರ ಒಬ್ಬ ಮಗಳು ಜನಿಸಿದಳು. ಅವರು ಆಕೆಗೆ 'ವೆಂಕಮ್ಮ' ಎಂದು ನಾಮಕರಣ ಮಾಡಿದರು. ಚಿಕ್ಕಂದಿನಿಂದಲೂ ಆ ಹುಡುಗಿ ಶ್ರೀ ವೇಂಕಟೇಶ್ವರಸ್ವಾಮಿಯ ಮೇಲೆ ಅಪರಿಮಿತವಾದ ಭಕ್ತಿಯನ್ನು ಹೊಂದಿದ್ದಳು. ವೆಂಕಮ್ಮನಿಗೆ ಯುಕ್ತ ವಯಸ್ಸು ಬಂದಾಗ ಆ ಭಕ್ತಿ ಪ್ರೇಮವಾಗಿ ಬದಲಾಗಿ ಶ್ರೀನಿವಾಸನೇ ತನ್ನ ಪತಿಯೆಂದು ಭಾವಿಸತೊಡಗಿದಳು. ಇದನ್ನು ಗಮನಿಸಿದ ಅವಳ ತಂದೆ ತಾಯಿಗಳು ಆಕೆಗೆ ವಂಕಟಾಚಲಪತಿ ಎಂಬ ಯುವಕನೊಂದಿಗೆ ವಿವಾಹವನ್ನು ನಡೆಸಿದರು. ಆದರೆ ಆಕೆ ಸಂಸಾರಕ್ಕೆ ಹೊರಡುವ ಮೊದಲೆ ಆ ಯುವಕ ಮರಣಿಸಿದ. ಆದರೂ ತನ್ನ ಪತಿ ಶ್ರೀನಿವಾಸನೇ ಎಂದು ಭಾವಿಸಿದ ವೆಂಕಮ್ಮ ನಿತ್ಯ ಸುಮಂಗಲಿಯಾಗಿ ಇರುತ್ತಾ ಶ್ರೀನಿವಾಸನನ್ನು ಪೂಜಿಸುತ್ತಿದ್ದಳು. ಗ್ರಾಮದಲ್ಲಿ ನೃಸಿಂಹಸ್ವಾಮಿಯ ಆಲಯ ವನ್ನು ಸೇರಿ ಪೂಜೆಗಳನ್ನು ಮಾಡುವುದರೊಂದಿಗೆ ಆಲಯದಲ್ಲಿ ಆಂಜನೇಯ ಸ್ವಾಮಿಯ ಹಿಂಭಾಗದ ಸ್ಥಳದಲ್ಲಿ ಕುಳಿತು ತಪಸ್ಸನ್ನಾಚರಿಸುತ್ತಿದ್ದಳು. ಕೆಲದಿನಗಳ ನಂತರ ಆಕೆ ತಿರುಮಲೆಯನ್ನು ಸೇರಿಕೊಂಡರು. ತಿರು ಮಲೆಯಲ್ಲಿ ಸ್ವಾಮಿಯನ್ನು ಸೇವಿಸುತ್ತಾ ಅನೇಕ ಕಾವ್ಯಗಳನ್ನು ರಚಿಸಿದರು. ಅದರಲ್ಲಿ ವೇಂಕಟಾಚಲ ಮಹಾತ್ಮೆ ಪ್ರಸಿದ್ಧವಾದುದು. ಪ್ರತೀದಿನ ಏಕಾಂತ ಸೇವೆಯ ಸಮಯದಲ್ಲಿ ಮೂಲ ವಿಗ್ರಹಕ್ಕೆ ಮುತ್ತಿನ ಆರತಿಯನ್ನು ಸಮರ್ಪಿಸುತ್ತಿದ್ದಳು. ನಿತ್ಯವೂ ಸ್ವಾಮಿಯ ಸೇವೆಯಲ್ಲಿ ಕೃತಾರ್ಥಳಾಗುತ್ತಿದ್ದಳು. ನಂತರ 1817 ರಲ್ಲಿ ಶ್ರಾವಣ ಶುದ್ಧ ನವಮಿಯಂದು ಸಜೀವ ಸಮಾಧಿಯನ್ನು ಸೇರಿದಳು. ಈ ರೀತಿ ತರಿ ಗೊಂಡ ವೆಂಗಮಾಂಬಳಿಂದ ಪೂಜೆಯನ್ನು ಸ್ವೀಕರಿಸಿದ ದೇವರು ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ.

## ಆಲಯ ಚರಿತ್ರೆ

ಆಲಯದಲ್ಲಿನ ಮೂರು ಶಾಸನಗಳು ಚರಿತ್ರೆಗೆ ಪ್ರಮಾಣ ವಾಗಿವೆ. 1559 ರ ಶಾಸನದಲ್ಲಿ ಕಂದಾಯದ ಪ್ರಸ್ತಾವನೆ ಇದ್ದು ಅವರು ಅದಕ್ಕೂ ಮೊದಲೇ ಆಲಯವನ್ನು ನಿರ್ಮಿಸಿದಂತೆ ತಿಳಿದು ಬರುತ್ತಿದೆ. ಅಂದರೇ 15 ನೇಯ ಶತಮಾನದಲ್ಲೇ ಈ ದೇವಾಲಯವನ್ನು ನಿರ್ಮಿಸಲಾಗಿದೆಯೆಂದು ಅಂದಾಜು ಮಾಡಲಾಗಿದೆ. 1846, 1862 ರ ಶಾಸನಗಳು ಅಡುಗೆಯ ಮನೆ, ಹೋಮಶಾಲೆ, ಕಲ್ಯಾಣ ಮಂಟಪಗಳ ನಿರ್ಮಾಣಗಳ ಬಗೆಗೆ ವಿವರಿಸಿವೆ. ಈಗ ಈ ಆಲಯ ತಿರುಮಲೆ ತಿರುಪತಿ ದೇವಸ್ಥಾನದ ಆಳ್ವಿಕೆಯಲ್ಲಿ ಇದೆ.

## ಆಲಯದ ವಿಶೇಷಗಳು

ತರಿಗೊಂಡ ಗ್ರಾಮದಲ್ಲಿ ಪ್ರಧಾನ ರಹದಾರಿಯ ಪಕ್ಕದಲ್ಲೇ ಆಲಯವು ಪೂರ್ವಾಭಿಮುಖವಾಗಿ ಇದೆ. ಆಲಯದ ಪ್ರಧಾನ ಪ್ರವೇಶ ದ್ವಾರದ ಮೇಲೆ ಮೂರು ಅಂತಸ್ತುಗಳ ಗೋಪುರವನ್ನು ನಿರ್ಮಿಸ ಲಾಗಿದೆ. ವಿಶಾಲವಾದ ಪ್ರಾಂಗಣದಲ್ಲಿ ಪ್ರಧಾನ ಆಲಯ, ಉಪ ಆಲಯಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ಪ್ರಧಾನ ಆಲಯಕ್ಕೆ ಎದಿರಿನಲ್ಲಿ ಗರುಡ ಮಂಟಪ, ಧ್ವಜಸ್ತಂಭ, ಸತ್ಯಪ್ರಮಾಣದ ಪೀಠ ಇವೆ. ಸತ್ಯಪ್ರಮಾಣ ಪೀಠದ ಬಳಿ ಪ್ರಮಾಣ ಮಾಡಿದವರು ಯಾರೂ ಸುಳ್ಳು ಹೇಳುವುದಿಲ್ಲವೆಂದು ನಂಬಿಕೆ. ಆದ್ದರಿಂದ ಈ ಕ್ಷೇತ್ರವನ್ನು 'ಸತ್ಯ ಪ್ರಮಾಣ ಗಳ ಕ್ಷೇತ್ರವೆಂದು ' ಕರೆಯುತ್ತಾರೆ.

ಪ್ರಧಾನ ಆಲಯವು, ಮಹಾಮಂಟಪ, ಮುಖಮಂಟಪ, ಅಂತ ರಾಲಯ, ಗರ್ಭಾಲಯಗಳನ್ನು ಹೊಂದಿದೆ. ಮುಂಖಮಂಟಪದಲ್ಲಿ ಉತ್ತರಾಭಿಮುಖವಾಗಿ ಇರುವ ಗರ್ಭಾಲಯದಲ್ಲಿ ಆಂಜನೇಯ ಸ್ವಾಮಿಯು ನೆಲೆಸಿದ್ದು ಪೂಜೆಗಳನ್ನು ಸ್ವೀಕರಿಸುತ್ತಿದ್ದಾನೆ. ಈ ಸ್ವಾಮಿಯ ಹಿಂಭಾಗದಲ್ಲೇ ಮಾತೃಶ್ರೀ ತರಿಗೊಂಡ ವೆಂಗಮಾಂಬ ಆಸೀನಳಾಗಿ ತಪಸ್ಸು ಮಾಡುತ್ತಿದ್ದಂತೆ ಹೇಳುತ್ತಾರೆ. ಪ್ರಧಾನ ಗರ್ಭಾಲಯದಲ್ಲಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯು ಚತುರ್ಭುಜಗಳೊಂದಿಗೆ ಆಸೀನನಾಗಿ ನೆಲೆಸಿದ್ದಾನೆ. ವಾಮಾಂಕದಲ್ಲಿ ಲಕ್ಷ್ಮೀದೇವಿಯನ್ನು ಕುಳ್ಳಿರಿಸಿಕೊಂಡಿದ್ದು ಎರಡೂ ಕೈಗಳಲ್ಲಿ ಶಂಖ ಚಕ್ರಗಳನ್ನು ಮತ್ತೊಂದು ಕೈಯಲ್ಲಿ ಅಭಯ ಮುದ್ರೆಯನ್ನು ಧರಿಸಿ ಇನ್ನೊಂದು ಕೈಯಲ್ಲಿ ಲಕ್ಷ್ಮೀದೇವಿಯನ್ನು ಹಿಡಿದು ಕೊಂಡು ದಿವ್ಯಮನೋಹರ ರೂಪದೊಂದಿಗೆ ಭಕ್ತರ ಮೇಲೆ ಕರುಣಾ ಕಟಾಕ್ಷವನ್ನು ಬೀರುತ್ತಿದ್ದಾನೆ. ಆಲಯದ ಪ್ರಾಂಗಣದಲ್ಲಿ ಪ್ರಧಾನ ಆಲಯಕ್ಕೆ ಎಡಭಾಗದಲ್ಲಿ ಪ್ರತ್ಯೇಕವಾದ ಆಲಯದಲ್ಲಿ ದೇವರ ದೇವಿಯರು ನೆಲೆಸಿದ್ದಾರೆ. ಶ್ರೀ ಚಂಚುಲಕ್ಷ್ಮೀ, ಶ್ರೀ ಲಕ್ಷ್ಮೀದೇವಿ ಒಂದೇ ಗರ್ಭಾಲಯದಲ್ಲಿ ಒಬ್ಬರ ಹಿಂದೆ ಒಬ್ಬರು ನೆಲೆಸಿರುವುದು ಇಲ್ಲಿ ವಿಶೇಷ ವಾಗಿದೆ. ಆಲಯದ ಪ್ರಧಾನ ಗೋಪುರದ ಸಮೀಪದಲ್ಲಿ ಆಲಯದ ಪ್ರಾಂಗಣದಲ್ಲಿ ಶ್ರೀ ತರಿಗೊಂಡವೆಂಗಮಾಂಬ ನೆಲೆಸಿ ಭಕ್ತರುಗಳಿಗೆ ದರ್ಶನವನ್ನು ನೀಡುತ್ತಿದ್ದಾರೆ.

## ಉತ್ಸವಗಳು

ತರಿಗೊಂಡ ಶ್ರೀ ಲಕ್ಷ್ಮಿನರಸಿಂಹಸ್ವಾಮಿಯವರ ಬ್ರಹ್ಮೋತ್ಸವ ಗಳು ಪ್ರತೀ ವರ್ಷ ಫಾಲ್ಗುಣ ಮಾಸದಲ್ಲಿನ ಶುಕ್ಲ ಪಕ್ಷದ ನವಮಿಯಂದು ಆರಂಭವಾಗಿ ಬಹುಳ ಪಕ್ಷ ಬಿದಿಗೆಯವರೆಗೂ ನಡೆಯುತ್ತದೆ. ವಿವಿಧ ವಾಹನಸೇವೆಗಳು, ರಥೋತ್ಸವಗಳು, ಕಲ್ಯಾಣೋತ್ಸವಗಳು ಅತ್ಯಂತ ವೈಭವದಿಂದ ನಡೆಯುತ್ತದೆ. ನೃಸಿಂಹ ಜಯಂತಿ, ಧನುರ್ಮಾಸ ಗಳೊಂದಿಗೆ ವಿವಿಧ ಹಬ್ಬಗಳ ಸಮಯದಲ್ಲಿ ಪ್ರತ್ಯೇಕವಾದ ಪೂಜೆಗಳನ್ನು ನೆರವೇರಿಸುತ್ತಾರೆ.

ಕೋರಿಕೆಗಳನ್ನು ನೆರವೇರಿಸುವ ದೇವರೆಂದು, ಸಂತಾನವನ್ನು ಪ್ರಸಾದಿಸುವ ಸಂತಾನ ಪ್ರದಾತನೆಂದು ವಿವಾಹ ನಿಧಾನವಾಗುತ್ತಿರುವ ವರಿಗೆ ವಿವಾಹ ಯೋಗವನ್ನು ಪ್ರಸಾದಿಸುವ ದೇವರೆಂದೇ ಹೆಸರು ಗಳಿಸಿರುವ ಈ ನರಸಿಂಹಸ್ವಾಮಿಯು ಭಕ್ತರಿಂದ ಆರಾಧನೆಗಳನ್ನು ಸ್ವೀಕರಿ ಸುತ್ತಾ ಇಲ್ಲಿ ನೆಲೆಸಿರುವ ತರಿಗೊಂಡ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯನ್ನು ದರ್ಶಿಸಿ ಭಕ್ತರುಗಳು ಧನ್ಯರಾಗಿ.

# ಪದಬಂಧ - 4

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 6 | 1 | | | | 7 | 8 | 9 |
| 2 | | | | | | | | |
| 3 | | | | | | | | |
| 4 | | 12 | | 14 | 15 | | | |
| 5 | 2 | | 13 | | | | | 10 |
| 6 | | 3 | | | | | | |
| 7 | 11 | | | | | 4 | | |
| 8 | | | | | | 5 | 16 | |

**ಎಡದಿಂದ ಬಲಕ್ಕೆ**

01.ಯಾಮುನಾಚಾರ್ಯರ ಲಕ್ಷ್ಮೀ ಸ್ತೋತ್ರ - 'ಚ' ಯಿಂದಾರಂಭ ...(4)

02.ಆಚಾರ್ಯ ಪರಂಪರೆಯಲ್ಲಿ 9ನೇ ಕೊನೆಯವರು ...(7)

03.ಶ್ರೀ ಮನ್ನಾಥಮುನಿಗಳ ಪುತ್ರ ಈ ಯಿಂದಾರಂಭ ...(5)

**ಬಲದಿಂದ ಎಡಕ್ಕೆ**

04.ಪೆರಿಯಾಳ್ವಾರ್ ತಿರುಮೊಳಿ 2-6 ರ ಪ್ರತಿ ಪಾಶುರದಲ್ಲಿ ಆಳ್ವಾರರು ಪಾಶುರವನ್ನು ಹೀಗೆ ಅಂತ್ಯಗೊಳಿಸುತ್ತಾರೆ. ...(5)
'ಕೋ' ಯಿಂದ ಆರಂಭ

05.ನಾಚ್ಚಿಯಾರ್ ತಿರುಮೊಳಿ 4 ರ ಪತ್ತನ್ನು ಪ್ರತಿ ಪಾಶುರದಲ್ಲಿ ಹೀಗೆ ಅಂತ್ಯಗೊಳಿಸಲಾಗಿದೆ. 'ಕೂಡಿಡು' ದಿಂದಾರಂಭ ...(6)

**ಮೇಲಿಂದ ಕೆಳಕ್ಕೆ**

06.ಇಯಾರ್ಪ್ಪದ ರಾಮಾನುಜ ನೂತ್ತಂದಾದಿಯ 106 ನೇ ಶಾತ್ತುಮುರೈ ಪಾಶುರದ ಆರಂಭ 'ಇ' ಯಿಂದ ಆರಂಭ ...(4)

07.ವಿಶಿಷ್ಟಾ ದ್ವೈತ ಪ್ರವರ್ತಕರನ್ನು ಈ ರೀತಿ 'ಮುನಿ' ಎಂದೂ ಕರೆಯುತ್ತಾರೆ 'ರಾಮಾ' ನಿಂದಾರಂಭ ...(6)

08.ಆಳವಂದಾರ್ ಹೆಸರಿನ ಪ್ರಸಿದ್ಧ ಪೂರ್ವಾಚಾರ್ಯರು ರಾಮಾನುಜರ ಮಾನಸಿಕ ಗುರುಗಳು 'ಯಾ' ಯಿಂದಾರಂಭ ...(5)

9. ಪೆರಿಯ ತಿರುಮೊಳಿಯ 6-4 ರಿಂದ 7-3 ರಲ್ಲಿ ತಿರುಮಂಗೈ ಆಳ್ವಾರ್ ತಮ್ಮ ಗುರು ಪಂಚ ಸಂಸ್ಕಾರ ಮಾಡಿದ ದೇವರು 'ನಂಬಿ' ಗಳಿಗೆ 100 ಪಾಶುರಗಳನ್ನರ್ಪಿಸಿದ್ದಾರೆ. ಆ ಊರಿನ ಹೆಸರು 'ನ' ಯಿಂದಾರಂಭ ...(4)

10. ಸ್ವಾಮಿ ರಾಮಾನುಜರ ಭಗವದ್ಗೀತೆಯ ಮೇಲಿನ ಭಾಷ್ಯ ...(4)

**ಕೆಳಗಿನಿಂದ ಮೇಲಕ್ಕೆ**

11.ಮೇಲುಕೋಟೆಯಲ್ಲಿ ಪಂಚರಾತ್ರರೀತಿ ದೇವರ ಆರಾಧನೆ ಮಾಡುವ ಶಾಸ್ತ್ರ'ಆ' ಯಿಂದಾರಂಭ ...(3)

**- ಪಿ.ಜಿ. ಶ್ರೀನಿವಾಸನ್**

**- 45 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.**

12.ಕುಲಶೇಖರಾಳ್ವಾರ್ ರಾಮರಿಗೆ ಲಾಲಿ ಹಾಡುತ್ತಾರೆ ತಮ್ಮ ...(3) 'ಪೆರುಮಾಳ್' ತಿರುಮೊಳಿಯ 8 ನೇ ಪತ್ತಿನ ಪ್ರತಿ ಪಾಶುರದಲ್ಲಿ

13) ಸ್ವಾಮಿಯ 5 ನೇ ಅವತಾರ ...(3)

14) ಪೆರಿಯಾಳ್ವಾರ್ ತಮ್ಮ ತಿರುಮೊಳಿಯಲ್ಲಿ ಮಕ್ಕಳ ಮೇಲಿನ ಪ್ರೀತಿಗಾಗಿ ಪ್ರತಿ ಪಾಶುರದಲ್ಲಿ ಹೀಗೆ ಮುದ್ದಿನ ಮಳೆಗರೆಯುತ್ತಾರೆ 'ಅ' ಯಿಂದಾರಂಭ ...(3)

15) ಪೆರಿಯ ವಾಚ್ಚಾನ್ ಪಳ್ಳೆಯವರ ಶ್ರೀರಾಮಾಯಣದ ಮುಖ್ಯ ಶ್ಲೋಕಗಳ ಅರ್ಥ ವಿಶೇಷ 'ತನಿ' ಯಿಂದಾರಂಭ ...(4)

16) ಪೂರ್ವಾಚಾರ್ಯರಲ್ಲಿ ಮೊದಲಿಗರು, ಯಾಮುನರ ತಾತಂದಿರು ನಾಲಾಯಿರ ಪ್ರಬಂಧಗಳು ಬೆಳಕು ಕಾಣಲು ಮುಖ್ಯ ಕಾರಣರಾದವರು, ನಾಥರಂತಿದ್ದವರು ...(4)

## ತಿರುಮಲೆ ತಿರುಪತಿ ದೇವಸ್ಥಾನಗಳು

# ತರಿಗೊಂಡ

# ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಯವರ ಬ್ರಹ್ಮೋತ್ಸವಗಳು

## 02-03-2020 ರಿಂದ 10-03-2020 ರ ವರೆಗೆ











**02-03-2020 ಸೋಮವಾರ**
ಹಗಲು : ಧ್ವಜಾರೋಹಣ
ರಾತ್ರಿ : ಹಂಸವಾಹನ

**03-03-2020 ಮಂಗಳವಾರ**
ಹಗಲು : ಮುತ್ತಿನ ಚಪ್ಪರವಾಹನ
ರಾತ್ರಿ : ಹನುಮದ್ವಾಹನ

**04-03-2020 ಬುಧವಾರ**
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಸಿಂಹವಾಹನ

**05-03-2020 ಗುರುವಾರ**
ಹಗಲು : ತಿರುಚ್ಚಿ ಉತ್ಸವ
ರಾತ್ರಿ : ದೊಡ್ಡಶೇಷವಾಹನ

**06-03-2020 ಶುಕ್ರವಾರ**
ಹಗಲು : ತಿರುಚ್ಚಿ ಉತ್ಸವ
ರಾತ್ರಿ : ಗಜವಾಹನ

**07-03-2020 ಶನಿವಾರ**
ಹಗಲು : ತಿರುಚ್ಚಿ ಉತ್ಸವ
ಸಾಯಂಕಾಲ : ಸರ್ವಭೂಪಾಲವಾಹನ
ರಾತ್ರಿ : ಕಲ್ಯಾಣೋತ್ಸವ
ಗರುಡವಾಹನ


**08-03-2020 ಭಾನುವಾರ**
ಹಗಲು : ರಥೋತ್ಸವ
ಸಾಯಂಕಾಲ : ಧೂಳಿ ಉತ್ಸವ

**09-03-2020 ಸೋಮವಾರ**
ಹಗಲು : ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ,
ಅಶ್ವವಾಹನ

**10-03-2020 ಮಂಗಳವಾರ**
ಹಗಲು : ವಸಂತೋತ್ಸವ, ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ

## ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಮಲೆಯಲ್ಲಿ ರಥಸಪ್ತಮಿಯಂದು ಸ್ವಾಮಿಯವರಿಗೆ ನಡೆದ ಸಪ್ತವಾಹನಗಳ ಸೇವೆಗಳು (01-02-2020)



ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಚಾನೂರಿನಲ್ಲಿ ರಥಸಪ್ತಮಿಯಂದು ಶ್ರೀ ಪದ್ಮಾವತಿ ಅಮ್ಮನವರಿಗೆ ನಡೆದ ಸಪ್ತವಾಹನಗಳ ಸೇವೆಗಳು

(01-02-2020)





2020 ಫೆಬ್ರವರಿ 04 ರಂದು
ಶ್ರೀ ವೆಂಕಟೇಶ್ವರ ಪಶು ವೈದ್ಯಕೀಯ ವಿಶ್ವವಿದ್ಯಾಲಯದ
ಸ್ನಾತಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲು ಬಂದ
ಆಂಧ್ರಪ್ರದೇಶದ ರಾಜ್ಯಪಾಲರು
ಗೌ॥ ಶ್ರೀ ಬಿಶ್ವಭೂಷಣ್ ಹರಿಚಂದನ್‌ರವರು
ತಿ.ತಿ.ದೇ., ಶ್ರೀ ಪದ್ಮಾವತಿ ಅತಿಥಿ ಗೃಹದಲ್ಲಿ ಸ್ವಾಗತಿಸುತ್ತಿರುವ
ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ಬಸಂತ್‌ಕುಮಾರ್ ಐ.ಎ.ಎಸ್.,
ಮುಖ್ಯ ಜಾಗರೂಕತೆ & ಭದ್ರತಾಧಿಕಾರಿ ಶ್ರೀ ಗೋಪಿನಾಥ್ ಜೆಟ್ಟಿ ಐ.ಪಿ.ಎಸ್.,
ತುಡಾ ಅಧ್ಯಕ್ಷರು ತಿ.ತಿ.ದೇ., ಎಕ್ಸ್ - ಅಫಿಷಿಯಾ ಸದಸ್ಯರು
ಶ್ರೀ ಚೆವಿರೆಡ್ಡಿ ಭಾಸ್ಕರ್‌ರೆಡ್ಡಿಯವರು



ತಿರುಪತಿ ಶ್ರೀ ಗೋವಿಂದರಾಜಸ್ವಾಮಿಯವರ ಆಲಯದ ವಾರ್ಷಿಕ ತೆಪ್ಪೋತ್ಸವಗಳು ಫೆಬ್ರವರಿ 02 ರಿಂದ 08 ರ ವರೆಗೆ ನಡೆಯಿತು.
ಈ ಉತ್ಸವದ ಅಂಗವಾಗಿ ಶ್ರೀ ಕೋದಂಡ ರಾಮಸ್ವಾಮಿಯವರಿಗೆ, ಶ್ರೀ ಪಾರ್ಥಸಾರಥಿ ಸ್ವಾಮಿಯವರಿಗೆ, ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರಿಗೆ,
ಶ್ರೀ ಕೃಷ್ಣಸ್ವಾಮಿ ಶ್ರೀ ಆಂಡಾಳ್ ಅಮ್ಮನವರಿಗೆ ಮತ್ತು ಶ್ರೀ ಗೋವಿಂದರಾಜಸ್ವಾಮಿಯವರು ತೆಪ್ಪಗಳಲ್ಲಿ ವಿಹರಿಸುತ್ತಾರೆ.





ಜನವರಿ 26 ರಂದು 71 ನೇ ಗಣತಂತ್ರ ದಿನೋತ್ಸವ ಸಂದರ್ಭವಾಗಿ ತಿ.ತಿ.ದೇ., ಆಡಳಿತ ಮಂಡಳಿ ಭವನದ ಕ್ರೀಡಾ ಮೈದಾನದಲ್ಲಿ ನಮ್ಮ ದೇಶದ ಬಾವುಟವನ್ನು ಹಾರಿಸಿ,
ಕವಾತು ವಂದನೆಯನ್ನು ಸ್ವೀಕರಿಸುತ್ತಿರುವ ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್ ಐ.ಎ.ಎಸ್., ಈ ಕಾರ್ಯಕ್ರಮದಲ್ಲಿ
ತಿ.ತಿ.ದೇ., ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ.ಎ.ವಿ. ಧರ್ಮಾರೆಡ್ಡಿ, ತಿ.ತಿ.ದೇ., ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ ಶ್ರೀ ಪಿ. ಬಸಂತ್ ಕುಮಾರ್ ಐ.ಎ.ಎಸ್.,
ಮುಖ್ಯ ಜಾಗರೂಕತೆ & ಭದ್ರತಾಧಿಕಾರಿ ಶ್ರೀ ಗೋಪಿನಾಥ್ ಜೆಟ್ಟಿ ಐ.ಪಿ.ಎಸ್., ಮತ್ತು ಉನ್ನತಾಧಿಕಾರಿಗಳು ಉದ್ಯೋಗಿಗಳು ಪಾಲ್ಗೊಂಡರು.

ಯುಗಾದಿ ತನ್ನಿಮ್ಮಿತ ಸಕಾಲಿಕ ಲೇಖನ

# ಮಾಸ ಮಹಿಮೆ

- ಶ್ರೀಮತಿ. ಕೆ.ವಿ. ಪದ್ಮಾವತಿ

9972222791



ನಮ್ಮಲ್ಲಿ ವರ್ಷವನ್ನು ಹನ್ನೆರಡು ಮಾಸಗಳಾಗಿ ವಿಂಗಡಿಸಲಾಗಿದೆ. ಪ್ರತಿ ಮಾಸವೂ ತನ್ನದೇ ವೈಶಿಷ್ಟ್ಯವನ್ನು ಹೊಂದಿದೆ; ನಮ್ಮ ಲೌಕಿಕ, ಅಲೌಕಿಕ ಬದುಕಿನೊಂದಿಗೆ ಬೆಸೆದುಕೊಂಡಿದೆ. ನಮ್ಮ ಜೀವನದಲ್ಲಿ ಮಾಸ ಪರಿಕಲ್ಪನೆ ಹಾಸು ಹೊಕ್ಕು. ಮಾಸಗಳ ವಿವೇಚನೆಗಳಿಲ್ಲದೆ ನಮ್ಮ ದೈನಂದಿನ ಕಾರ್ಯಗಳು ನಡೆಯಲಾರವು. ಪುರಾಣಗಳಲ್ಲಿಯೂ ಈ ಕುರಿತ ಉಲ್ಲೇಖಗಳಿವೆ.ನಮ್ಮಲ್ಲಿ 12 ಮಾಸ ಗಳಿದ್ದು, ಪ್ರತಿಯೊಂದಕ್ಕೂ ತನ್ನದೇ ಆದ ವೈಶಿಷ್ಟ್ಯಗಳಿವೆ. ಉತ್ತಮ ಮತ್ತು ಆರೋಗ್ಯ ಪೂರ್ಣ ಜೀವನಕ್ಕೆ ಮಾಸಗಳು ನೀಡಿರುವ ಸಂದೇಶಗಳು ಉಪಯುಕ್ತ. ಈ ಉತ್ಸವಗಳ ಹಿಂದೆ ಆಧ್ಯಾತ್ಮಿಕವೆಷ್ಟೋ ಅಷ್ಟೇ ವೈಜ್ಞಾನಿಕ ಮಹತ್ವಗಳೂ ಇರುವುದು ವಿಶೇಷ. ವರ್ಷದ ಹನ್ನೆರಡು ಮಾಸಗಳು ಹಾಗೂ ಅವುಗಳ ಮಹತ್ವದ ಕಿರು ನೋಟವನ್ನು ಲೇಖಕಿಯವರು ಇಲ್ಲಿ ತಿಳಿಸಿದ್ದಾರೆ.



### ಚೈತ್ರ - ಚಿಗುರಿನ ಮಾಸ

ವರ್ಷ ಆರಂಭವಾಗುವುದೇ ಚೈತ್ರ ಮಾಸದಿಂದ. ಈ ಮಾಸದಲ್ಲಿ ಬರುವ ಯುಗಾದಿ ಭಾರತೀಯರಿಗೆ ಹೊಸ ವರ್ಷ. ಶಿಶಿರದಲ್ಲಿ ಎಲೆ ಕಳಚಿದ ಮರಗಿಡಗಳು ಈ ಮಾಸದಲ್ಲಿ ಪುನಃ ಚಿಗುರೊಡೆದು ತುಂಬಿಕೊಳ್ಳತೊಡಗುತ್ತವೆ. ಭಗವಂತನ ಪೂಜೆಗೆ ಬೇಕಿರುವ ಎಲೆ, ಹೂ, ನೀರು ಮತ್ತು ಹಣ್ಣು ಈ ನಾಲ್ಕು ವಸ್ತುಗಳು ಸಮೃದ್ಧಿಯಾಗಿ ದೊರೆಯುತ್ತವೆ. ಕಣ್ಣಿಗೆ ಆಹ್ಲಾದಕರ. ದೇಹಕ್ಕೆ ಆರೋಗ್ಯ ನೀಡುವ ಕಾಲವಿದು. ತ್ರೇತಾಯುಗದಲ್ಲಿ ಭಗವಂತ ಶ್ರೀ ರಾಮಚಂದ್ರನಾಗಿ ಭೂಮಿ ಮೇಲೆ ಅವತಾರ ಮಾಡಿದ ಮಾಸವಿದು. ರಾಮ ಭಕ್ತ ಹನುಮಂತ ಜನಿಸಿದ್ದು ಈ ಮಾಸದ ವಿಶೇಷ ದಿನಗಳು.



### ತಣ್ಣೀರ ಸ್ನಾನಕ್ಕೆ - ವೈಶಾಖ

ಮಾಸ ನಿಯಾಮಕ ಮಧುಸೂದನನ ಮಾಸವಿದು. ಬಿಸಿಲಿನ ತಾಪದಿಂದ ತತ್ತರಿಸುವುದರಿಂದ ವೈಶಾಖ ಮಾಸದ ತಣ್ಣೀರಿನ ಸ್ನಾನಕ್ಕೆ ಮಹತ್ವ ನೀಡಲಾಗಿದೆ. ವೈಶಾಖದ ಉರು ಬಿಸಿಲಿನಲ್ಲಿ ಈ ಪದ್ಧತಿ ಶುರುವಾಗಿದ್ದು ಸಹಜವೇ ವಿಶಾಖ ನಕ್ಷತ್ರದಿಂದ ಕೂಡಿದ ಹುಣ್ಣಿಮೆಯ ಮಾಸವೇ ವೈಶಾಖ ಮಾಸ. ವಿ ಎಂದರೆ ವಿಷ್ಣು, ಶಾಖ ಎಂದರೆ ಟೊಂಗೆ ಎಂದರ್ಥ. ವಿಷ್ಣು ಎಂಬ ವೃಕ್ಷದ ಶಾಖೋಪಶಾಖೆಗಳು ತುಂಬಿ ತುಳುಕುವ ಮಾಸವಿದು. ಮಹಾವಿಷ್ಣುವಿನ ಅವತಾರಗಳಾದ ಪರಶುರಾಮ, ನರಸಿಂಹ ವೇದವ್ಯಾಸ ಹಾಗೂ ಕೂರ್ಮ-ಈ ನಾಲ್ಕು ಅವತಾರಿಗಳು ಪ್ರಕಟಗೊಂಡ ಮಾಸವಿದು. ಶ್ರೀನಿವಾಸ ಕಲ್ಯಾಣದ ಪರ್ವಕಾಲವೂ ಹೌದು.ಸಮುದ್ರ ಮಥನದ ಅಕ್ಷಯ ತೃತೀಯವೂ ಇದೇ ಮಾಸದಲ್ಲಿ ಬರುತ್ತದೆ.



### ಜ್ಯೇಷ್ಠ - ಹುಣ್ಣಿಮೆ ವಿಶೇಷ

ಹೆಸರೇ ಸೂಚಿಸುವಂತೆ ಇದು ದೊಡ್ಡ ಮಾಸ. ಅದ ರರ್ಥ,ಹೆಚ್ಚು ದಿನ ಎಂದಲ್ಲ.ಈ ಮಾಸದ ನಿಯಾಮಕ ತ್ರಿವಿಕ್ರಮ. ತ್ರಿವಿಕ್ರಮನ ಸಂಬಂಧ ಇರುವುದರಿಂದ ದೊಡ್ಡದೆನಿಸಿಕೊಂಡಿದೆ. ತ್ರಿವಿಕ್ರಮ ಎಂದರೆ ಮೂರರಲ್ಲೂ ವಿಕ್ರಮ ಸಾಧಿಸಿದವ. ಮೂರು ವೇದಗಳಲ್ಲಿ ಇವನದೇ ಮಹಿಮೆ. ವೇದ,ಪುರಾಣ ಮತ್ತು ಇತಿಹಾಸಗಳಲ್ಲೂ ತ್ರಿವಿಕ್ರಮನದ್ದೇ ವಿಕ್ರಮ. ಜಾಗೃತ್, ಸ್ವಪ್ನ ಮತ್ತು ಸುಷುಪ್ತಿ ಈ



ಮೂರು ಅವಸ್ಥೆಗಳಲ್ಲೂ, ಸಕಲ ಜೀವರಾಶಿಗಳಿಗೂ ಸ್ವತಂತ್ರನಿಯಾಮಕನಾದ ತ್ರಿವಿಕ್ರಮ ಮಾಸವಿದು.ಗಂಗಾ ಜಯಂತಿಯು ಜ್ಯೇಷ್ಠ ಮಾಸದ ಜ್ಯೇಷ್ಠೆತೆ ಒಂದು ಪ್ರಧಾನ ನಿಮಿತ್ತ, ಆಧ್ಯಾತ್ಮಿಕ . ಆದಿ ಭೌತಿಕ, ಆದಿದೈವಿಕ ಮೂರು ತಾಪಗಳ ತಾಪತ್ರಯವನ್ನು ಪರಿ ಹರಿಸುವ ಗಂಗೆಯನ್ನು ಹರಿಸಿದ ತ್ರಿವಿಕ್ರಮನ ಮಾಸವಿದು. ಜ್ಯೇಷ್ಠ ಮಾಸದಲ್ಲಿ ಎರಡೆರಡು. ಹುಣ್ಣಿಮೆ ಹಬ್ಬಗಳು ಬರುತ್ತವೆ. ಕಾರ ಹುಣ್ಣಿಮೆ,ಭೂಮಿ ಹುಣ್ಣಿಮೆಗಳು ಅತ್ಯಂತ ವಿಶಿಷ್ಟ ಹಬ್ಬಗಳು.ವಟ ಸಾವಿತ್ರಿ ಹುಣ್ಣಿಮೆ ವಿಶೇಷ.

**ಅಷಾಢ – ಮಳೆ ಮಾಸ**

ಅಷಾಢದಿಂದ ಕಾರ್ತಿಕ ಮಾಸದವರೆಗೆ ಚಾತುರ್ಮಾಸ್ಯದ ಪರ್ವಕಾಲ.ಇದು ಮಳೆ ರಚ್ಚೆ ಹಿಡಿದಂತೆ ಸುರಿಯುವ ಮಾಸ. ವರ್ಷದ ಮಿಕ್ಕೆಲ್ಲ ದಿನಗಳ ಕಷ್ಟ ಸುಖಗಳು ಈ ಮಾಸದ ಮಳೆಯನ್ನೇ ಅವಲಂಭಿಸಿರುತ್ತದೆ ಎಂದರೆ ತಪ್ಪಿಲ್ಲ.ಆಷಾಢ ಏಕಾದಶಿಯಂದು ಭಗವಂತ ಪವಡಿಸಿದರೆ, ಕಾರ್ತಿಕ ಮಾಸದ ದ್ವಾದಶಿಯಂದೇ ಭಗವಂತನ ಉತ್ಥಾನ. ಹೀಗೆ ನಾಲ್ಕು ತಿಂಗಳು ಭಗವಂತ ನಿದ್ರಿಸುವ ಕಾಲ. ಅದು ಭಗವಂತನ ಯೋಗನಿದ್ರೆ. ಈ ನಾಲ್ಕು ತಿಂಗಳಲ್ಲಿ ಸೇವಿಸುವ ಆಹಾರದಲ್ಲೂ ನಿಯಂತ್ರಣ. ಒಂದೊಂದು ತಿಂಗಳಲ್ಲಿ ಒಂದೊಂದು ಪದಾರ್ಥ ನಿಷೇಧಿಸಲಾಗಿದೆ. ನಿಷೇಧಿತ ಪದಾರ್ಥಗಳಲ್ಲಿ ಆ ಅವಧಿಯಲ್ಲಿ ತಮೋಗುಣ ಇರುತ್ತದೆ. ಆಹಾರದಲ್ಲಿನ ತಮೋಗುಣ ಮನಸ್ಸಿನೊಳಗೆ ಪ್ರವೇಶಿಸಿ ಮನಸ್ಸೂ ತಮೋಗುಣವಾಗುತ್ತದೆ. ಈ ಪದ್ಧತಿ ವೈಜ್ಞಾನಿಕ ದೃಷ್ಟಿಕೋನ ಹೊಂದಿದೆ. ಈ ಮಾಸದಲ್ಲಿನ ಬರುವ ಏಕಾದಶಿ ತಪ್ತ ಮುದ್ರಾಧಾರಣೆಗೆ ಯೋಗ್ಯ. ಈ ಮಾಸದ ನಿಯಾಮಕ ದೇವತೆ ಶ್ರೀಧರ. ಶಾಖ ವೃತ್ತಾರಂಭ, ಶಯನಿ ಏಕಾದಶಿ, ಗುರು ಪೂರ್ಣಿಮಾ , ಜಯತೀರ್ಥರ ಆರಾಧನೆ ಈ ಮಾಸದ ವಿಶೇಷ ದಿನಗಳು.



**ಶ್ರಾವಣ – ಶ್ರವಣ ಭಕ್ತಿಗೆ ಕಾಲ**

ಹೃಷಿಕೇಶನಿಂದ ನಿಯಮಿಸಲ್ಪಟ್ಟ ಪವಿತ್ರ ಮಾಸವಿದು. ಪವಿತ್ರ ಗ್ರಂಥಿಗಳನ್ನೊಳ ಗೊಂಡ ರಕ್ಷಾ ಬಂಧನ ಈ ಮಾಸದಲ್ಲಿನ ಮಹತ್ವದ ದಿನ. ಭಗವಂತ ಯಾವ ಹಗ್ಗದಿಂದ ಬಲಿ ಮೊದಲಾದವರನ್ನು ಬಂಧಿಸಿದ್ದನೋ ಅದೇ ರಕ್ಷಾ ಬಂಧನದಿಂದ ನಾವು ಭಗವಂತನನ್ನು ಬಂಧಿಸಿ ನಮ್ಮ ಹೃದಯದಲ್ಲಿ ಸ್ಥಾಪಿಸಿಕೊಳ್ಳಬೇಕು ಎಂಬರ್ಥ. ಇಂದ್ರಿಯಗಳ ನಿಯಂತ್ರಣ ಹಾಗೂ ಭಗವಂತನ ಮಹಿಮೆಗಳ ನಿರಂತರ ಶ್ರವಣಾದಿಗಳು ಈ ಮಾಸದ ಪ್ರಧಾನ ಅಂಗ. ಅದಕ್ಕೆಂದೆ ಇದಕ್ಕೆ ಶ್ರಾವಣಮಾಸ ಎನ್ನುತ್ತಾರೆ. ಹಯ ಗ್ರೀವ ದೇವರು ಅವತರಿಸಿದ್ದು,ಶ್ರೀ ಕೃಷ್ಣ ಜನಿಸಿದ್ದು ಇದೇ ಮಾಸದಲ್ಲಿ. ನಾಗರ ಪಂಚಮಿ, ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯ ಪರ್ವಕಾಲ ವಿದು. ಮಳೆ ಬಿಡುತ್ತ ಬಂದು, ವಾತಾವರಣ ಉಲ್ಲಸಿತವಾಗಿ ಹಬ್ಬಗಳು ಕೆಳಗಟ್ಟುತ್ತವೆ ಈ ಮಾಸದಲ್ಲಿ.



**ಭಾದ್ರಪದ – ಆಧ್ಯಾತ್ಮದ ಸಾಧನೆಯ ಪರ್ವಕಾಲ**

ಭದ್ರವಾದ ಪದಗಳಿಗೆ ಸಂಬಂಧಿಸಿದ ಮಾಸವೇ ಭಾದ್ರಪದ. ಲೌಕಿಕ ಮಾರ್ಗ ದಲ್ಲಿ ಸಾಂಗವಾಗಿ ಸಾಗಬೇಕಾದರೆ ಪದವನ್ನು (ಹೆಜ್ಜೆ) ಭದ್ರವಾಗಿರಿಸಿಕೊಳ್ಳ ಬೇಕು. ಆಧ್ಯಾತ್ಮ ಮಾರ್ಗದಲ್ಲಿ ಸಾಗಬೇಕಾದರೆ ಪದ (ಶಬ್ದ)ಗಳಾ ಭದ್ರತೆ ಅಗತ್ಯ. ಭಕ್ತ ಹಾಗೂ ಭಗವಂತನಿಗೆ ಮಾಧ್ಯಮ ಈ ಮಾಸ. ಏಳು ದಿನ ಪರ್ಯಂತ ಅನುದಿನ ಶುಕಾಚಾರ್ಯ ರಿಂದ ಭಾಗವತವನ್ನು ಕೇಳಿ ಅರ್ಜುನನ ಮೊಮ್ಮಗ ಪರೀಕ್ಷಿತ ರಾಜ ಆಧ್ಯಾತ್ಮದ ಶೃಂಗವನ್ನೇರಿದ ಪರ್ವಕಾಲವಿದು. ವಿಷ್ಣು ವಾಮನ ರೂಪ ತಾಳಿ, ಬಲಿಯನ್ನು ಪಾತಾಳಕ್ಕೆ ತುಳಿದ ಹಾಗೂ ವಿಘ್ನ ನಿವಾರಕ ವಿಘ್ನೇಶ್ವರ ಅವತರಿಸಿದ ಮಾಸವಿದು. ಅನಂತ ಫಲ ನೀಡುವ ಅನಂತಪದ್ಮನಾಭ ವ್ರತ, ಗಣೇಶಚತುರ್ಥಿ, ಭೂವರಹ ಜಯಂತಿ, ಋಷಿಪಂಚಮಿ, ವಾಮನ ಜಯಂತಿ, ಪಕ್ಷಮಾಸ, ಸರ್ವಪಿತೃ ಅಮಾ ವಾಸ್ಯೆ ಈ ಮಾಸದ ವಿಶೇಷ ದಿನಗಳು.



**ಆಶ್ವಯುಜ – ಸುಖದ ಕಾಲ**

ಯಾವ ತಿಂಗಳ ಹುಣ್ಣಿಮೆ ದಿನ ಅಶ್ವಿನಿ ನಕ್ಷತ್ರ ಕಂಗೋಳಿಸುವುದೋ ಅದುವೇ ಅಶ್ವಿನಿಮಾಸ. ಶರತ್ ಋತುವಿನ ಪೂರ್ವಾರ್ಧ ಈ ಮಾಸ. ದವಸ ಧಾನ್ಯಗಳು

ಹುಲುಸಾಗಿ ಬೆಳೆದು ಕಟಾವಿಗೆ ಸಿದ್ಧವಾಗುವುದೇ ಈ ಋತುವಿನಲ್ಲಿ. ದವಸ ಧಾನ್ಯಗಳನ್ನು ಹೊತ್ತ ಶರದ್ ಋತುವಿನ ಮಹಾಕಾಲವನ್ನೇ ದೇವತೆಗಳು ಹವಿಸ್ಸನ್ನಾಗಿ ಚಿಂತನೆ ಮಾಡಿ ಭಗವಂತನನ್ನು ಆರಾಧಿಸಿದ ಮಾಸವಿದು. ಈ ಮಾಸದ ಪ್ರಾರಂಭದ ಹತ್ತು ದಿನಗಳು ದಸರಾ ಸಂಭ್ರಮ. ನವರಾತ್ರಿ, ವಿಜಯದಶಮಿ, ಮಧ್ವಜಯಂತಿ, ಕೋಜಾಗರಿ ಲಕ್ಷ್ಮೀ ಪೂಜೆ, ದೀಪಾವಳಿ ಅಮಾವಾಸ್ಯೆ ಈ ಮಾಸದ ವಿಶೇಷ ದಿನಗಳು.



**ಕಾರ್ತಿಕ - ಬೆಳಕಿನ ದಿನಗಳು**

ಕೃತ್ತಿಕಾ ನಕ್ಷತ್ರದಿಂದ ಕೂಡಿರುವ ಹುಣ್ಣಿಮೆ ಇರುವ ಮಾಸಕ್ಕೆ ಕಾರ್ತೀಕ ಮಾಸ ಎನ್ನುತ್ತಾರೆ. ಕೃತ್ತಿಕಾ ಎಂದರೆ ಕತ್ತರಿ. ಅದಕ್ಕಾಗಿಯೇ ಭರಣಿ, ಕೃತ್ತಿಕಾ ನಕ್ಷತ್ರ ದೂರವಿರಿಸಿ ಕೊಂಡೇ ಮಂಗಲಕಾರ್ಯ ನಡೆಸುತ್ತಾರೆ. ಕತ್ತಲೆಯನ್ನು ಕತ್ತರಿಸುವ ಸಾಮರ್ಥ್ಯ ಈ ಮಾಸಕ್ಕಿದೆ. ಈ ಮಾಸದಲ್ಲಿ ದೀಪೋತ್ಸವಕ್ಕೆ ಮಹತ್ವ. ಬೆಳಕಿನ ಸಂಕೇತವಾಗಿರುವ ದೀಪಾವಳಿ ಪಾಡ್ಯ ಮತ್ತು ತುಳಸಿ ವಿವಾಹ ಇದೇ ಮಾಸದಲ್ಲಿ ಬರುತ್ತವೆ. ಬಲಿಪಾಡ್ಯ, ಗೋಪೂಜೆ,ಚಾತುರ್ಮಾಸ್ಯ ವ್ರತ ಸಮಾಪ್ತಿ, ವೈಕುಂಠ ಚತುರ್ದಶಿ, ಪ್ರಭೋಧಿನಿ ಏಕಾದಶಿ, ಧನ್ವಂತರಿ ಜಯಂತಿ, ಕಾರ್ತಿಕ ಪೂರ್ಣಿಮಾ ಈ ಮಾಸದಲ್ಲಿ ವಿಶೇಷ ದಿನಗಳು.



**ಮಾರ್ಗಶಿರ - ಅಗ್ರ ಮಾಸ**

ಶಿರಸ್ಸು ಹುಡುಕಾಟದಲ್ಲಿ ತೊಡುಗುವ ಮಾಸವಿದು. ತಲೆ - ಮನಸ್ಸು ಒಂದಾಗುವ ಕಾಲ. ಮೃಗಶಿರಾ ನಕ್ಷತ್ರದ ದೇವತೆ ಚಂದ್ರ ಹಾಗೂ ಮನಸ್ಸಿನ ದೇವತೆ ಮನಃ ಪೂರ್ವಕವಾಗಿ ತಲೆ ಇಟ್ಟು ಚಿಂತಿಸಬೇಕಾದ ತತ್ತ್ವದ ಅನ್ವೇಷಣೆ ಕಾಲವಿದು. ಶ್ರೀ ಕೃಷ್ಣನಿಂದ ಭಗವದ್ಗೀತೆ ಬೋಧಿಸಲ್ಪಟ್ಟ ಮಾಸ. ಭಗವದ್ಗೀತೆಯಲ್ಲಿ ಸ್ವಯಂ ಭಗವಂತನೇ 'ನಾನು ಮಾಸಗಳಲ್ಲಿ ಮಾರ್ಗಶಿರ ಮಾಸವಾಗಿದ್ದೇನೆ' ಎಂದು ಘೋಷಿಸಿಕೊಂಡಿದ್ದಾನೆ. ಅವಧೂತ ಗುರುದತ್ತಾತ್ರೇಯ ಅವತರಿಸಿದ ಮಾಸವಿದು.

**ಪುಷ್ಯ - ಬೆನ್ನು ಬಾಗಿಸುವ ಮಾಸ**

ಯಾವುದು ಪುಷ್ಟಿ ನೀಡುವುದೋ ಅದುವೇ ಪುಷ್ಯಮಾಸ. ಆತ್ಮದ ಪುಷ್ಟಿಗೆ ಹೆಚ್ಚಿನ ಪ್ರಚೋದಕವಾಗಿದೆ. ಧನುರ್ಮಾಸ ಪೂಜೆ ಈ ಮಾಸದ ವೈಶಿಷ್ಟ್ಯ.ಚಳಿಯಲ್ಲಿ ತಣ್ಣೀರುನಲ್ಲಿ ಮುಳುಗಬೇಕು. ನಿದ್ದೆಗೆಡಬೇಕು. ದೇವರಿಗೆ ಹುಗ್ಗಿ ನೈವೇದ್ಯ ಸಮರ್ಪಿಸಬೇಕು. ಧನುರ್ಮಾಸದಲ್ಲಿ ಪೂಜೆಯದೇ ವೈಶಿಷ್ಟ್ಯ.ಚಳಿಗೆ ಬೆನ್ನು ಬಿಲ್ಲಿನಂತೆ ಬಾಗುತ್ತದೆಯೆಂದೇ ಈ ಹೆಸರು ಬಂದಿದೆ. ಇದು ಜಾತ್ರೆಗಳ ಮಾಸ.



**ಮಾಘಸ್ನಾನವ ಮಾಡಿ....**

ಮಾಘಮಾಸ ಸ್ನಾನಕ್ಕೆ ಪ್ರಶಸ್ತವಾದ ಮಾಸ. ಕೊರೆಯುವ ಚಳಿಯಲ್ಲೂ ಬ್ರಾಹ್ಮಿ ಮೂಹೂರ್ತದಲ್ಲಿ ಪುಣ್ಯನದಿಗಳಲ್ಲಿ ಸ್ನಾನ ಮಾಡುವ ಪದ್ಧತಿ ಇದೆ. ತನುವಿನಿಂದ ಮಾಡಿದ ಪಾಪಗಳು, ಮನಸ್ಸಿನಿಂದ ಮಾಡಿದ ಪಾಪಗಳ ಕೊಳೆಯನ್ನು ಈ ಮಾಸದಲ್ಲಿ ಮಾಡಿದ ಸ್ನಾನ ಕಳೆಯುತ್ತದೆ. ಶ್ರೀ ಮಧ್ವಾಚಾರ್ಯರು ಬದರಿ ಪ್ರವೇಶ ಮಾಡಿದ ಮಾಸವಿದು. ವಸಂತ ಪಂಚಮಿ, ರಥಸಪ್ತಮಿ, ವ್ಯಾಸಪೂರ್ಣಿಮೆ , ಮಹಾ ಶಿವರಾತ್ರಿ ಈ ಮಾಸದಲ್ಲಿ ವಿಶೇಷ ದಿನಗಳು.



**ಫಾಲ್ಗುಣ ಮಾಸ**

ಈ ಮಾಸವನ್ನು ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ ಎಂದು ಎರಡು ಭಾಗಗಳನ್ನಾಗಿ ವಿಂಗಡಿಸಲಾಗಿದೆ. ಈ ಮಾಸ ಅನಂತ ಫಲ ನೀಡುತ್ತದೆ. ಅರ್ಜುನ ಜನಿಸಿದ ಮಾಸವಿದು. ವ್ಯಾಸರಾಜರ ಹಾಗೂ ವಾದಿರಾಜರ ಆರಾಧನೆ, ರಾಘವೇಂದ್ರರ ಪಟ್ಟಾಭಿಷೇಕ, ರಾಯರ ಜನ್ಮದಿನ, ಹೋಳಿ ಹಬ್ಬ ಇವು ಮಾಸ ವಿಶೇಷಗಳು.

# ಸಪ್ತ ಋಷಿಗಳು ಸಪ್ತರ್ಷಿಮಂಡಲ

- ಡಾ||ಸಿ. ಎಸ್. ಊರ್ಮಿಳಾ
9380426830



ಕಶ್ಯಪೋತ್ರಿ ರ್ಭರದ್ವಾಜೋ ವಿಶ್ವಾಮಿತ್ರಶ್ಚ ಗೌತಮಃ ।
ಜಮದಗ್ನಿ ರ್ವಸಿಷ್ಠಶ್ಚ ಸಪ್ತೈತೇ ಋಷಯಃ ಸ್ಮೃತಾಃ ॥

ಋಷಿ ಪರಂಪರೆ ಎಂಬುವುದು ಹಿಂದೂ ಧರ್ಮದ ಅವಿಭಾಜ್ಯ ಅಂಗ. ನಮ್ಮದೇಶದಲ್ಲಿ ಹಿಂದೂ ಧರ್ಮಕ್ಕೆ ಸೇರಿದ ಎಲ್ಲಾ ಜನಾಂಗದವರು ಯಾವುದಾದರೂ ಒಂದು ಗೋತ್ರಕ್ಕೆ ಸೇರಿದವರಾಗಿರುತ್ತಾರೆ. ವೈವಾಹಿಕ ಸಂಬಂಧಗಳನ್ನು ಬೆಳೆಸುವುದಕ್ಕಾಗಿ, ದೇವಾಲಯಗಳಲ್ಲಿ ಅರ್ಚನೆಮಾಡುವಾಗ, ಅನೇಕ ಧರ್ಮಕಾರ್ಯಗಳನ್ನು ಮಾಡುವಾಗ, ಹೋಮ - ಹವನ. ಯಜ್ಞ ಯಾಗಾದಿಗಳನ್ನು ಮಾಡುವುದಕ್ಕಾಗಿ, ಯಾವ ಗೋತ್ರದವರು ನೀವು? ಎಂದು ವೈದಿಕರು ಸಂಕಲ್ಪ ಮಾಡಲು ಕೇಳುವುದುಂಟು. ಈ ಗೋತ್ರಗಳಲ್ಲಿ ಯಾರೇ ಆಗಲಿ ಒಬ್ಬ ಋಷಿಯ ಪರಂಪರೆಗೆ ಸೇರಿದವರಾಗಿರುತ್ತಾರೆ. ಉದಾಹರಣೆಗೆ ಶ್ರೀ ವತ್ಸಗೋತ್ರ, ಶಾಂಡಿಲ್ಯಗೋತ್ರ, ಕಶ್ಯಪಗೋತ್ರ, ವಸಿಷ್ಠ ಗೋತ್ರ, ಭಾರದ್ವಾಜ ಗೋತ್ರ ಮುಂತಾಗಿ ಸಾಮಾನ್ಯವಾಗಿ ದೇವಾಲಯಗಳಲ್ಲಿಯೂ ಸಹ ಅಷ್ಟೋತ್ತರ, ಸಹಸ್ರ ನಾಮಾರ್ಚನೆ ಲಕ್ಷಾರ್ಚನೆ ಇತ್ಯಾದಿಗಳನ್ನು ಮಾಡಿಸುವಾಗ ನಮ್ಮ ನಾಮ (ಹೆಸರು) ನಕ್ಷತ್ರ, ಗೋತ್ರಗಳನ್ನು ಕೇಳುವುದು ಇಂದಿಗೂ ಬಳಕೆಯಲ್ಲಿದೆ. ಕೆಲವರು. "ಭಗವತ್ ಪ್ರೀತ್ಯರ್ಥಂ" ಎಂದು ಹೇಳುವುದುಂಟು. ನಮ್ಮ ಸನಾತನ ಧರ್ಮವು ಋಷಿಮುನಿಗಳ ಮಾರ್ಗದರ್ಶನದಿಂದಲೇ ನಡೆದು ಬಂದಿದೆ ಎಂಬುವುದು ಹೆಮ್ಮೆಯ ವಿಷಯ. ಹಿಂದಿನ ಕಾಲದಲ್ಲಿ ರಾಜನ ಆಸ್ಥಾನದಲ್ಲಿ ಧರ್ಮಗುರುಗಳು, ಕುಲಪುರೋಹಿತರು, ಋಷಿಮುನಿಗಳ ಆದೇಶದಿಂದಲೇ ರಾಜರು ತಮ್ಮ ರಾಜ್ಯಗಳನ್ನು ಆಳುತ್ತಿದ್ದರು.

ಮನುಷ್ಯನಾಗಿ ಹುಟ್ಟಿದವನು ಪ್ರಮುಖವಾಗಿ ನಾಲ್ಕು ಋಣಗಳನ್ನು ತನ್ನ ಜೀವಿತದಲ್ಲಿ ತೀರಿಸಬೇಕೆಂದು ವಾಲ್ಮೀಕಿ ರಾಮಾಯಣದ ಅಯೋಧ್ಯಾ ಕಾಂಡದಲ್ಲಿ ಪ್ರಸ್ಥಾಪಿಸಲಾಗಿದೆ. ಅವು ಯಾವುವೆಂದರೆ 1) ದೇವಋಣ 2. ಪಿತೃಋಣ 3. ಪ್ರಾಣಿಋಣ 4. ಋಷಿಋಣ .

ಋಷಿವರ್ಯರು ಇಡೀ ವಿಶ್ವಕ್ಕೇ ಮಾರ್ಗದರ್ಶಕರಾಗಿ, ಮಹಾತಪಸ್ವಿಗಳಾಗಿ ಮಹಾತ್ಯಾಗಿಗಳಾಗಿ, ಬ್ರಹ್ಮನಿಷ್ಠರಾಗಿ, ಭೂತ, ಭವಿಷ್ಯತ್, ವರ್ತಮಾನಗಳನ್ನು ಅರಿತ ತ್ರಿಕಾಲ ಜ್ಞಾನಿಗಳಾಗಿ ಇಹಪರದ ಸಾಧನೆಗೆ ದಾರಿದೀವಿಗೆಯಾಗಿ ಕಂಗೊಳಿಸಿದ್ದಾರೆ. ಇಂತಹ ಮಹಿಮಾನ್ವಿತರ ಜೀವನದ ಆದರ್ಶವನ್ನು ಸಾಧ್ಯವಾದಷ್ಟು ಅನುಸರಿಸುವುದು ನಮ್ಮ ಆದ್ಯಕರ್ತವ್ಯವಾಗಿದೆ. ಈ ಮೂಲಕ ನಾವು ಋಷಿಋಣವನ್ನು ತೀರಿಸಿ ಕೃತಾರ್ಥರಾಗಬಹುದು. ಈ ಮಹರ್ಷಿಗಳ ಮಹಿಮೆಯು ಅಷ್ಟಾದಶ ಪುರಾಣಗಳಲ್ಲಿಯೂ, ವೇದಗಳ ಕಾಲದಿಂದಲೂ ರಾಮಾಯಣ - ಮಹಾಭಾರತ ಭಾಗವತದವರೆಗೂ ಹಮ್ಮಿಕೊಂಡಿದೆ. ಈ ಋಷಿವರ್ಯರಲ್ಲಿ ಅತ್ಯಂತ ಪ್ರಮುಖರಾದವರು ಸಪ್ತರ್ಷಿಗಳು ಅವರು ಯಾರೆಂದರೆ 1. ವಸಿಷ್ಠ 2. ಅತ್ರಿ 3. ಜಮದಗ್ನಿ 4. ಭರದ್ವಾಜ 5. ಕಶ್ಯಪ 6. ಗೌತಮ 7. ವಿಶ್ವಾಮಿತ್ರ.

ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ಈ ಏಳು ಮಹರ್ಷಿಗಳು ಸಪ್ತರ್ಷಿಸ್ಥಾನವನ್ನು ಅಲಂಕರಿಸಿದ್ದಾರೆ. ಲಕ್ಷಾಂತರ ವರ್ಷಗಳ ಕಾಲ ಇವರು ಸತ್ಕಾರ್ಯಗಳನ್ನು ಮಾಡಿ ಮನುಜಕುಲವನ್ನು ಉದ್ಧರಿಸುತ್ತಿದ್ದಾರೆ ಎಂದು ಶಾಸ್ತ್ರದಲ್ಲಿ ಹೇಳಿದೆ.

### 1. ವಸಿಷ್ಠ

ಇವರು ಬ್ರಹ್ಮನ ಮಾನಸಪುತ್ರರು. ರಾಜ ದಶರಥನಿಗೆ ಕುಲಪುರೋಹಿತರು. ರಾಜನಿಗೆ ಪುತ್ರಾಕಾಮೇಷ್ಠಿಯಾಗ ಮಾಡಲು ಪ್ರಚೋದಿಸಿದವರು. ಇವರ ಬಳಿ ಶಬಲಾ ಎಂಬ

ಕಾಮಧೇನುವು ಇದ್ದಿತು. ಈ ಪರಮಪಾವನೆಯಾದ ಶಬಲೆಯ ವಶಿಷ್ಠರ ವಾಕ್ಯವನ್ನು ಚಾಚೂ ತಪ್ಪದೆ ನಡೆಸಿಕೊಡುತ್ತಿದ್ದಿತು. ಒಮ್ಮೆ ರಾಮಲಕ್ಷ್ಮಣರು ವಿಶ್ವಾಮಿತ್ರರೊಡನೆ ವಸಿಷ್ಠರ ಆಶ್ರಮಕ್ಕೆ ಬಂದಾಗ ವಸಿಷ್ಠರ ವಾಕ್ಯದಂತೆ ಶಬಲೆಯು ರಾಜ ಭೋಜನ ವನ್ನು ಒದಗಿಸಿ ಸತ್ಕರಿಸಿತು. ಇಂತಹ ಪರಮ ಪವಿತ್ರವಾದ ಶಬಲೆಯನ್ನು ತನಗೆ ಒಪ್ಪಿಸಬೇಕೆಂದು ವಸಿಷ್ಠರಲ್ಲಿ ವಿಶ್ವಾ ಮಿತ್ರರು ಕೇಳಿಕೊಂಡರು. ಆದರೆ ಅದಕ್ಕೆ ವಸಿಷ್ಠರು ಒಪ್ಪಲಿಲ್ಲ.

ಏತದೇವ ಹಿ ಸರ್ವಸ್ವ ಮೇತ ದೇವ ಹಿ ಜೀವಿತಂ
ದರ್ಶಶ್ಚ ಪೂರ್ಣ ಮಾಸಶ್ಚ ಯಜ್ಞಾಶ್ಚೈವಾಪ್ತದಕ್ಷಿಣಾಃ
ಏತದೇವ ಹಿಮೇ ರಾಜನ್ ವಿವಿಧಾಶ್ಚ ಕ್ರಿಯಾಸ್ಥಥಾ
ಅಥೋಮೂಲಾಃ ಕ್ರಿಯಾಃ ಸರ್ವಾಮಮ ರಾಜನ್ನ ಸಂಶಯ ಃ
ಬಹೂನಾಂ ಕಿಂ ಪ್ರಲಾಪೇನ ನದಾಸ್ಯೇ ಕಾಮ ದೋಹಿನೀಮ್
॥ ಬಾಲಕಾಂಡ 53 ನೇ ಸರ್ಗ 24-25 ನೇ ॥

ವಶಿಷ್ಠರು ಹೀಗೆ ಹೇಳಿದರು. "ಶಬಲೆಯನ್ನು ನಾನು ಸರ್ವಥಾ ಕೊಡತಕ್ಕವನಲ್ಲ - ಇದೇ ನನ್ನ ರತ್ನ, ಇದೇ ನನ್ನ ಆಸ್ತಿ, ಇದೇ ನನ್ನ ಸರ್ವಸ್ವ, ಇದೇ ನನ್ನ ಪ್ರಾಣ, ದರ್ಶ ಪೌರ್ಣ ಮಾಸಾದಿ ಸಕಲ ಯಜ್ಞಗಳು, ಅದರಲ್ಲಿ ಕೊಡಬೇಕಾದ ದಕ್ಷಿಣೆ ಗಳು, ಸಮಸ್ತ ಕರ್ಮಗಳು ಇವೆಲ್ಲವೂ ಶಬಲೆಯಿಂದಲೇ ನಡೆಯಬೇಕಾಗಿದೆ. ಎಲೈ ವಿಶ್ವಾಮಿತ್ರರೇ ನೀವು ಅದೆಷ್ಟು ಹಲುಬಿದರೂ ನಾನು ಈ ಶಬಲೆಯನ್ನು ನೀಡುವುದಿಲ್ಲ. " ಎಂದರು.

ಶಬಲೆಯೂ ಸಹ ವಸಿಷ್ಠರನ್ನು ಬಿಟ್ಟು ಹೋಗಲು ಇಷ್ಟ ಪಡಲಿಲ್ಲ. ವಿಶ್ವಾಮಿತ್ರರು ಅದನ್ನು ಬಲಾತ್ಕಾರವಾಗಿ ಎಳೆದು ಕೊಂಡು ಹೋಗಲು ಪ್ರಯತ್ನಿಸಿದರು. ಆದರೆ ಅದು ವಿಫಲ ವಾಯಿತು. ತತ್ಪರಿಣಾಮವಾಗಿ ಯುದ್ಧವು ಆರಂಭವಾಯಿತು. ಶಬಲೆಯು ವಿಶ್ವಾಮಿತ್ರರ ಸೈನ್ಯವನ್ನು ಸದೆಬಡಿಯಿತು. ವಿಶ್ವಾ ಮಿತ್ರರ ನೂರು ಮಂದಿ ಮಕ್ಕಳು ವಿವಿಧಾಯುಧಗಳನ್ನು ಹಿಡಿದು ಕ್ರೋಧದಿಂದ ವಸಿಷ್ಠರ ಮೇಲೆ ನುಗ್ಗಿದರು. ವಸಿಷ್ಠರ ಹುಂ ಕಾರಕ್ಕೆ ನೂರು ಮಂದಿ ರಾಜಪುತ್ರರು ಚತುರಂಗ ಬಲ ಸಹಿತ ಸುಟ್ಟು ಬೂದಿಯಾದರು. ವಿಶ್ವಾಮಿತ್ರರು ರಾಜ್ಯವನ್ನು ತ್ಯಜಿಸಿ ಹಿಮಾಲಯದತ್ತ ಹೊರಟು ಶಿವನನ್ನು ಕುರಿತು ಘೋರ ತಪಸ್ಸನ್ನು ಆಚರಿಸಿದರು. ಶಿವನು ವಿಶ್ವಾಮಿತ್ರರ ತಪಸ್ಸಿಗೆ ಮೆಚ್ಚಿ ಧನುರ್ವೇದದ ಅಂಗೋಪಾಂಗಗಳನ್ನು ಮಂತ್ರಗಳನ್ನು ರಹಸ್ಯಾರ್ಥಗಳನ್ನು ದಯಪಾಲಿಸಿದನು. ಮೊದಲೇ ತಾನು ಕ್ಷತ್ರಿಯನೆಂಬ ಅಹಂಕಾರದಿಂದ ,ಬರೆಯುತ್ತಿದ್ದ ವಿಶ್ವಾಮಿತ್ರರು ಪರಾಕ್ರಮದಿಂದ ಉಬ್ಬಿದರು. ಮತ್ತೊಮ್ಮೆ ವಸಿಷ್ಠರ ಮೇಲೆ ಆಕ್ರಮಣ ಮಾಡಿದರು. ವಸಿಷ್ಠರ ಆಶ್ರಮವನ್ನೆಲ್ಲಾ ತಮ್ಮ ಅಸ್ತ್ರಗಳಿಂದ ಸುಟ್ಟು ಹಾಕಿದರು. ವಸಿಷ್ಟರು ಮಹಾಕ್ರೋಧ ದಿಂದ ತಮ್ಮ ಬ್ರಹ್ಮ ದಂಡವನ್ನು ಎತ್ತಿ ಹಿಡಿದರು. ವಿಶ್ವಾಮಿತ್ರರು ಬಿಟ್ಟ ವಾರುಣ, ರೌದ್ರ, ಇಂದ್ರ ಪಾಶುಪತ, ಐಷೀಕ, ಮಾನವ, ಮೋಹನ, ಗಾಂಧರ್ವ ಮುಂತಾದ ಘೋರವಾದ ಮಂತ್ರಾಸ್ತ್ರ ಗಳನ್ನು ಬ್ರಹ್ಮದಂಡವು ನುಂಗಿತು. ಮಹಾ ಭಯಂಕರವಾದ ಬ್ರಹ್ಮಾಸ್ತ್ರವನ್ನೂ ಸಹ ವಸಿಷ್ಠರು ಬ್ರಹ್ಮ ದಂಡದ ಮೂಲಕ ತಮ್ಮ ಬ್ರಹ್ಮ ತೇಜೋಬಲದಿಂದ ನುಂಗಿಬಿಟ್ಟರು. ವಿಶ್ವಾಮಿತ್ರರು ಸೋತು ಹೋದರು. ಅವರು ಸೋತು ನಿಟ್ಟುಸಿರು ಬಿಡುತ್ತ 'ಧಿಕ್‌ಕ್ಷತ್ರಿಯ ಬಲಂ ಬ್ರಹ್ಮ ತೇಜೋಬಲಂ ಬಲಂ" - ಈ ಕ್ಷತ್ರಿಯ ಬಲಕ್ಕೆ ಧಿಕ್ಕಾರ. ಬ್ರಹ್ಮತೇಜೋ ಬಲವೇ ನಿಜವಾದ ಬಲ. ಅದನ್ನು ಪಡೆಯಲು ನಾನು ಮತ್ತೊಮ್ಮೆ ತಪಸ್ಸನ್ನು ಆಚರಿ ಸುತ್ತೇನೆ ಎಂದು ಮತ್ತೊಮ್ಮೆ ಪೂರ್ವದಿಕ್ಕಿನತ್ತ ಹೊರಟರು. ಸುಮಾರು ಸಾವಿರ ವರ್ಷಗಳವರೆಗೆ ತಪಸ್ಸನ್ನು ಆಚರಿಸಿ ಬ್ರಹ್ಮನಿಂದ' "ಬ್ರಹ್ಮರ್ಷಿ" ಪದವಿಯನ್ನು ಪಡೆದರು. ಇಂದಿಗೂ ವಸಿಷ್ಠವಾಕ್ ವಸಿಷ್ಠರ ಮಾತು ಯಾರೂ ಮೀರಲೂ ಸಾಧ್ಯ ವಿಲ್ಲ ಎಂಬ ಲೋಕೋಕ್ತಿ ಪ್ರಚಲಿತವಾಗಿದೆ. ವಿಶ್ವಾಮಿತ್ರರು ದುಷ್ಟ ರಾಕ್ಷಸರ ವಧೆಗಾಗಿ ಹಾಗೂ ಯಜ್ಞಸಂರಕ್ಷಣಾರ್ಥವಾಗಿ ಚಿಕ್ಕಂದಿನಲ್ಲಿಯೇ ರಾಮ-ಲಕ್ಷ್ಮಣರನ್ನು ಕಳುಹಿಸಬೇಕೆಂದು ದಶರಥನ ಬಳಿ ಬಂದು ಕೇಳಿದಾಗ ದಶರಥನು ಅದಕ್ಕೆ ಒಪ್ಪಲಿಲ್ಲ. ಕಡೆಗೆ ವಸಿಷ್ಠರೇ ಅವರಿಬ್ಬರನ್ನು ಕಳುಹಿಸಿ ಕೊಡ ಬೇಕೆಂದು ದಶ ರಥನಿಗೆ ಹೇಳಿದಾಗ ಕೂಡಲೇ ಅವನು ತನ್ನ ಮಕ್ಕಳನ್ನು ಕಳುಹಿಸಿದನು. ವಸಿಷ್ಠರು ಕೊನೆಗೆ ವಿಶ್ವಾ ಮಿತ್ರರನ್ನು 'ಬ್ರಹ್ಮರ್ಷಿ' ಎಂದು ಕರೆದು ಸಖ್ಯವನ್ನು ಬೆಳೆಸಿದರು. ವಿಶ್ವಾ ಮಿತ್ರರೂ ಸಹ ಬ್ರಹ್ಮರ್ಷಿಗಳಾದ ವಸಿಷ್ಠರನ್ನು ಪೂಜಿಸಿ ಗೌರವಿ ಸಿದರು ಇಂತಹ ವಸಿಷ್ಠ ಮಹರ್ಷಿಗಳಿಗೆ ನಮೋ ನಮಃ

**2. ಅತ್ರಿ:**

ಅತ್ರಿ ಮಹಾಮುನಿಗಳು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ಗೆದ್ದವರು. ಇವರು ಪರಮ ಸಾತ್ವಿಕರು. ಅತ್ರಿಮಹಾಮುನಿಗಳ ಪತ್ನಿಯೇ ಅನುಸೂಯ. ಬ್ರಹ್ಮ, ವಿಷ್ಣು, ಶಿವ ಈ ತ್ರಿಮೂರ್ತಿಗಳು ಅನುಸೂಯೆಯನ್ನು ಪರೀಕ್ಷಿ ಸುವುದಕ್ಕಾಗಿ ಅತ್ರಿಮಹರ್ಷಿಗಳು ಇಲ್ಲದಿರುವಾಗ ಒಂದು ನಿರ್ವಾಣ ಸ್ಥಿತಿಯಲ್ಲಿಯೇ ತಮ್ಮ ಉಣಬಡಿಸ ಬೇಕೆಂದರು. ಆಗ ಮಹಾಪತಿವ್ರತೆಯಾದ ಅನುಸೂಯೆಯು ಮೂವರನ್ನು ಪುಟ್ಟ ಮಗುವನ್ನಾಗಿಸಿ ಉಣಿಸಿದಳು. ಇವರೇ ಮುಂದೆ ತ್ರಿಮೂರ್ತಿ ರೂಪನಾದ ದತ್ತಾತ್ರೇಯ ಅವತಾರಕ್ಕೆ ಕಾರಣರಾದರು. ಮಹಾಪತಿವ್ರತೆಯಾದ ಅನುಸೂಯ ದೇವಿಯು ಶ್ರೀಮನ್ನಾರಾಯಣನಲ್ಲಿ ಭಕ್ತಿಯನ್ನು ಹರಿದಾಸರಲ್ಲಿ ದಾಸ್ಯವನ್ನು ಗುರುಭಕ್ತಿಯನ್ನು, ಪರಮಾತ್ಮನಲ್ಲಿ ದೃಢ ನಿಷ್ಠೆ ಯನ್ನು ಕರುಣಿಸು ಎಂದು ಪ್ರಾರ್ಥಿಸಿದಳು. ಹೀಗಾಗಿ ಅತ್ರಿ ಮಹರ್ಷಿಗಳನ್ನು ಅನುಸೂಯೆಯೊಡನೆಯೇ ಸ್ಮರಿಸಬೇಕು. 'ಸಪತ್ನೀಂ ಪ್ರಪೂಜಯೇತ್'-ಎಂದು ಹೇಳುವುದುಂಟು. ಇಂತಹ ಅತ್ರಿ ಮಹರ್ಷಿಗಳಿಗೆ ನಮೋ ನಮಃ.

### 3. ಜಮದಗ್ನಿ

ಇವರು ಸಾಕ್ಷತ್ ಶ್ರೀಮನ್ನಾರಾಯಣನ ಅವತಾರವಾದ ಪರಶುರಾಮನ ತಂದೆ. ಜಮದಗ್ನಿಯ ಪತ್ನಿ ರೇಣುಕಾದೇವಿಯ ರೂಪಕ್ಕೆ ಒಮ್ಮೆ ಇಂದ್ರನು ಮಾರು ಹೋದನು.ಆಕೆಯ ಮಾನಸಿಕ ವ್ಯಭಿಚಾರವನ್ನು ಅರಿತು ತಂದೆಯ ಆದೇಶದಂತೆ ಪರಶುರಾಮನು ತನ್ನ ತಾಯಿಯನ್ನೇ ವಧಿಸಿದನು.ತಂದೆಯಾದ ಜಮದಗ್ನಿಯು ತನ್ನ ತಾಯಿಯನ್ನೇ ಕೊಂದನಲ್ಲಾ ಎಂದು ಅತ್ಯಂತ ಪ್ರಸನ್ನನಾಗಿ ಪರಶುರಾಮ ನನ್ನು ಏನು ವರಬೇಕು ಕೇಳು ಎಂದಾಗ ತಾನು ತುಂಡರಿಸಿದ ತಾಯಿಯ ತಲೆಯನ್ನು ಜೋಡಿಸಿ "ಮತ್ತೆ ಅವಳಿಗೆ ಜೀವದಾನ ಮಾಡು" ಎಂದು ಪ್ರಾರ್ಥಿಸಿದನು. ಜಮದಗ್ನಿಯು ಅಂತೆಯೇ ಅನುಗ್ರಹಿಸಿದನು. ಹೀಗೆ ಪರಶುರಾಮನು ತನ್ನ ತಾಯಿಯನ್ನು ಮತ್ತೆ ಪಡೆದು ಧನ್ಯನಾದನು. ಜಮದಗ್ನಿ ಮಹಾತಪಸ್ವಿ. ಅವರು ಒಂದು ದಿನ ಯಜ್ಞ ಶಾಲೆಯಲ್ಲಿ ಕುಳಿತಿದ್ದಾಗ ಸಹಸ್ರಾರ್ಜುನ (ಕಾರ್ತ ವೀರ್ಯಾರ್ಜುನ) ಎಂಬ ರಾಜನ ಮಕ್ಕಳು ತಮ್ಮ ಪೂರ್ವ ವೈರವನ್ನು ಸಾಧಿಸಲು ಆಶ್ರಮಕ್ಕೆ ಬಂದು ಧ್ಯಾನದಲ್ಲಿ ನಿರತರಾಗಿದ್ದ ಜಮದಗ್ನಿಯನ್ನು ಕೊಂದು ಹಾಕಿದರು. ಜಮದಗ್ನಿಯು ಸ್ವರ್ಗಸ್ಥರಾದರು. ಅವರ ಮಗನಾದ ಪರಶುರಾಮನು ತಂದೆಯ ವಧೆಯಿಂದ ಕುಪಿತಗೊಂಡು ಭೂಮಿಯಲ್ಲಿ ಇಪ್ಪತ್ತೊಂದು ಬಾರಿ ಪ್ರದಕ್ಷಿಣೆ ಮಾಡಿ (ಸಂಚರಿಸಿ) ಕ್ಷತ್ರಿಯರನ್ನು ಇಲ್ಲವಾಗಿಸಿದನು. ತನ್ನ ತಂದೆಯ ಶಿರಸ್ಸನ್ನು ಮುಂಡದೊಡನೆ ಜೋಡಿಸಿ, ಯಜ್ಞ ಯಾಗಾದಿಗಳನ್ನು ಮಾಡಿ ಭಗವಂತನನ್ನು ಆರಾಧಿಸಿದನು. ಭಗವಂತನು 'ವರದೇಶ ವರಪುರ' ಎಂಬುದಾಗಿ ಅನುಗ್ರಹಿಸಿ ಜಮದಗ್ನಿಗೆ ಸ್ಮೃತಿ ರೂಪವಾದ ಸಂಕಲ್ಪಮಯ ಶರೀರವು ಪ್ರಾಪ್ತವಾಗಲಿ ಎಂದನು. ಅಷ್ಟೇ ಅಲ್ಲದೆ ಜಮದಗ್ನಿಯನ್ನು ಸಪ್ತರ್ಷಿ ಮಂಡಲದಲ್ಲಿ ಏಳನೆಯ ಋಷಿಯನ್ನಾಗಿ ನಿಯಮಿಸಿದನು. ಅಂತಹ ಜಮದಗ್ನಿ ಮಹರ್ಷಿಗೆ ನಮೋ ನಮಃ.

### 4. ಭರದ್ವಾಜ

ಭರದ್ವಾಜರು ಆಂಗೀರಸರ ಸಮಕಾಲೀನರು ಪ್ರಸ್ತುತ ಮನ್ವಂತರದಲ್ಲಿ ಸಪ್ತರ್ಷಿಗಳಲ್ಲಿ ಒಬ್ಬರಾಗಿ ವಿರಾಜಮಾನರಾಗಿದ್ದಾರೆ. ಋಗ್ವೇದದ 6 ನೇ ಮಂಡಲದ ಸಂಯೋಜಕರೂ ಆಗಿದ್ದಾರೆ. ವೇದವ್ಯಾಸರ ಧರ್ಮಸೂತ್ರ ಹಾಗೂ ಬ್ರಹ್ಮಸೂತ್ರಗಳು ಋಗ್ವೇದದ 6 ನೇ ಮಂಡಲದಲ್ಲಿ ಅಡಕವಾಗಿದೆ. ಭರದ್ವಾಜ ಆಶ್ರಮವು ಇಂದಿಗೂ ಉತ್ತರದ ಪ್ರಯಾಗ ಕ್ಷೇತ್ರದಲ್ಲಿದೆ. ಭರದ್ವಾಜರು ದ್ರೋಣಾಚಾರ್ಯರ ಪಿತಾ ಮಹರು. ಅಶ್ವತ್ಥಾಮರಿಗೆ ತಾತ. ಭಾರದ್ವಾಜ ಗೋತ್ರವು ಬ್ರಾಹ್ಮಣರಲ್ಲಿ ಅತ್ಯಂತ ಪ್ರಸಿದ್ಧವಾಗಿದೆ. ಏಳು ಪ್ರಮುಖ ಗೋತ್ರಗಳ ಪೈಕಿ ಭಾರದ್ವಾಜ ಗೋತ್ರದಲ್ಲಿ 1400 ಉಪಶಾಖೆಗಳಿವೆ ಎಂದು ಜ್ಯೋತಿಷ್ಯ ಶಾಸ್ತ್ರದಲ್ಲಿ ತಿಳಿಸಿದೆ. ಭರದ್ವಾಜರಿಗೆ ದೇವವರ್ಣಿಣಿ ಎಂಬ ಪುತ್ರಿಯಿದ್ದಳು.ಯಾಜ್ಞವಲ್ಕ್ಯರ ಎರಡನೆಯ ಪತ್ನಿ ಕಾತ್ಯಾಯಿನ ಭರದ್ವಾಜರ ಔರಸಪುತ್ರಿ. ಬ್ರಹ್ಮನು ವ್ಯಾಕರಣವನ್ನು ಬೃಹಸ್ಪತಿದೆ ಬೋಧಿಸಿದ. ಬೃಹಸ್ಪತಿ ಇಂದ್ರನಿಗೆ ಬೋಧಿಸಿದ. ನಂತರ ಇಂದ್ರನು ಭರದ್ವಾಜರಿಗೆ ವ್ಯಾಕರಣ ಮೀಮಾಂಸ ಶಾಸ್ತ್ರವನ್ನು ತಿಳಿಸಿದ ಎಂದು ಶಾಸ್ತ್ರದಲ್ಲಿ ಉಲ್ಲೇಖಿಸಿದೆ. ಭರದ್ವಾಜರು ಗೌತಮ ಮತ್ತು ವಾಲ್ಮೀಕಿ ಮಹರ್ಷಿಗಳ ಶಿಷ್ಯರಾಗಿದ್ದರು ಎಂದೂ ತಿಳಿಸಿದೆ. ಭರದ್ವಾಜರು ಸುಶೀಲೆ ಎಂಬ ಪತ್ನಿಯಿಂದ ಗಾರ್ಗ ಎಂಬ ಮಗನನ್ನು ಪಡೆದಿದ್ದರು. ರಾಮ ಸೀತಾ ಲಕ್ಷ್ಮಣರು ವನವಾಸಕ್ಕೆ ಹೋದಾಗಲೂ ಹಾಗೂ ರಾವಣ ಕುಂಭಕರ್ಣಾದಿಗಳನ್ನು ವಧಿಸಿ ಪುನಃ ಅಯೋಧ್ಯೆಗೆ ಬರುವ ಮುನ್ನವೂ ಭರದ್ವಾಜರ ಆಶ್ರಮದಲ್ಲಿದ್ದ ಅವರ ಆತಿಥ್ಯವನ್ನು ಸ್ವೀಕರಿಸಿದರು ಎಂದು ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ಕಲಿಯುಗ ವೈಕುಂಠವೆಂದು ಪ್ರಸಿದ್ಧವಾದ ತಿರುಪತಿ ತಿಮ್ಮಪ್ಪನ ಗೋತ್ರವೂ-ಭಾರದ್ವಾಜಗೋತ್ರವೇ ಅಲ್ಲವೇ? ಅಂತಹ ಮಹಾ ಮಹಿಮರಾದ ಭಾರದ್ವಾಜರಿಗೆ ನಮೋ ನಮಃ

### 5. ವಿಶ್ವಾಮಿತ್ರ

ಇವರು ಗಾದಿ ಮಹಾರಾಜನ ಪುತ್ರ. ಕುಶನಾಭನೇ ಇವರ ತಾತ. ಇವರು ಕುಶವಂಶದಲ್ಲಿ ಹುಟ್ಟಿದರಿಂದ ಇವರಿಗೆ ಕೌಶಿಕ ಎಂದು ಹೆಸರಾಯಿತು.ಒಮ್ಮೆ ಇವರು ತಮ್ಮ ಅಕ್ಷೌಹಿಣಿ ಚತುರಂಗ ಬಲವನ್ನು ತೆಗೆದುಕೊಂಡು ಭೂಪರ್ಯಟನೆಗೆ ಹೊರಟರು. ನಗರಗಳನ್ನು ಆಶ್ರಮಗಳನ್ನು ದಾಟುತ್ತಾ ವಸಿಷ್ಠರ ಆಶ್ರಮಕ್ಕೆ ಬಂದರು. ವಸಿಷ್ಠರು ವಿಶ್ವಾಮಿತ್ರರಿಗೆ ಶಬಲಾ ಎಂಬ ಕಾಮಧೇನುವನ್ನು ಕೊಡದಿದ್ದ ಕಾರಣ ಈರ್ವರಿಗೂ ಯುದ್ಧ ನಡೆಯಿತು. ವಿಶ್ವಾಮಿತ್ರರ ಪ್ರಯತ್ನ ವಿಫಲವಾಯಿತು. ಕೊನೆಗೆ ಸಾವಿರಾರು ವರ್ಷಗಳ ಕಾಲ ತಪಸ್ಸನ್ನು ಆಚರಿಸಿ ಬ್ರಹ್ಮರ್ಷಿಯಾದರು. ಅಷ್ಟೇ ಅಲ್ಲ, ವಿಶ್ವಾಮಿತ್ರರು ತಮ್ಮ ತಪೋಬಲದಿಂದ ತ್ರಿಶಂಕು ಮಹಾರಾಜನಿಗೆ ಹೊಸದೊಂದು ಸ್ವರ್ಗವನ್ನೇ ಸೃಷ್ಟಿಸಿದರು. ಇದಕ್ಕೆ 'ತ್ರಿಶಂಕು ಸ್ವರ್ಗ'ವೆಂದೇ ಹೆಸರಾಯಿತು. 'ವಿಶ್ವಾಮಿತ್ರ' ಎಂದರೆ ಇಡೀ ವಿಶ್ವಕ್ಕೆ ಮಿತ್ರನಾದವನು ಎಂಧರ್ಥ. ಈ ಹೆಂಗಸರಿಗೆ ತಕ್ಕಂತೆ ರಾಮ ಮತ್ತು ಲಕ್ಷ್ಮಣರನ್ನು ಕರೆದೊಯ್ದು ತಾಟಕಾ ಎಂಬ ಯಕ್ಷಿಯನ್ನು ಕೊಲ್ಲಿಸಿ ಬಹಳ ಸಂತುಷ್ಟರಾಗಿ ರಾಮನಿಗೆ ಅನೇಕಾ ಮಂತ್ರಾಸ್ತ್ರಗಳನ್ನು ಉಪದೇಶಿಸಿ ಸುಮಾರು 50 ದಿವ್ಯಾಸ್ತ್ರಗಳನ್ನು ಕೊಟ್ಟರು. ವಿಶ್ವಾಮಿತ್ರನೇ ಮುಂದೆ ರಾಮಲಕ್ಷ್ಮಣರನ್ನು ಜನಕಮಹಾರಾಜನ ಬಳಿ ಕರೆತಂದು (ಮಿಥಿಲಾನಗರ) ಅವನ ಮಕ್ಕಳನ್ನೇ ಕೊಟ್ಟು ಮದುವೆ ಮಾಡಿಸಿದರು. ಸತ್ಯವ್ರತನಾದ ಹರಿಶ್ಚಂದ್ರನನ್ನು ಕಷ್ಟ ಪರಂಪರೆಯಲ್ಲಿ ಸಿಲುಕಿಸಿ ಅವನಿಂದ ಸೋತು ಹೋದರು. ಶುನಃಶ್ಯೇಪನ ಪ್ರಾಣವನ್ನು ರಕ್ಷಿಸಿದ ಕೀರ್ತಿ ವಿಶ್ವಾಮಿತ್ರರಿಗೆ ಸಲ್ಲುತ್ತದೆ.

ಅಂತಹ ಮಹಾಬಲಶಾಲಿ ಜಿತೇಂದ್ರಿಯರಾದ ವಿಶ್ವಾಮಿತ್ರರಿಗೆ ನಮೋ ನಮಃ.

## 6. ಗೌತಮ ಮಹರ್ಷಿ:

ಇವರು ತ್ರೇತಾ ಮತ್ತು ದ್ವಾಪರ ಯುಗಗಳಲ್ಲಿ ತಮ್ಮ ತೋಪ ಬಲದಿಂದ ಮಹಾಮಹಿಮರಾದರು.ಇವರ ಪತ್ನಿ ಅಹಲ್ಯಾ ಪಂಚಕನ್ಯೆಯರಲ್ಲಿ ಮೊದಲಿಗರಾಗಿದ್ದಾರೆ ಎಂದು ಹೇಳುತ್ತಾರೆ.

ಅಹಲ್ಯಾ ದ್ರೌಪದಿ ಸೀತಾ ತಾರ ಮಂಡೋದರಿ ತಥಾ।
ಪಂಚಕನ್ಯಾಂ ಸ್ಮರೇನ್ನಿತ್ಯಂ ಮಹಾಪಾತಕ ನಾಶನಮ್॥

ಮಹಾಪತಿವ್ರತೆಯಾದ ಅಹಲ್ಯೆಯು ಒಮ್ಮೆ ದೇವೇಂದ್ರನ ಕಪಟಕ್ಕೆ ಮೋಸ ಹೋದಳು.ಇದನ್ನರಿತ ಗೌತಮ ಮಹರ್ಷಿಗಳು ಅಹಲ್ಯೆಯನ್ನು 'ಕಲ್ಲಾಗು' ಎಂದು ಶಪಿಸಿದರು. ಅವಳು ಶಿಲಾರೂಪದಲ್ಲಿ ಅನೇಕ ವರ್ಷಗಳು ಇರಬೇಕಾಗುತ್ತದೆ. ಮುಂದೆ ವಿಶ್ವಾಮಿತ್ರರ ಆದೇಶದಂತೆ ಶ್ರೀರಾಮನಿಂದ ಅಹಲ್ಯಾಶಾಪ ವಿಮೋಚನೆ ಆಗುತ್ತದೆ. ನಂತರ ದ್ವಾಪರಯುಗದಲ್ಲಿ ಕುರುಕ್ಷೇತ್ರದ ಮಹಾಯುದ್ಧ ನಡೆಯುತ್ತಿದ್ದಾಗ ಶ್ರೀ ಕೃಷ್ಣನು ಭೀಮಸೇನನ ಬಾಯಲ್ಲಿ "ಅಶ್ವತ್ಥಾಮಹತಃ" ಎಂದು ಹೇಳಿಸುತ್ತಾನೆ. ಇದನ್ನರಿತ ದ್ರೋಣಾಚಾರ್ಯರು ತಮ್ಮ ಮಗ ಸತ್ತಿರುವುದು ಸುಳ್ಳು ಇದು ಒಂದು ಕುತಂತ್ರ ಎಂದು ಭಾವಿಸಿ ತಮ್ಮ ಸೈನ್ಯದೊಡನೆ ಪಾಂಡವರ ಸೈನ್ಯವನ್ನು ಸಂಪೂರ್ಣವಾಗಿ ನಾಶ ಮಾಡಲು ಸನ್ನದ್ಧರಾಗುತ್ತಾರೆ.ಆಗ ಗೌತಮರು ರಣರಂಗದಲ್ಲಿದ್ದ ದ್ರೋಣಾಚಾರ್ಯರಿಗೆ ಸ್ವಧರ್ಮ ಪರಿಪಾಲನೆಗಾಗಿ ಯುದ್ಧವನ್ನು ತ್ಯಜಿಸಿ ಬ್ರಹ್ಮಲೋಕಕ್ಕೆ ತೆರಳು ಎಂದು ಉಪ ದೇಶಿಸುತ್ತಾರೆ ಮತ್ತೆ ಧರ್ಮ ರಾಜನು ಶ್ರೀ ಕೃಷ್ಣನ ಪ್ರಚೋದನೆ ಯಿಂದ ಸುಳ್ಳು ಮತ್ತು ಸತ್ಯ ಮಿಶ್ರಿತವಾದ ಘೋಷಣೆಯನ್ನು (ಅಶ್ವತ್ಥಾ ಮೋಹತಃ ಕುಂಜರಃ) ಮಾಡುತ್ತಾನೆ. ಇದನ್ನು ದ್ರೋಣಾಚಾರ್ಯರು ನಿಜವೆಂದು ಭಾವಿಸಿ ಶಸ್ತ್ರ ಸಂನ್ಯಾಸ ಮಾಡಿ ಜ್ಯೋತಿ ಸ್ವರೂಪವಾಗಿ ಬ್ರಹ್ಮಲೋಕಕ್ಕೆ ಹೊರಟು ಹೋಗುತ್ತಾರೆ. 'ಗೌತಮ'- ಎಂದರೆ ಹಸುವಿಗೆ ಸಮಾನ ಎಂದರೆ ಕರುಣಾಮೂರ್ತಿ ಎಂದರ್ಥ. ಗೌತಮ ಮಹರ್ಷಿ ಗಳು ಮಹಾ ತಪಸ್ವಿಗಳು, ಸಿದ್ಧಪುರುಷರು ಸಾವಿತ್ರಿ ಮಂತ್ರದ ಸಿದ್ಧಿ ಪಡೆದಿದ್ದವರೆಂದು ಯಜುರ್ವೇದದಲ್ಲಿ ಅವರನ್ನು ಸ್ತುತಿಸಲಾಗಿದೆ. ಇಂತಹ ವಿಶಾಲ ಹೃದಯದ ಗೌತಮ ಮಹರ್ಷಿಗಳಿಗೆ ನಮೋ ನಮಃ

## 7. ಕಶ್ಯಪ

ಚಾಕ್ಷುಷ ಮನ್ವಂತರದಲ್ಲಿ ತುಷಿತರೆಂಬ ದ್ವಾದಶ ದೇವತೆ ಗಳು, ಮತ್ತೆ ವೈವಸ್ವತ ಮನ್ವಂತರದಲ್ಲಿ ಕಶ್ಯಪರ ಅಂಶದಿಂದ ಅದಿತಿಯ ಗರ್ಭದಲ್ಲಿ ಜನಿಸಿದರು. ಅವರಿಂದಲೇ ವಿಷ್ಣು, ಇಂದ್ರ, ಕೃಷ್ಣಾ, ದಾತಾ, ಅರ್ಯಮಾ, ಪೂಷಾ, ವಿವಸ್ವಾನ್ ಸವಿತಾ, ಮಿತ್ರ,ವರುಣ,ಭಗ ಮತ್ತು ಅಂಶ ಎಂಬ ದ್ವಾದಶಾಧಿತ್ಯರು ಜನಿಸಿ ದರು ಎಂದು ಅಗ್ನಿ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ಕಶ್ಯಪ ಮತ್ತು ದಿತಿಯರಿಗೆ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪು ಎಂಬ ಇಬ್ಬರು ಪುತ್ರರು ಹಾಗೂ ಸಿಂಹಿಕಾ ಎಂಬ ಪುತ್ರಿಯು ಜನಿಸಿ ದಳು. ಈಕೆಯು ದಾನವನ ಪತ್ನಿಯಾದಳು. ಇವಳಿಗೆ ರಾಹು, ಕೇತು ಮುಂತಾದ ಗ್ರಹಗಳು ಜನಿಸಿದರು. ಕಶ್ಯಪರ ಎರಡನೆಯ ಪತ್ನಿ ದನು ಎಂಬುವಳಿಗೆ 100 ದಾನವ ಪುತ್ರರು ಜನಿಸಿದರು. ಕಶ್ಯಪರ ಮೂರನೆಯ ಪತ್ನಿ ತಾಮ್ರಾಳಿಂದ 6 ಪುತ್ರರು ಜನಿ ಸಿದರು. ಇತರ ಪತ್ನಿಯರಿಂದ ಕಾಕಾದಿ ಪಕ್ಷಿ ಗಳು, ಕುದುರೆ ಹಾಗೂ ಒಂಟೆಗಳು ಜನಿಸಿದವು. ವಿನತಾಳಿಂದ ಅರುಣ ಮತ್ತು ಗರುಡರೆಂಬ ಇಬ್ಬರು ಪುತ್ರರು ಜನಿಸಿದರು. ಸುರಸೆಯಿಂದ ಸರ್ಪಗಳು ಹಾಗೂ - ಕದ್ರುಳಿಂದ ಆದಿಶೇಷ, ವಾಸುಕಿ, ತಕ್ಷಕರು ಮತ್ತು ಸಾವಿರಾರು ನಾಗರುಗಳು ಜನಿಸಿ ದರು.ಹೀಗೆ ಕಶ್ಯಪ ರಿಂದ ಸ್ಥಾವರ ಜಂಗಮಗಳು ಹುಟ್ಟಿದವು. ದಿತಿಯು ತನ್ನ ಪುತ್ರರ ಮರಣದಿಂದ ದುಃಖಗೊಂಡು ಇಂದ್ರ ನನ್ನು ಸಂಹರಿಸುವಂತಹ ಪುತ್ರರನ್ನು ಪಡೆಯಬೇಕೆಂದು ಕಶ್ಯಪರನ್ನು ಪ್ರಾರ್ಥಿಸಿದಳು. ಆಕೆಯು ಗರ್ಭವತಿಯಾಗಿ ವ್ರತ ಪಾಲನೆಯಲ್ಲಿರುವಾಗ ಒಂದು ದಿನ ಭೋಜನದ ನಂತರ ಕಾಲು ತೊಳೆಯದೆ ಮಲಗಿದ್ದಳು. ಆಗ ಇಂದ್ರನು ಈ ದೋಷದ ಕಾರಣ ಆಕೆಯ ಗರ್ಭದಲ್ಲಿ ಪ್ರವೇಶಿಸಿ ಆ ಗರ್ಭವನ್ನೇ ತುಂಡಾಗಿಸಿದನು. ಆದರೆ ವ್ರತ ಪ್ರಭಾವದಿಂದ ಅವುಸಾಯಲಿಲ್ಲ. ಅವರೆಲ್ಲರೂ ಅತ್ಯಂತ ಕುಪಿತ ರಾಗಿ ಇಂದ್ರನ ಸಹಾಯಕರಾದ 49 ಮರಕರೆಂಬ ದೇವತೆ ಗಳಾದರು. ಹೀಗೆ ಕಶ್ಯಪರು ದಾನವರ, ಪಶುಪಕ್ಷಿಗಳ, ಸರೀ ಸೃಪಗಳು, ದೇವತೆಗಳ ಜನನಕ್ಕೆ ಕಾರಣರಾದರು.ಇಂತಹ ಕಶ್ಯಪ ಮಹರ್ಷಿಗಳಿಗೆ ನಮೋ ನಮಃ.

ನಾವು ಈಗ ಶ್ವೇತವರಾಹಕಲ್ಪ ವೈವಸ್ವತ ಮನ್ವಂತರ ದಲ್ಲಿ ಕಾಲಾವಧಿಯಲ್ಲಿ ಇದ್ದೇವೆ. ಈ ಮನ್ವಂತರವು ಎಲ್ಲಿಯ ವರೆಗೆ ಇರುತ್ತದೆಯೋ ಅಷ್ಟೋ ಸಂವತ್ಸರಗಳ ಕಾಲವು ಈ ಏಳು ಮಹರ್ಷಿಗಳು ಸಪ್ತರ್ಷಿಮಂಡಲದಲ್ಲಿ ಅಧಿಕಾರವಹಿಸಿ ಕೊಂಡು ಈ ಜಗತ್ತನ್ನು ರಕ್ಷಿಸುತ್ತಾರೆ.

ಸಪ್ತರ್ಷಿ ಮಂಡಲವನ್ನು ರಾತ್ರಿಯ ವೇಳೆಯಲ್ಲಿ ನಿರ್ಮಲ ವಾದ ಆಕಾಶದಲ್ಲಿ ಅಂದರೆ ಮೋಡಗಳು ಇಲ್ಲದಿದ್ದಲ್ಲಿ ಬರಿ ಗಣ್ಣಿ ನಿಂದಲೇ ನಾವು ನೋಡಬಹುದು.



ಯುಗಾದಿ ತನ್ನಿಮಿತ್ತ ಸಕಾಲಿಕ ಲೇಖನ




# ಪಂಚಾಂಗದ ಪೂರ್ವಾಪರ

- ಡಾ|| ಗುರುರಾಜ ಪೋಶೆಟ್ಟಿಹಳ್ಳಿ
9035618076

ಎಲ್ಲೆಡೆ ಶ್ರೀ ಶಾರ್ವರಿ ಸಂವತ್ಸರದ ಚಾಂದ್ರ ಮಾನ ಯುಗಾದಿಯ ಸಂಭ್ರಮ. ಮನೆಯೊಳಗಡೆ ಹೋಳಿಗೆ ಊಟದ ರುಚಿ; ಹೊರಗಡೆ ಚೈತ್ರ ಪಲ್ಲವದ ಹೊಚ್ಚಹೊಸ ನಿಸರ್ಗ. ಇದರ ಜೊತೆಗೆ ಯುಗಾದಿಯ ಇನ್ನೊಂದು ಅವಿಭಾಜ್ಯ ಅಂಗವೆಂದರೆ, ಪಂಚಾಂಗ. ಈ ಹಬ್ಬದ ದಿನ ಸಂಜೆ ಸಾಮೂಹಿಕವಾಗಿ ನಡೆಯುವ ಕ್ರಿಯೆಯೆಂದರೆ ಪಂಚಾಂಗ ಶ್ರವಣ. ಅದರಲ್ಲಿ ವ್ಯಕ್ತಿ ವಿಚಾರದಿಂದ ಹಿಡಿದು, ದೇಶ-ವಿದೇಶಾಂತರಗಳ ವಿಚಾರ ವೆಲ್ಲ ಅಡಗಿರುತ್ತದೆ.ಆದರೆ,ಆಧುನಿಕತೆಯ ಪರಿಕರ ಗಳನ್ನು ಹಿಡಿದುಕೊಂಡು ನಾಗ ಲೋಟದಿಂದ ಸಾಗುತ್ತಿ ರುವ ಹದಿಹರೆಯದ ಹುಡುಗ - ಹುಡುಗಿಯರಿಗೆ ಪಂಚಾಂಗವೆಂದರೆ ಏನೆಂದು ಗೊತ್ತಿಲ್ಲ ಬಿಡಿ. ನಿಜಕ್ಕೂ ಅದೊಂದು ಎನ್‌ಸೈಕ್ಲೊಪೀಡಿಯಾ! ಅವರಿಗೆಂದೇ ಪಂಚಾಂಗದ ಈ ಪೂರ್ವಾಪರ.

ಜನ್ಮನಕ್ಷತ್ರ, ಕರ್ನಾಟಕದ ಉದ್ದಗಲದ ಮೂಲೆ ಮೂಲೆಗಳ ಊರಗಳ ತೇರು, ಜಾತ್ರೆ, ಊರಹಬ್ಬ, ಮಳೆ ನಕ್ಷತ್ರ, ಪ್ರತಿನಿತ್ಯದ ತಿಥಿ - ನಕ್ಷತ್ರ, ರಾಹುಕಾಲ - ಗುಳಿಕ ಕಾಲ - ಯಮಗಂಡ ಕಾಲ ಸಂಕಷ್ಟಿ, ಮೈಮೇಲೆ ಹಲ್ಲಿ ಬಿದ್ದರೆ ಏನು ಕ್ರಮ, ಮನೆಯೊಳಕ್ಕೆ ಕಾಗೆ ನುಗಿದ್ದರೆ ಯಾವ ಶಾಂತಿ , ಗೌರಿ ಪಂಚಾಂಗ, ಆಯ - ವ್ಯಯ, ಶುಭಾಶಯಗಳ ವಿವರಣೆ, ಗ್ರಹಣದ ದಿನ ಯಾವ್ಯಾವ ದಾನ ಕೊಡಬೇಕು.ಯಾವ್ಯಾವ ರಾಶಿಯವರು ಏನೇನು ಮಾಡಬೇಕು, ಗ್ರಹಣ ನಮ್ಮ ದೇಶದಲ್ಲಿ ಕಾಣುತ್ತೋ ಇಲ್ಲವ್ರೋ, ಅದರ ಗೋಚರ ಕಾಲವೆಷ್ಟು, ಸ್ಮಾರ್ತ ಏಕಾ ದಶಿ ಯಾವತ್ತು, ಶ್ರೀವೈಷ್ಣವ ಏಕಾದಶಿ ಯಾವತ್ತು? ನಾಳೆ ಬರುವ ಅಮಾವಾಸ್ಯೆ ಎಷ್ಟು ಹೊತ್ತಿಗೆ ಶುರುವಾಗಿ, ಎಷ್ಟು ಹೊತ್ತಿನವರೆಗೆ ಇರುತ್ತೆ? ತೋಳಪ್ಪರ್ ಗೋಕುಲಾಷ್ಟಮಿ ಯಾವತ್ತು, ಮನ್ನಾರ್ ಗೋಕುಲಾಷ್ಟಮಿ ಯಾವತ್ತು? ಈ ವರ್ಷ ದೇಶದ ಆಗುಹೋಗುಗಳೇನು? ಮೂಲಾ ನಕ್ಷತ್ರದಲ್ಲಿ ಹುಟ್ಟಿದರೆ ಏನೂ ಮಾಡಬೇಕು? ಅದರಲ್ಲಿ ಯಾವ ಪಾದ ಕ್ರೂರ, ಯಾವ ಪಾದ ಸೌಮ್ಯ? ಮಗಳ ಮದುವೆಗೆ ಪ್ರಶಸ್ತ ಲಗ್ನ ಯಾವುದು ಒಳ್ಳೇ ದಿನ? ನನ್ನ ಮಗನಿಗೆ ಅಬ್ರಾಡ್‌ಗೆ (ಅದು ಅಮೇರಿಕಕ್ಕೆ) ಹೋಗೋ ಯೋಗ ಇದೆಯಾ? ನಮ್ಮ ಮಗನಿಗೆ ಯಾಕೆ ಮೂವತ್ತಾದರೂ ಹುಡುಗಿ ಸಿಗ್ತಾ ಇಲ್ಲ? ದೇವಗಣ - ಮನುಷ್ಯಗಣ - ರಾಕ್ಷಸಗಣ...

ಹೀಗೆ ಪ್ರಶ್ನೆಗಳು ನೂರಾರು. ಆದರೆ, ಇವೆಲ್ಲಕ್ಕೂ ಉತ್ತರ ಬೇಕೆ? ಹಾಗಾದರೆ ಪಂಚಾಂಗ ನೋಡಿ! ನಿಜ ಹೇಳ ಬೇಕೆಂದರೆ, ಪಂಚಾಂಗ ನಮ್ಮ ನಿತ್ಯಜೀವನದ ನಂಬಿಕೆಗಳ ಎನ್‌ಸೈಕ್ಲೊಪೀಡಿಯಾ! ಹೀಗಾಗಿಯೇ ಯುಗಾದಿಗೆ ತಿಂಗಳುಗಳ ಮೊದಲೇ ಪುಸ್ತಕದಂಗಡಿಗಳಲ್ಲಿ ಪಂಚಾಂಗಕ್ಕೆ ಡಿಮ್ಯಾಂಡಪ್ಪೋ ಡಿಮ್ಯಾಂಡು. ಒಟ್ಟಿನಲ್ಲಿ ಅದು ನಮ್ಮನ್ನು ಹುಟ್ಟಿನಿಂದ ಅಂತ್ಯದವರೆಗೂ ಆವರಿಸಿಕೊಂಡಿದೆ.

ಯುಗಾದಿಯಂದು ಪೂಜಿಸಿ, ವರ್ಷವಿಡೀ ಜತನ ವಾಗಿ ಕಾಪಾಡಿಕೊಳ್ಳುವ, ಹೆಜ್ಜೆ ಹೆಜ್ಜೆಗೂ ಅದನ್ನು ನೋಡಿಯೇ ಮುಂದಡಿ ಇಡುವ ಪಂಚಾಂಗವೆಂದರೆ - ಅದು ಕಾಲಜ್ಞಾನದ ಕೈಪಿಡಿ. ಹೀಗಾಗಿಯೇ ಅದು ಕಾಲದ ತಿಳುವಳಿಕೆ ಬೇಕೇಬೇಕು. ಇದು ವಿಜ್ಞಾನವ್ರೋ, ಅರೆಬರೆ ವಿಜ್ಞಾನವ್ರೋ, ಬುರುಡೆಯೋ, ಬುಡಬುಡಿಕೆಯೋ ಎನ್ನುವ ಮಾತು ಆ ಮೇಲೆ.

## ಎಷ್ಟೊಂದು ಪಂಚಾಂಗ!

ಇಂದು ಮಾರುಕಟ್ಟೆಯಲ್ಲಿ ವಿವಿಧ ವರ್ಣದ, ವಿವಿಧ ಆಕಾರದ, ನಾನಾ ಸಂಪ್ರದಾಯಕ್ಕೆ ತಕ್ಕ ಪಂಚಾಂಗಗಳಿವೆ. ಇಂಥ ವೈವಿಧ್ಯ ಸ್ವಾಗತಾರ್ಹ. ಇದು, ನಮ್ಮ ಬಹುಸಂಸ್ಕೃತಿಯ ಒಂದು ಸಂಕೇತ. ಕರ್ನಾಟಕದಲ್ಲಿ ಬಳಕೆಯಲ್ಲಿರುವ ಕೆಲವು ಪಂಚಾಂಗಗಳು ಹೀಗಿವೆ. ಒಂಟಿಕೊಪ್ಪಲ್ ಪಂಚಾಂಗ, ಸಂಪತ್ಕೃಷ್ಣ ಜೋಯಿಸರ ಪಂಚಾಂಗ, ಸುತ್ತೂರು ಮಠದ ಪಂಚಾಂಗ, ಶಾಬಾದಿ ಮಠದ ಪಂಚಾಂಗ, ಚಿದಂಬರ ಪಂಚಾಂಗ, ಗೋಕರ್ಣ ಪಂಚಾಂಗ,ಬಗ್ಲೋಣ ಪಂಚಾಂಗ, ಧಾರವಾಡ ಪಂಚಾಂಗ, ಉಡುಪಿ ಶ್ರೀಕೃಷ್ಣ ಪಂಚಾಂಗ, ವೈಜಯಂತಿ ಪಂಚಾಂಗ,ಶ್ರೀ ಕೃಷ್ಣ ಪಂಚಾಂಗ, ಗದಗಿನ ಬಸವೇಶ್ವರ ಪಂಚಾಂಗ, ಎಸ್ ಕೆ ಜೈನ್ ಅವರ ಕಾಲಚಕ್ರ,ಸುರಪುರ ಪಂಚಾಂಗ, ಜನಪ್ರಿಯ ಪಂಚಾಂಗ,ಜ್ಯೋತಿಷವಾಣಿ ಪಂಚಾಂಗ, ಕುಂದಾಪುರದ ಪಂಚಾಂಗ, ದಾತೆ ಪಂಚಾಂಗ, ಮಹಾಲಕ್ಷ್ಮೀ ಪಂಚಾಂಗ.

## ಯುವ ಮನಸ್ಸಿಗೆ ಪಂಚಾಂಗದ ಪ್ರವರ

ಆದಿಶಂಕರರು ಕಾಲವನ್ನು ಕುರಿತು 'ಕಾಲೋ ಜಗದ್ ಭಕ್ಷಕಃ' (ಕಾಲ ಜಗತ್ತನ್ನೇ ನುಂಗುತ್ತದೆ) ಎಂದಿದ್ದಾರೆ. ಆ ಮಾತು ಸುಳ್ಳಲ್ಲ. 'ನ್ಯಾಯ ದರ್ಶನ'ವು ಸರ್ವಾಧಾರಃ ಕಾಲಃ (ಎಲ್ಲಕ್ಕೂ ಕಾಲವೇ ಆಧಾರ) ಎನ್ನುತ್ತದೆ. ಒಟ್ಟಿನಲ್ಲಿ ಕಾಲದ ಬಗೆಗಿನ ಕುತೂಹಲ ಸಾರ್ವಕಾಲಿಕ. ಭೌತವಿಜ್ಞಾನಿಗಳಲ್ಲೂ ಕಾಲವೇ ಪ್ರಮುಖ ಅಧ್ಯಯನ ವಸ್ತು.

ನಿಜ ಅರ್ಥದಲ್ಲಿ ಹೇಳಬೇಕೆಂದರೆ, ಅಖಂಡ ಕಾಲದ ಐದು ಉಪಾಧಿಕೃತ ಭೇದವೇ ಪಂಚಾಂಗ. ಸರಳವಾಗಿದೆ, ಕಾಲದ ಐದು ವಿಧಗಳು ಎನ್ನಬಹುದು. ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣ - ಇವೇ ಆ ಐದು ಅಂಗಗಳು. ಇದರ ಜೊತೆಗೆ ಪಂಚಾಂಗದಲ್ಲಿ ಬೇರೆ ಬೇರೆ ಇನ್ನೇನೇನೋ ಮಾಹಿತಿಗಳೂ ಕಿಕ್ಕಿರಿದಿರುತ್ತವೆ. ಆದರೂ ಅದು ಮುಖ್ಯವಾಗಿ ಕಾಲದ ಐದು ಅಂಗಗಳ ಜೊತೆಗಿನ ಅನುಸಂಧಾನವಾದ್ದರಿಂದ ಅದಕ್ಕೆ 'ಪಂಚಾಂಗ' ವೆಂಬ ಹೆಸರೇ ಅಂಟಿಕೊಂಡಿದೆ.ಕಾಲದ ಚಲನೆಗೆ ಸೂರ್ಯ-ಚಂದ್ರರ ಚಲನೆಯೇ ಆಧಾರ. ಇವುಗಳ ಗಣನೆ ತುಂಬಾ ಕ್ಲಿಷ್ಟಕರ. ಇದು ನಿಖರವಾದ ಜ್ಯೋತಿಷ್ಯ, ಖಗೋಳ ಮತ್ತು ಗಣಿತದ ಜ್ಞಾನದಿಂದ ಮಾತ್ರ ಸಾಧ್ಯ. ನಮ್ಮ ಉಪಗ್ರಹಗಳು ಮಾಹಿತಿ ರವಾನಿಸುವ ಮೊದಲೇ 'ಮುಂದಿನ ವರ್ಷ ಡಿಸೆಂಬರ್ 21 ರ ಬೆಳಗ್ಗೆ 9.32 ರಿಂದ 9.58 ರ ವರೆಗೆ ಸಂಪೂರ್ಣ ಸೂರ್ಯಗ್ರಹಣ ಸಂಭವಿಸುತ್ತದೆ. ಇದು ವಿಶ್ವದ ಇಂತಿಂಥ ಭಾಗಗಳಲ್ಲಿ ದೃಗ್ಗೋಚರ' ಎಂದು ಹೇಳುತ್ತದೆ. ಅಷ್ಟರ ಮಟ್ಟಿಗೆ ಅದು ವಿಜ್ಞಾನವೇ. ಆದರೆ, ಈ ವಿಜ್ಞಾನಕ್ಕೆ ಲಗತ್ತಿಸುವ ಶಾಂತಿ, ಹೋಮ, ದಾನ ಮುಂತಾದ ಅಂಶಗಳ ಬಗ್ಗೆವಾದ-ವಿವಾದ ಸಾಧ್ಯವಿದೆ.

ನಿತ್ಯದ ತಿಥಿಗೂ (ತಿಥಿ ಎಂದರೆ ಬರೀ ಶ್ರಾದ್ಧವಲ್ಲ) ಪಂಚಾಂಗ ಇಂತಹುದೇ ಲೆಕ್ಕಾಚಾರವನ್ನು ಇಟ್ಟುಕೊಂಡಿದೆ. ತಿಥಿ ಎಂದರೆ ಚಂದ್ರ ಮತ್ತು ಸೂರ್ಯನ ನಡುವಿನ 12 ಡಿಗ್ರಿ ವ್ಯತ್ಯಾಸ. ಈ ಅವಧಿಯೇ ತಿಥಿ. ಈ ಪ್ರಕಾರ ಚಂದ್ರನಿಗೆ 360 ಡಿಗ್ರಿಯನ್ನು ಕ್ರಮಿಸಲು ಸರಿಯಾಗಿ ಒಂದು ತಿಂಗಳು ಬೇಕು. ಈ ತಿಂಗಳುಗಳನ್ನೇ ಪಕ್ಷಗಳನ್ನಾಗಿ ವಿಂಗಡಿಸಲಾಗಿದೆ. ಹಾಗೆಯೇ ತಿಥಿಗಳನ್ನು 'ನಂದಾ ಚ ಭದ್ರಾ ವಿಜಯಾ ಚ ರಿಕ್ತಾ ಪೂರ್ಣೇಷು ಸಂಜ್ಞಾ ಕ್ರಮಶಸ್ತಿಥೀ ನಾಂ' ಎಂದು ಐದು ರೀತಿ ವಿಂಗಡಿಸಲಾಗಿದೆ. ಇನ್ನು ಸೂರ್ಯೋದಯಕ್ಕೆ ಯಾವ ಗ್ರಹ ಪ್ರಧಾನವಾಗಿರುತ್ತದೋ ಆ ದಿನವನ್ನು ಆ ಗ್ರಹದ ಹೆಸರಿನಿಂದಲೇ ಗುರುತಿಸಲಾಗುತ್ತದೆ. ಪಂಚಾಂಗದ ಪ್ರಕಾರ 'ವಾರ' ಎಂದರೆ 'ದಿನ' ಎಂದರ್ಥ. 'ಉದಯಾತ್ ಉದಯಂ ವಾರಂ' - ಎಂದರೆ, ಸೂರ್ಯೋದಯದಿಂದ ಸೂರ್ಯೋದಯಕ್ಕೆ ಒಂದು ವಾರ. ಜಾತಕ ಬರೆಸುವಾಗ, ಲಗ್ನ ಇಡಿಸುವಾಗ ಇವು ಚೆನ್ನಾಗಿ ಅನುಭವಕ್ಕೆ ಬರುತ್ತವೆ. ಉದಾಹರಣೆಗೆ, ಇವತ್ತು ಭಾನುವಾರ ನಿಮ್ಮ ಮಗು ರಾತ್ರಿ ಎರಡು ಗಂಟೆಗೆ ಹುಟ್ಟಿತು ಎಂದುಕೊಳ್ಳಿ. ಆಗ, ಇಂಗ್ಲಿಷ್ ಪಂಚಾಂಗದ ಪ್ರಕಾರ ಮಗು ಹುಟ್ಟಿದ ವಾರ 'ಸೋಮವಾರ' ಆಗುತ್ತದೆ. ಏಕೆಂದರೆ, ಅಲ್ಲಿ ಮಧ್ಯರಾತ್ರಿ ಯಿಂದ ಮಧ್ಯ ರಾತ್ರಿಯವರೆಗೆ ಒಂದು ದಿನ. ಆದರೆ, ನಮ್ಮ ಪಂಚಾಂಗದ ಪ್ರಕಾರ ಮಗು ಹುಟ್ಟಿದ ದಿನ 'ಭಾನುವಾರ' ವೇ ಆಗುತ್ತದೆ. ನಮ್ಮಲ್ಲೇನಿದ್ದರೂ ಸೂರ್ಯೋದಯದಿಂದ ಸೂರ್ಯೋದವಯೇ ಒಂದು ದಿನ.

ಇನ್ನು ನಮ್ಮಲ್ಲಿರುವ ನಕ್ಷತ್ರಗಳು ಇಪ್ಪತ್ತೇಳು. ಹಾಗಾದರೆ ಒಂದು ನಕ್ಷತ್ರದ ಅಳತೆಗೋಲೇನು ಅನ್ನುವಿರಾ? ಇದಕ್ಕೂ ಪಂಚಾಂಗದಲ್ಲಿ ಚಾಂದ್ರಮಾನ ಆಧಾರವಿದೆ. ಚಂದ್ರನ ಸುಮಾರು 13.4 ಡಿಗ್ರಿ ಚಲನೆಯ ಅವಧಿಯೇ ಒಂದು ನಕ್ಷತ್ರದ ಅವಧಿ. ಭೂಕೇಂದ್ರದಿಂದ ಚಂದ್ರನು ಯಾವ ರಾಶಿ ಅಕ್ಷರದಲ್ಲಿ ಚಲಿಸುತ್ತಾನೋ ಆಯಾ ನಕ್ಷತ್ರದ ಹೆಸರಿನಿಂದಲೇ ಈ ಅವಧಿಯನ್ನು ಗುರುತಿಸುತ್ತಾರೆ. ಶುಭ - ಅಶುಭಗಳಲ್ಲಿ 'ಕಲಿಯುಗೇ ಜಂಬೂದ್ವೀಪೇ ಭರತವರ್ಷೇ ಭರತಖಂಡೇ ಮೇರೋಃ ದಕ್ಷಿಣೇ ಪಾರ್ಶ್ವೇ ಪ್ರಭವಾದಿ ಸಂವತ್ಸರಣಾಂ ಮಧ್ಯೇ.... ಎಂದು ಸಂಕಲ್ಪ ಹೇಳುವಾಗ ತಪ್ಪದೆ ಅಂದಿನ ತಿಥಿ, ವಾರ, ನಕ್ಷತ್ರಗಳನ್ನು ಹೇಳಿಯೇ ಹೇಳುತ್ತಾರೆ. ಅಂದಹಾಗೆ, ಈ ನಕ್ಷತ್ರಗಳನ್ನು ಪುನಃ ಜನ್ಮ, ಸಂಪತ್ ಇತ್ಯಾದಿಯಾಗಿ ಒಂಬತ್ತು ರೀತಿ ವಿಂಗಡಿಸಲಾಗಿದೆ. ಮಹಾನಕ್ಷತ್ರವನ್ನು ಸೂರ್ಯನ ಚಲನೆಯಿಂದ ಗುರುತಿಸಲಾಗುತ್ತದೆ. ಪಂಚಾಂಗದ ಪ್ರಕಾರ, ಯೋಗಗಳು ಕೂಡ ಇಪ್ಪತ್ತೇಳು; ಕರಣಗಳು ಹನ್ನೊಂದು . ಚಂದ್ರನ ಆರು ಡಿಗ್ರಿಯಷ್ಟು ಚಲನೆಯೇ ಒಂದು ಕರಣ.

## ಶತಮಾನದ ಆಚೀಚೆ

ಮೈಸೂರಿನಿಂದ ಬರುವ ಒಂಟಿಕೊಪ್ಪಲ್ ಪಂಚಾಂಗಕ್ಕೆ130 ವರ್ಷಗಳ ಇತಿಹಾಸವಿದೆ. ಇತ್ತೀಚಿನ

ವರೆಗೂ ಅಲ್ಲಿನ ಸುತ್ತೂರು ಮಠದವರು ಕೂಡ ಇದರ ಮಾಹಿತಿಯನ್ನೇ ತೆಗೆದುಕೊಂಡು, ತಮ್ಮ ಪಂಚಾಂಗ ರೂಪಿಸುತ್ತಿದ್ದರು. ಇತ್ತೀಚೆಗೆ ಅವರೇ ಸ್ವತಂತ್ರವಾಗಿ ಪಂಚಾಂಗ ರೂಪಿಸುತ್ತಿದ್ದಾರೆ. ಹಾಗೆಯೇ ಮೈಸೂರಿನಿಂದಲೇ ಬರುವ ಸಂಪತ್ ಕೃಷ್ಣ ಜೋಯಿಸರ ಪಂಚಾಂಗವು ಅಯ್ಯಂಗಾರ್ ಸಮುದಾಯಕ್ಕೆ ಅಚ್ಚುಮೆಚ್ಚು. ಇದಕ್ಕೆ 100 ವರ್ಷಗಳ ಇತಿಹಾಸವಿದೆ. ಸಂಪತ್ ಕೃಷ್ಣ ಜೋಯಿಸರು, ಆನಂತರ ನ. ಕೃಷ್ಣ ಜೋಯಿಸರು ಇದಕ್ಕೆ ಭದ್ರ ಬುನಾದಿ ಹಾಕಿದರು. ಮೈಸೂರು ಮಹಾರಾಜರ ಆಸ್ಥಾನದಲ್ಲಿ ಇವರು ಧರ್ಮಾಧಿಕಾರಿಗಳಾಗಿದ್ದರು. ಅವರಿಗೆ ಜ್ಯೋತಿಷ್ಯ ಶಾಸ್ತ್ರ, ವಾಚಸ್ಪತಿ, ಧರ್ಮಶಾಸ್ತ್ರ ವಿದ್ವಾನ್, ರಾಜ ಕಾರ್ಯಾಸಕ್ತ, ದೈವಜ್ಞ ಶಿಖಾಮಣಿ, ಜ್ಯೋತಿಷ್ಯ ವಿದ್ವನ್ಮಣಿ ಮುಂತಾದ ಬಿರುದುಗಳಿದ್ದವು. ಈಗ ಅವರ ಮನೆತನದ ಐದಾರು ಮಂದಿಯೇ ಈ ಪಂಚಾಂಗವನ್ನು ಈಗಲು ರೂಪಿಸು ತ್ತಿದ್ದಾರೆ. ಈ ಪಂಚಾಂಗಗಳಿಗೆಲ್ಲ ಬರೀ ಕರ್ನಾಟಕವಷ್ಟೇ ಅಲ್ಲ, ಚೆನ್ನೈ, ಬೊಂಬಾಯಿ, ದೆಹಲಿ, ಕೊಲ್ಕತ್ತಾ, ಪುಣೆ, ದೂರದ ಅಮೇರಿಕ, ಇಂಗ್ಲೆಂಡ್, ಸಿಂಗಪುರ್, ಆಸ್ಟ್ರೇಲಿಯಾಗಳಿಂದಲೂ ಭಾರೀ ಬೇಡಿಕೆ ಇದೆ. ಯಾವ ಪಂಚಾಂಗವನ್ನೇ ತೆಗೆದುಕೊಂಡರೂ, ಏನಿಲ್ಲವೆಂದರೂ 20-25 ಸಾವಿರ ಪ್ರತಿಗಳು ಪ್ರತಿವರ್ಷ ಖರ್ಚಾಗುತ್ತವೆ. ದಕ್ಷಿಣ ಕನ್ನಡದಲ್ಲಿ ಜನಪ್ರಿಯವಾಗಿರುವ ವೈಜಯಂತಿ ಪಂಚಾಂಗಕ್ಕೆ ಇನ್ನೇನು ನೂರು ವರ್ಷವಾಗುತ್ತಿದೆ. ಅಂದ ಹಾಗೆ, ಒಂಟಿಕೊಪ್ಪಲ್ ಪಂಚಾಂಗದವರು ಅಮೇರಿಕದಲ್ಲಿರುವ ಕನ್ನಡಿಗರನ್ನು ಗಮನದಲ್ಲಿ ಇಟ್ಟುಕೊಂಡು, ಅಲ್ಲಿಯ ಕಾಲಮಾನಕ್ಕೆ ತಕ್ಕ ಹಾಗೆ ಅಮೇರಿಕನ್ ಆವೃತ್ತಿಯನ್ನೂ ಬಿಡುಗಡೆ ಮಾಡಿದ್ದಾರೆ.

### ಪಂಚಾಂಗದಲ್ಲಿ ಏನೆಲ್ಲಾ ಉಂಟು!

ಪಂಚಾಂಗದಲ್ಲಿ ಏನೇನೆಲ್ಲಾ ಇದೆ ಎಂದು ಒಮ್ಮೆ ತಿಳಿದುಕೊಂಡರೆ ಅದರ ಬಗ್ಗೆ ಕುತೂಹಲ ಹುಟ್ಟದೆ ಇರಲಾರದು. ಏಕೆಂದರೆ, ಪುಟಾಣಿ ಅಕ್ಷರಗಳಲ್ಲಿ ಮೈದಾಳುವ ಪಂಚಾಂಗಗಳಲ್ಲಿ ಬದುಕಿನಲ್ಲಿರುವ, ಸಂಭವಿಸುವ ಪ್ರತಿಯೊಂದಕ್ಕೂ ಒಂದು ವಿಧಿ, ಒಂದು ಹೋಮ, ಒಂದು ಸೂತ್ರ, ಒಂದು ಆಧಾರ ಒದಗಿಸಲಾಗಿರುತ್ತದೆ. ಸ್ಥೂಲವಾಗಿ ಪಂಚಾಂಗದಲ್ಲಿ ಏನೇನಿರುತ್ತದೆ ನೋಡಿ...

ಘಳಿಗೆ - ವಿಘಳಿಗೆ, ಲಗ್ನತ್ಯಾಜ್ಯ, ತಿಥಿಗಳು, ಪಂಚಕ ನೋಡುವ ಕ್ರಮ, ತಾರಾಬಲ ನೋಡುವ ಕ್ರಮ, ತಾರಾ ಶಾಂತಿ, ಪ್ರಥಮ ರಜೋದರ್ಶನದ ಶುಭಾಶುಭ ಕಾಲ ವಿಚಾರ, ಹುಟ್ಟಿನಿಂದ ಸಾವಿನವರೆಗೆ ಷೋಡಶ ಸಂಸ್ಕಾರಗಳಿಗೆ ತಕ್ಕ ಕಾಲ, ಏಕನಕ್ಷತ್ರ - ಏಕರಾಶಿ ವಿಚಾರ, ದುಷ್ಟ ನಕ್ಷತ್ರ - ಮಹಾನಕ್ಷತ್ರ ವಿಚಾರ, ಎಣ್ಣೆ ನೀರಿಗೆ ತಕ್ಕ ದಿನ, ನೂತನ ವಸ್ತ್ರಾಧಾರಣಕ್ಕೆ ತಕ್ಕ ಕಾಲ, ಗೃಹಪ್ರವೇಶ ಮೂಹೂರ್ತ, ಉಪನಯನಕ್ಕೆ ಪ್ರಶಸ್ತ ಕಾಲ, ವಿದ್ಯಾರಂಭಕ್ಕೆ ಸೂಕ್ತ ತಿಥಿ, ಆಯುಷ್ಯರ್ಮಕ್ಕೆ ಸುಮುಹೂರ್ತ, ನಾಮ ನಕ್ಷತ್ರ - ಜನ್ಮ ನಕ್ಷತ್ರ ತಿಳಿಯುವ ಕ್ರಮ, ಯಾವ ನಕ್ಷತ್ರಕ್ಕೆ ಯಾವ ರಾಶಿ, ಯಾವ ರಾಶಿಗೆ ಯಾರು ಅಧಿಪತಿ, ದ್ವಾದಶ ಕೂಟಗಳ ವಿಚಾರ, ಜಮೀನುಕ್ರಯಕ್ಕೆ ಸೂಕ್ತ ಕಾಲ, ಉಳುಮೆ ಆರಂಭಕ್ಕೆ ಬೀಜ ಬಿತ್ತನೆಗೆ, ಬೆಳೆ ಕುಯ್ಲಿಗೆ, ಧಾನ್ಯ ಸಂಗ್ರಹಕ್ಕೆ ತಕ್ಕ ದಿನಗಳು, ಲೇವಾದೇವಿ ಔಷಧ ಸೇವನೆ / ಆಪರೇಷನ್‌ಗೆ / ಅಧಿಕಾರಿಗಳ ಸಂದರ್ಶನಕ್ಕೆ ಸರಿಯಾದ ವೇಳೆ, ಉಡುದಶಾ ಕ್ರಮ, ದಶಾ ಪ್ರಮಾಣ, ಉಡುದಶಾ ಭುಕ್ತಿ ಕೋಷ್ಟಕ, ಗೌರಿ ಪಂಚಾಂಗ, ಅಮೃತಾದಿ ಯೋಗಗಳು, ತಿರುಪತಿ/ ಮೇಲುಕೋಟೆ/ ಶ್ರೀರಂಗಂ/ ಶೃಂಗೇರಿ /ಕಂಚಿ/ಮುಂತಾದ ಪುಣ್ಯ ಕ್ಷೇತ್ರಗಳಲ್ಲಿ ಇಡೀ ವರ್ಷದಲ್ಲಿ ನಡೆಯುವ ಉತ್ಸವಗಳು, ಪುಣ್ಯಪುರುಷರ ಜಯಂತಿಗಳು -ತಿರುನಕ್ಷತ್ರಗಳು, ಸಂವತ್ಸರ ಪುರುಷನ ಲಕ್ಷಣಗಳು, ಕುಜದೋಷ ವಿಚಾರ ಲುಪ್ತ ತಿಥಿಗಳ ವಿಚಾರ, ಘಟಶ್ರಾದ್ಧ ಮಾಡಲು ಗಯಾಕ್ಕೆ ಹೋಗುವವರು ಯಾರನ್ನು ಸಂಪರ್ಕಿಸಬೇಕು, ಸೌರಮಾನ / ಚಾಂದ್ರಮಾನ ಶ್ರಾದ್ಧ ತಿಥಿಗಳ ಸೂಚಿ, ಮಕರ ಸಂಕ್ರಾಂತಿ ಫಲ, ದ್ವಾದಶ ರಾಶಿಗಳ ಗೋಚಾರ ಫಲ.... ಅಬ್ಬಬ್ಬಾ ಎನ್ನದೇ ವಿಧಿಯಿಲ್ಲ! ಒಟ್ಟಿನಲ್ಲಿ ಪಂಚಾಂಗ ನೋಡಿದರೆ ಮೂಕವಿಸ್ಮಯದ ಭಾವನೆ ಗ್ಯಾರಂಟಿ!!

### ಒಂಟಿಕೊಪ್ಪಲ್

ಹಳೆ ಮೈಸೂರಿನ ಜನಪ್ರಿಯ ಪಂಚಾಂಗ. ಈ ಪಂಚಾಂಗದ ಮೊದಲ ಪ್ರಕಟಣೆ 1887 - 1888. ವಿ. ರಾಮಕೃಷ್ಣ ಶಾಸ್ತ್ರಿ, ಆರ್.ಕುಮಾರ್ ಮತ್ತು ಕೆ. ಮನೋಹರ್ ಈಗ ಇದನ್ನು ರೂಪಿಸುತ್ತಿದ್ದಾರೆ. ಅಮೆರಿಕದಲ್ಲಿ ನೆಲೆಸಿರುವ ಕನ್ನಡಿಗರಿಗೂ ವಿಶೇಷ ಪಂಚಾಂಗ ಸಿದ್ಧಮಾಡುತ್ತಾರೆ.

### ಬಗ್ಗೋಣ ಪಂಚಾಂಗ

ಉತ್ತರ ಕನ್ನಡ ಮುಂತಾದ ಕಡೆ ಜನಪ್ರಿಯ. ಸುಮಾರು 130 ವರ್ಷಗಳಿಂದ ಪ್ರಕಟವಾಗುತ್ತಿದ್ದು, ಕುಮಟಾ ಬಗ್ಗೋಣದ ಪಂಡಿತ ಕುಟುಂಬ ರೂಪಿಸುತ್ತಿದೆ.

ಇದು ಲೆಕ್ಕಾಚಾರ. ಶುದ್ಧ ಗಣಿತ. 4+4 = 8 ವಿನಾ 9 ಅಗಲ್ಲ. ಹಾಗೇ ಭೂಮಿ ಸೂರ್ಯನ ಸುತ್ತ ಒಂದು ಪ್ರದಕ್ಷಿಣೆ ಹಾಕಿದರೆ ಒಂದು ದಿನ. 365 ಸುತ್ತು ಸುತ್ತಿದರೆ ವರ್ಷ. ಈ ಲೆಕ್ಕಾಚಾರವೇ ಪಂಚಾಂಗ. ಪಾಶ್ಚಿಮಾತ್ಯರು ಇದನ್ನು ಕ್ಯಾಲೆಂಡರ್ ಎಂದರು. ಮೂರು ಅಂಶ ಮಾತ್ರ ಕೊಟ್ಟರು. ವಾರ, ತಿಂಗಳು ಮತ್ತು ವರ್ಷ. ಹಿಂದೂಗಳು ಮತ್ತೆರಡು ಸೇರಿಸಿದರು; ವಾರ , ತಿಥಿ, ನಕ್ಷತ್ರ, ಯೋಗ ಮತ್ತು ಕರಣ. ಈ ಐದು ಅಂಗಗಳು ಸೇರಿ ಪಂಚಾಂಗವಾಯಿತು. ಹೀಗಾಗಿ ಪಂಚಾಂಗದ ಕಾಪಿ ರೈಟ್ ಹಿಂದೂಗಳಿಗೆ ಸೇರಬೇಕು.

ಯುಗಾದಿ ಆರಂಭಕ್ಕೆ ಮುನ್ನ ಎಲ್ಲೆಲ್ಲೂ ಪಂಚಾಂಗಗಳ ಮಿಂಚು. ಅಷ್ಟೇ ವೈವಿಧ್ಯ. ಅವರವರ ಭಕ್ತಿ, ಆಚರಣೆಗೆ ತಕ್ಕಂತೆ ಪಂಚಾಂಗಗಳು. ಇಂದಿನ ಮೊಬೈಲ್, ಆನ್‌ಲೈನ್

ಯುಗದಲ್ಲಿ ಪಂಚಾಂಗಗಳು ಜನಪ್ರಿಯತೆ ಉಳಿಸಿ ಕೊಂಡಿವೆ. ಎಷ್ಟೇ ಆಧುನಿಕರಾಗಿದ್ದರೂ ಪಂಚಾಂಗದ ಸಂಗಬೇಕು. ಕಾಲಕ್ಕೆ ತಕ್ಕಂತೆ ನಡೆಯಬೇಕು ಎಂಬ ಹಾಗೆ, ಕೆಲವು ಪಂಚಾಂಗಗಳು ಆನ್‌ಲೈನ್ ಆವೃತ್ತಿಯನ್ನು ಕೂಡ ಹೊಂದಿವೆ.

ಮೊದಲೇ ಹೇಳಿದಂತೆ ಇದೊಂದು ಕಾಲಗಣನೆ ಪದ್ಧತಿ. ಸೂರ್ಯ ಮತ್ತು ಚಂದ್ರನ ಚಲನೆ ಆಧಾರದ ಮೇಲೆ ತಿಥಿಯನ್ನು ಲೆಕ್ಕಾಹಾಕಲಾಗುತ್ತದೆ. ಸಾಮಾನ್ಯವಾಗಿ ಪಂಚಾಂಗ ಮೂರು ವಿಷಯಗಳನ್ನು ಹೇಳುತ್ತದೆ; ಗಣಿತ, ಮೂಹೂರ್ತ ಮತ್ತು ಫಲ. ಇದರಲ್ಲಿ ಗಣಿತ ಭಾಗ ಶೇಕಡಾ 100 ರಷ್ಟು ಖಚಿತತೆಯನ್ನು ಬಯಸುತ್ತದೆ. ಇಲ್ಲಿ ಸ್ವಲ್ಪ ಏಮಾರಿದರೂ ಇಡೀ ಪಂಚಾಂಗವೇ ತಲೆಕೆಳಗಾಗುತ್ತದೆ. ಹೀಗಾಗಿ ಈ ಭಾಗ ಹಂಡ್ರೆಡ್ ಪರ್ಸೆಂಟ್ ಸೈನ್ಸ್. ಇನ್ನುಳಿದದ್ದು ಮೂಹೂರ್ತ ಮತ್ತು ಫಲ ಭಾಗ. ಇದಕ್ಕೆ ವೈಜ್ಞಾನಿಕ ಸಮರ್ಥನೆ ಇಲ್ಲ. ಇವು ಸ್ಥಳೀಯ ನಂಬಿಕೆಗಳನ್ನು ಆಧರಿಸಿರುತ್ತವೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ ಅಮಾವಾಸ್ಯೆ ಅಂಥ ಒಳ್ಳೆದಿನ ಅಲ್ಲ. ಎಷ್ಟೆಂದರೆ, ಈ ದಿನದಂದು ವಿಮಾನ ಟಿಕೆಟ್‌ಗಳು ಕೂಡ ಅಗ್ಗವಾಗಿರುತ್ತವೆ.ಆದರೆ ತಮಿಳುನಾಡಿನಲ್ಲಿ ಅಮಾವಾಸ್ಯೆ ಶುಭದಿನ.ಅಂದು ಮದುವೆಗಳಾಗುತ್ತವೆ. ಗೃಹ ಪ್ರವೇಶವೂ ನಡೆಯುತ್ತದೆ.

ಕಾಲ,ದೇಶಕ್ಕೆ ಅನುಗುಣವಾಗಿ ಪಂಚಾಂಗಗಳಿವೆ. ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಶಾಲಿವಾಹನ ಶಕೆಯ ಅನುಸಾರ ಲೆಕ್ಕಹಾಕಲಾಗುತ್ತದೆ. ಉತ್ತರ ಭಾರತದಲ್ಲಿ ವಿಕ್ರಮ ಶಕೆಯ ರೀತಿಯ ಲೆಕ್ಕಾಚಾರ. ಕೆಲವು ಕಡೆ ಅಮಾವಾಸ್ಯೆಯಿಂದ ಅಮಾವಾಸ್ಯೆಗೆ ತಿಂಗಳಾದರೆ, ಕೆಲವಡೆ ಹುಣ್ಣಿಮೆಯಿಂದ ಹುಣ್ಣಿಮೆ ಲೆಕ್ಕಚಾರ.

ಸಾಮಾನ್ಯವಾಗಿ ಎರಡು ರೀತಿಯ ಪಂಚಾಂಗ ಪದ್ಧತಿಗಳಿವೆ. ಒಂದು ಸೌರಮಾನ ಮತ್ತೊಂದು ಚಂದ್ರಮಾನ.ಸೌರ ವ್ಯವಸ್ಥೆಯನ್ನು ಲೆಕ್ಕಹಾಕಿ ರಚಿಸಿರುವ ಪಂಚಾಂಗ ಸೌರಮಾನ ಪಂಚಾಂಗ. ಈ ಪದ್ಧತಿಯನ್ನು ಸಾಮಾನ್ಯವಾಗಿ ಕೇರಳ ತಮಿಳುನಾಡು ಮತ್ತು ಕರ್ನಾಟಕದ ಕರಾವಳಿ ಪ್ರದೇಶಗಳಲ್ಲಿ ಕಾಣಬಹುದು. ಆಂಧ್ರ, ಕರ್ನಾಟಕ, ಮಹಾ ರಾಷ್ಟ್ರಗಳಲ್ಲಿ ಚಾಂದ್ರಮಾನ ಪದ್ಧತಿ ಜಾರಿಯಲ್ಲಿದೆ.ವಾಸ್ತವವಾಗಿ ಇದು ಕೂಡ ಸಂಪೂರ್ಣ ಚಂದ್ರ ಪಂಚಾಂಗವಲ್ಲ. ಇಲ್ಲೂ ಸೂರ್ಯನ ಪ್ರಭಾವ ಸಾಕಷ್ಟು ಇರುತ್ತದೆ. ಸಂಪೂರ್ಣ ಚಾಂದ್ರಮಾನ ಕ್ಯಾಲೆಂಡರ್ ಎಂದರೆ ಇಸ್ಲಾಮಿಕ್ ಕ್ಯಾಲೆಂಡರ್ ಅಥವಾ ಹಿಜರಿ ಕ್ಯಾಲೆಂಡರ್ .ಇದು 12 ಮೇಷ, ವೃಷಭ ಎಂಬಿತ್ಯಾದಿ 12 ತಿಂಗುಗಳಿದ್ದರೆ ಚಾಂದ್ರಮಾನದಲ್ಲಿ ಅವನ್ನು ಚೈತ್ರ, ವೈಶಾಖ... ಎನ್ನಲಾಗುತ್ತದೆ.

ಗ್ರೆಗರಿಯನ್ ಗಣನೆಯಲ್ಲಿ ಜನವರಿ, ಫೆಬ್ರುವರಿ ಎಂದಾಗುತ್ತದೆ.ಸೌರಮಾನ ಮತ್ತು ಗ್ರೆಗರಿಯಾನ್ ಪದ್ಧತಿಯ ಪಂಚಾಂಗದಲ್ಲಿ ತಿಂಗಳ ದಿನಗಳು ವ್ಯತ್ಯಾಸವಾಗಿ ನಾಲ್ಕು ವರ್ಷಗಳಿಗೊಮ್ಮೆ ಫೆಬ್ರುವರಿಯಲ್ಲಿ 29 ದಿನವಾಗಿ ಲೀಪ್‌ಯಿಯರ್ ಆಗುತ್ತದೆ. ಚಾಂದ್ರಮಾನದಲ್ಲಿ ತಿಂಗಳ ದಿನಗಳು ವ್ಯತ್ಯಾಸವಾಗುವುದಿಲ್ಲ. ಆದರೆ ಇದರಲ್ಲಿ ಒಂದು ತಿಂಗಳು ಅಧಿಕವಾಗುತ್ತದೆ.

ವಿಶ್ವಾದ್ಯಂತ ಬಳಕೆಯಲ್ಲಿರುವ ಜನಪ್ರಿಯ ಕ್ಯಾಲೆಂಡರ್ ಗ್ರೆಗರಿಯಾನ್ ಮಾದರಿಯದ್ದು.ಇದನ್ನು ರೂಪಿಸಿದವನು ಪೋಪ್ ಗ್ರೆಗರಿ. 1582 ರ ಫೆಬ್ರುವರಿ 24 ರಿಂದ ಈ ಕ್ಯಾಲೆಂಡರ್ ಬಳಕೆ ಜಾರಿಗೆ ಬಂದಿದೆ. ತನ್ನ ಕಾಲದಲ್ಲಿ ಜಾರಿಯಲ್ಲಿದ್ದ ಜೂಲಿಯನ ಕ್ಯಾಲೆಂಡರನ್ನು ಸುಧಾರಿಸಿ ಗ್ರೆಗರಿ ಈ ಕ್ಯಾಲೆಂಡರ್ ಅನ್ನು ಸಿದ್ಧ ಮಾಡಿದ. ಬಹಳಷ್ಟು ದೇಶಗಳು ಈ ಪದ್ಧತಿ ಅನುಸರಿಸತೊಡಗಿದವು.

ಪಂಚಾಂಗದ ಒಂದು ಭಾಗ ಶುದ್ಧ ಗಣಿತ, ಸೂರ್ಯ, ದೃಕ್, ವಾಕ್ ಮತ್ತು ಆರ್ಯಭಟ ಎಂಬ ನಾಲ್ಕು ರೀತಿಯ ಪದ್ಧತಿಗಳಿವೆ. ಹೆಚ್ಚಿನವು ಸೂರ್ಯ ಸಿದ್ಧಾಂತವನ್ನು ಅನುಸರಿಸುತ್ತವೆ.

ಕರ್ನಾಟಕದಲ್ಲಿ ನೂರಕ್ಕೂ ಹೆಚ್ಚು ಪಂಚಾಂಗಗಳಿವೆ. ಹಳೇ ಮೈಸೂರು ಪ್ರಾಂತ್ಯದಲ್ಲಿ ಒಂಟಿಕೊಪ್ಪಲ್ ಪಂಚಾಂಗ ಜನಪ್ರಿಯ. ಉತ್ತರ ಕನ್ನಡ ಜಿಲ್ಲೆಯಲ್ಲಿ ಬಗ್ಗೋಣ ಪಂಚಾಂಗ ಜನಪ್ರಿಯ. ಉತ್ತರ ಕರ್ನಾಟಕದಲ್ಲಿ ಬಸವೇಶ್ವರ ಪಂಚಾಂಗಕ್ಕೆ ಬೆಲೆ.ಸುರಪುರ ಪಂಚಾಂಗ ಕೆಲ ಭಾಗದಲ್ಲಿ ಜನಪ್ರಿಯ.ಕೊಲ್ಹಾಪುರ ಸೀಮೆಯಲ್ಲಿ ಧಾತೆ ಪಂಚಾಂಗಕ್ಕೆ ಬೆಲೆ.ಭಾರತದಲ್ಲಿ ತಯಾರಾಗುವ ಪಂಚಾಂಗಗಳಲ್ಲಿ ಅನೇಕ ರೀತಿಯ ಗೊಂದಲಗಳಾಗುತ್ತಿದ್ದವು. ಇದನ್ನು ತಪ್ಪಿಸುವ ಸಲುವಾಗಿ ಕೇಂದ್ರ ಸರ್ಕಾರ 1957 ಮಾರ್ಚ್ 22 ರಿಂದ ರಾಷ್ಟ್ರೀಯ ಪಂಚಾಂಗದ ಬಳಕೆಯನ್ನು ಜಾರಿಗೆ ತಂದಿತು.

### ಪಂಚಾಂಗದ ಒಳಗಿನ ಹೂರಣ

ಬದುಕಿನ ಕಹಿ ನುಂಗಿ ಸುಖಶಾಂತಿ ತರುವ ಸಮೃದ್ಧಿ ಹಬ್ಬವೇ ಯುಗಾದಿ. ಯುಗಾದಿ ಹಬ್ಬದ ಪ್ರಮುಖ ಅಂಗವೇ ಪಂಚಾಂಗ ಶ್ರವಣ. ಪಂಚಾಂಗದ ಪ್ರಮುಖ ಭಾಗವೇ ಕಾಲಗಣನೆ. ಅಗಸದಲ್ಲಿ ಸೂರ್ಯ ಮತ್ತು ಗ್ರಹಗಳ ಚಲನೆಯ ಫಲಶ್ರುತಿಯೇ ಪಂಚಾಂಗ ಉದಯಕ್ಕೆ ಕಾರಣ.

ಯುಗಾದಿ ಹತ್ತು ಹಲವು ಪರಂಪರೆಯ ಆರಂಭದ ದಿನ. ವರ್ಷದ ಮೂರೂವರೆ ಶುಭದಿನಗಳಲ್ಲಿ ಮೊದಲ ಮೂಹೂರ್ತ ದಿನ. ಋತೂನಾಂ ಕುಸುಮಾಕರಃ ಎಂಬ ಗೀತಾಚಾರ್ಯನ ವಾಣಿಯಂತೆ ಋತುರಾಜ ವಸಂತನ ಶುಭಾಗಮನ ದಿನ. ಯುಗ ಎಂದರೆ ಕಾಲಗಣನೆ ಎಂಬ ಅರ್ಥವಿದೆ. ಯುಗಾದಿ ಸೇರಿದಂತೆ ಯಾವುದೇ ಹಬ್ಬ, ಹರಿದಿನಗಳನ್ನು ಕ್ಯಾಲೆಂಡರ್ ಪಂಚಾಂಗ ನೋಡಿ ತಿಳಿದುಕೊಳ್ಳಬಹುದು. ಆದರೆ ಇವುಗಳಲ್ಲಿ ನಮೂದಿಸಿದ ಎಣಿಕೆಗಳ ಹಿಂದೆ ಶತಶತಮಾನಗಳ ಶ್ರಮ ಲೆಕ್ಕಚಾರಗಳ ತಿದ್ದುಪಡಿ ಅಡಗಿದೆ. ಅರ್ಥೈಸಿಕೊಳ್ಳಲು ಸ್ವಾರಸ್ಯಕರವಾಗಿದೆ.



## ಪ್ರಪ್ರಥಮ ಪಂಚಾಂಗ

ಮಾನವನ ಪ್ರಪ್ರಥಮ ಪಂಚಾಂಗವೇ ಆಕಾಶ. ಆಗಸದಲ್ಲಿಯ ಸೂರ್ಯ ಮತ್ತು ಚಲಿಸುವ ಗ್ರಹಗಳ ಗತಿಯನ್ನು ಅಭ್ಯಸಿಸಿದಾಗ ಜನ್ಮತಾಳಿದ್ದೇ ಮೊದಲ ಪಂಚಾಂಗ. ಈಜಿಪ್ಟಿಯನ್ನರು ಪ್ರಥಮತಃ ದಿನದ ಲೆಕ್ಕಾಚಾರಕ್ಕೆ ಇಪ್ಪತ್ನಾಲ್ಕು ತಾಸುಗಳನ್ನು ನಿಗದಿಪಡಿಸಿದರು. ಆ ದಿನಗಳಲ್ಲಿ ಸೂರ್ಯಾಸ್ತದ ನಂತರ ಕತ್ತಲಲ್ಲಿ ಏನೂ ಮಾಡಲಾಗದಿದ್ದಾಗ ನಭೋ ಮಂಡಲದ ವೀಕ್ಷಣೆಯೇ ಹೊತ್ತು ಕಳೆಯುವ ಮಾರ್ಗವಾಗಿತ್ತು. ಆ ಅಂಧಕಾರದಲ್ಲಿ ಒಮ್ಮೆ ಪೂರ್ಣ. ಮತ್ತೊಮ್ಮೆ ಅಪೂರ್ಣ, ಮಗದೊಮ್ಮೆ ಅದೃಶ್ಯವಾಗುತ್ತಿದ್ದ ಸುಂದರ ಚಂದ್ರ ಆಕರ್ಷಿಸಿದ್ದು ಸಹಜ. ಹೀಗೆ ಆಕರ್ಷಿತರಾದವರಲ್ಲಿ ಕೆಲವು ಅನುಕೂಲತೆಗಳ ಮಧ್ಯೆ ಸಪ್ತಾಂಶದ ಉದಯವಾಯಿತು. ಹೀಗಾಗಿ ದಿನ, ಮಾಸ ಮತ್ತು ಕ್ಯಾಲೆಂಡರ್ ಪಂಚಾಂಗದ ಮೂಲ ಅಳೆಯಗೋಲಾಯಿತು. ಜೂಲಿಯಸ ಸೀಝುರ್‌ನಿಂದಾಗಿ ಕ್ಯಾಲೆಂಡರ್ ಒಂದು ರೂಪ ಬಂದಿತು. ಅವನು 365 ದಿನ 1/4 ದಿನಗಳ ಕಾಲವನ್ನು ಒಂದು ವರ್ಷ ಎಂದು ಕರೆದನು. ಹೀಗೆ ಒಂದು ವರ್ಷದಲ್ಲಿ ಉಳಿದ 4 ದಿನಗಳನ್ನು ನಾಲ್ಕು ವರ್ಷಗಳಲ್ಲಿ ಕೂಡಿದಾಗ ಬಂದದ್ದೇ ಲೀಪ್‌ಯಿಯರ್. ಮುಂದೆ ಗ್ರೆಗೋರಿಯವರು ಅದನ್ನು ಸರಿಪಡಿಸಿದರು. ಗ್ರೆಗೋರಿಯನ್ ಕ್ಯಾಲೆಂಡರ್ ಪದ್ಧತಿ ಪ್ರಕಾರ ಜನವರಿ 1 ಹೊಸ ವರ್ಷವಾಗಿತ್ತು.

## ನಾಲ್ಕು ಬಗೆಯ ಯುಗಾದಿ

ನಮ್ಮಲ್ಲಿ ಐದು ಬಗೆಯ ಯುಗಾದಿಗಳಿವೆ. ಅವೆಂದರೆ ಚಾಂದ್ರಮಾನ, ಸೌರಮಾನ, ಸಾವನಮಾನ,ನಕ್ಷತ್ರಮಾನ ಮತ್ತು ಬೃಹಸ್ಪತ್ಯಮಾನ ಎಂದಾಗಿವೆ. ಚಾಂದ್ರಮಾನ ಸಂವತ್ಸರವೇ ಯೋಗ್ಯವಾಗಿದೆ. ಯುಗಾದಿಯ ಆರಂಭದ ದಿನ ಯಾವ ವಾರವಾಗಿರುತ್ತದೆಯೋ ಆ ವಾರಾಧಿಪತಿಯೇ ವರ್ಷದ ರಾಜ. ವರ್ಷಾರಂಭದ ಈ ತಿಥಿಯನ್ನು ಆಧರಿಸಿ ವರ್ಷ ಫಲವನ್ನು ತೀರ್ಮಾನಿಸಲಾಗುತ್ತದೆ. ಈ ಬಾರಿ ವಿಳಂಬಿ ಸಂವತ್ಸರವು ಭಾನುವಾರ ಆರಂಭವಾಗಿರುವುದರಿಂದ ಭಾನುನೇ ಈ ಬಾರಿಯ ವರ್ಷಾಧಿಪತಿ ಚೈತ್ರ ಮಾಸದ ಶುಕ್ಲಪಕ್ಷದ ಪ್ರತಿಪದ ತಿಥಿ ಸೂರ್ಯೋದಯಕ್ಕೆ ಎಂದು ಇರುವುದೋ ಅಂದೇ ಯುಗಾದಿ ಪ್ರತಿಪದೆ ಬರುತ್ತದೆ. ಈ ಹಬ್ಬದಂದು ಬೇವು ಬೆಲ್ಲ ಸೇವಿಸಿ ಪಂಚಾಂಗ ಶ್ರವಣ ಮಾಡುವ ಪದ್ಧತಿ ರೂಢಿಯಲ್ಲಿದೆ. ಹುಣ್ಣಿಮೆಯ ದಿನ ಚಂದ್ರ ಯಾವ ನಕ್ಷತ್ರಯುಕ್ತನಾಗಿರುವನೋ ಆ ಹೆಸರಿನಿಂದಲೇ ಆಯಾ ತಿಂಗಳನ್ನು ಗುರುತಿಸಲಾಗುತ್ತದೆ.

## ಸಂವತ್ಸರದ ಹುಟ್ಟು ಗುಟ್ಟು

ಕಾಲಗಣನೆಯಂತೆ ಕಲಿಯುಗದ ಆರಂಭ ದಿನವೇ ಯುಗಾದಿ. ನಾಡರಕ್ಷಣೆಗಾಗಿ ನಡೆಸಿದ ವಿಜಯದ ಹೋರಾಟ ನೆನಪಿನಲ್ಲಿ ಶಾಲಿವಾಹನ ಶಕೆ ಮತ್ತು ವಿಕ್ರಮ ಶಕೆಗಳ ಆರಂಭಿಸಿದ ಐತಿಹಾಸಿಕ ದಿನವೇ ಯುಗಾದಿ. ಲಂಕಾ ವಿಜಯಿ ಶ್ರೀ ರಾಮನ ಪಟ್ಟಾಭಿಷೇಕದ ದಿನ, ಮಹರ್ಷಿ ದಯಾನಂದ ಸರಸ್ವತಿಯವರ ಜನ್ಮ ದಿನವೆಂದೂ ಹೇಳಲಾಗುತ್ತದೆ. ದೇವತಾರ್ಚನೆ ಹಾಗೂ ನಿತ್ಯ ಕರ್ಮಾನುಷ್ಠಾನ ಮಾಡುವಾಗ ಸಂಕಲ್ಪವನ್ನು ಹೇಳಿಕೊಳ್ಳುತ್ತೇವೆ. ಸಂಕಲ್ಪದ ಸಮಯದಲ್ಲಿ ಸಂವತ್ಸರದ ಹೆಸರನ್ನು ಹೇಳಿಕೊಳ್ಳುವ ವಾಡಿಕೆಯಿದೆ. ನಮ್ಮಲ್ಲಿ ಒಟ್ಟು 60 ಸಂವತ್ಸರಗಳಿವೆ. ಸಂಸ್ಕೃತದ ಪ್ರಕಾರ ಸಂವತ್ಸರವೆಂದರೆ ವರ್ಷ. ಇದನ್ನು ವರ್ಷ,ಸಂವತ್ ಎಂತಲೂ ಕರೆಯುತ್ತಾರೆ. ಶ್ರೀ ವಿಷ್ಣು ಸಹಸ್ರನಾಮದ 45 ನೇ ಶ್ಲೋಕದಲ್ಲಿ ವಿಷ್ಣುವನ್ನು ಋತು, ಕಾಲ ಮತ್ತು ಸಂವತ್ಸರಕ್ಕೆ ಹೋಲಿಸಲಾಗುತ್ತದೆ. ಸಂವತ್ಸರವು ಕಾಲ ಚಕ್ರದ ಒಂದು ಭಾಗ, ಅದರಲ್ಲಿ ಸಂವತ್ಸರದ ಲೆಕ್ಕಾಚಾರವು ಕಾಲಗಣನೆಯಿಂದ ಆರಂಭವಾಗುತ್ತದೆ. ಸಂವತ್ಸರಕ್ಕೆ ಹೋಲಿಸಲಾಗುತ್ತದೆ. ಸಂವತ್ಸರವು ಕಾಲ ಚಕ್ರದ ಒಂದು ಭಾಗ.ಅದರಲ್ಲಿ ಕಲ್ಪ, ಮನ್ವಂತರ, ಯುಗ ಮತ್ತು ಶಕೆಗಳಿರುತ್ತವೆ. ಕಾಲವನ್ನು ಶ್ರೀ ವಿಷ್ಣುವಿಗೆ ಹೋಲಿಸುತ್ತಾರೆ. ಆ ಕಾರಣದಿಂದಲೇ ಮಹಾವಿಷ್ಣುವಿಗೆ ಕಾಲಾತ್ಮನೆಂಬ ಹೆಸರು ಬಂದಿದೆ. ಕಾಲಾತ್ಮ ಎಂದರೆ ಕಾಲನ ಆತ್ಮ ಎಂತಲೂ ಅರ್ಥೈಸಬಹುದು. ನಾರಾಯಣ ಉಪನಿಷತ್ ಮಹಾವಿಷ್ಣುವನ್ನು ಕಾಲನಿಗೆ ಹೋಲಿಸುತ್ತದೆ. ಅದಕ್ಕೆ ನಿದರ್ಶನವೆನ್ನುವಂತೆ 'ಕಾಲಶ್ಚ ನಾರಾಯಣಃ'ಎನ್ನುವ ವಾಕ್ಯವಿದೆ. ಅಂದ ಹಾಗೆ ಸಂವತ್ಸರವೂ ವಿಷ್ಣುವಿನ ಸಹಸ್ರನಾಮಗಳಲ್ಲಿ ಒಂದು. ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರದ ಪ್ರಕಾರ ಮಹಾವಿಷ್ಣುವಿನಲ್ಲೆ ಎಲ್ಲವೂ ಅಡಗಿದೆ. ಎಲ್ಲವೂ ಅವನಿಂದಲೇ ಉತ್ಪತ್ತಿಯಾಗಿದೆ. ಆ ಕಾರಣ ಮಹಾವಿಷ್ಣುವಿನ ಭಾವ ಪ್ರತಿಯೊಂದು ಸಂವತ್ಸರದಲ್ಲಿದೆ ಎನ್ನಲಾಗಿದೆ. ಕಾಲಾತೀತನಾದ ಮಹಾವಿಷ್ಣುವೇ ಸೃಷ್ಟಿ, ಸ್ಥಿತಿ, ಲಯಕಾರನಾಗಿದ್ದಾನೆ.

## ಚಾಂದ್ರಮಾನ ಸಿದ್ಧಾಂತ

ಜಗತ್ತಿಗೆ ಮೊತ್ತ ಮೊದಲು ಸಪ್ತ ಗ್ರಹಗಳನ್ನು ಒಳಗೊಂಡ ಭೂಮಿಯ ಚಲನೆ,ಪರಿಮಾಣ, ಪ್ರಭಾವಾದಿ ವಿಷಯವೆಂಬ ಮಹೋನ್ನತ ಜ್ಯೋತಿಷ್ಯಶಾಸ್ತ್ರ ಕೊಟ್ಟ ದೇಶವೇ ನಮ್ಮ ಸನಾತನ ಭಾರತ. ಸುಮಾರು ಹತ್ತು ಸಾವಿರ ವರ್ಷಗಳ ಹಿಂದೆಯೇ ಈ ದೇಶಿಗರು ಉತ್ಕೃಷ್ಟ ಭಾಷೆ, ಸಸ್ಯ ವಿಜ್ಞಾನ, ಕೃಷಿ, ಯೋಗ ವಿಜ್ಞಾನ ತಥಾ ಖಗೋಳ ವಿಜ್ಞಾನವನ್ನು ಅರಿತಿದ್ದರು ಎಂದು ಸ್ವದೇಶಿ ಪಂಡಿತರೂ, ಪಾಶ್ಚಾತ್ಯ ವಿದ್ವಾಂಸರೂ ತಮ್ಮ ಸಂಶೋಧನೆಗಳಲ್ಲಿ ಹೇಳಿದ್ದಾರೆ. ನಾರದ, ವಾಸಿಷ್ಠ, ಪರಾಶರ, ವ್ಯಾಸರಿಂದ ಪ್ರಾಚೀನ ಶಾಸ್ತ್ರ ಒಳಗೊಂಡು ವರಾಹ ಮಿಹಿರ, ಮಂತ್ರೇಶ್ವರಾದಿ

ನಮ್ಮ ಯುಗದ ವಿಜ್ಞಾನಿ ಮಹರ್ಷಿಗಳು ಜ್ಯೋತಿಷ್ಯ ಶಾಸ್ತ್ರ ನೀಡಿದ್ದಾರೆ. ಸಿದ್ಧಾಂತ ಶಾಸ್ತ್ರದಲ್ಲಿ ಗ್ರಹ ನಕ್ಷತ್ರ ಗಣನೆ, ಗ್ರಹಣ, ಪರಿಮಾಣ ಮತ್ತು ಪರಿಣಾಮದ ಗಣಿತವನ್ನು ಕೊಡಲಾಗಿದೆ. ಅದರಲ್ಲೇ ಸೂರ್ಯಸಿದ್ಧಾಂತ ಮತ್ತು ಚಾಂದ್ರಮಾನವನ್ನು ಸಂಹಿತ ಮತ್ತು ಹೋರಾ ಶಾಸ್ತ್ರಗಳಲ್ಲಿ ಜೀವ ವೈವಿಧ್ಯ, ಗ್ರಹಕಾರತ್ವ,ಫಲಾಫಲ,ಪ್ರಶ್ನ ಮುಹೂರ್ತಾದಿ ವಿಶೇಷಗಳನ್ನು ಹೇಳಲಾಗಿದೆ. ಮುಖ್ಯವಾಗಿ ಯುಗಾದಿ ಪರ್ವವನ್ನು ಬಹು ಸಂಖ್ಯೆಯಲ್ಲಿ ಉತ್ತರ ಭಾರತದವರು ಸೂರ್ಯ ಸಿದ್ಧಾಂತ ಬಳಸುವರು. ದಕ್ಷಿಣ ಭಾರತದಲ್ಲಿ ಕರ್ನಾಟಕ ಮತ್ತು ಆಂಧ್ರದಲ್ಲಿ ವಿಶೇಷವಾಗಿ ಚಾಂದ್ರಮಾನ ರೀತ್ಯ ದಿನ ಪಂಚಾಂಗ ಬಳಕೆ ಮಾಡುತ್ತಾರೆ.

ಸೌರಮಾನವು ಸೂರ್ಯನ ಒಂದು ರಾಶಿಯಂತೆ ಪೂರ್ಣ ದ್ವಾದಶ ರಾಶಿಯ ಸಂಚಾರವನ್ನು ಅವಲಂಬಿಸಿದೆ. ಸೂರ್ಯನ ರಾಶಿ ಚಲನೆ ಒಂದು ತಿಂಗಳಲ್ಲಿ ಒಂದು ರಾಶಿಯಾಗಿ ಹನ್ನೆರಡು ತಿಂಗಳ ಸಂವತ್ಸರ ಏರ್ಪಾಡಾಗುವುದು. ಅದರಲ್ಲಿ ಚಂದ್ರನು ಒಂದೇ ತಿಂಗಳಲ್ಲಿ ಎಲ್ಲಾ ಹನ್ನೆರಡು ರಾಶಿ ಸಂಚರಿಸಿ ಪುನಃ ಸೂರ್ಯನನ್ನು ಸೇರಿ ತಿಂಗಳಾಗುವನು. ಹೀಗೆ ಸೂರ್ಯನಿಗೆ, ಚಂದ್ರನಿಗೆ ಮಾನ ಎಂದರೆ ಗತಿಯ ಲೆಕ್ಕಾಚಾರ ಬದಲಾಗಿ ಸಿದ್ಧಾಂತವಾಗಿದೆ.

ಚಾಂದ್ರಯಾಣದ ಯುಗಾದಿ ಪ್ರತಿ ಸಂವತ್ಸರದ ಫಲ್ಗುಣ ಕೊನೆಯ ದಿನಕ್ಕೆ ಮುಗಿದು ಚೈತ್ರಶುದ್ಧ ಪ್ರತಿಪದೆಗೆ ಹೊಸ ವರ್ಷ ಆರಂಭವಾಗುವುದು. ಚಂದ್ರನು ಸ್ವೀಕಾರಕ ಗ್ರಹನಾಗಿ ಸಮಸ್ತ ಸಸ್ಯ, ಜಲ - ಔಷಧ ಸಂಪತ್ತಿಗೆ ಸ್ವಾಮಿಯಾಗಿರುವವನು. ಆತನ ಕಿರಣಗಳಿಂದ ಜಲವೃದ್ಧಿ, ಮಳೆ, ಬೆಳೆಯಾದ್ದರಿಂದ ಯುಗಾದಿಗೆ ಧಾನ್ಯ ಸಂಪತ್ತಿನ ಪೂಜೆ ಉತ್ಸವಗಳು ನಡೆಯುತ್ತವೆ. ಯಾವುದೇ ವಸ್ತುವಿನಿಂದ ನಮಗಾಗುವ ಜೀವನ ಸೌಖ್ಯಕ್ಕೆ ಭಗವಂತನೇ ಕಾರಣ ಎಂಬುದು ಋಷುದೃಷ್ಟಿ. ಹಾಗಾಗಿ ಆದಿತ್ಯಾದಿ ಗ್ರಹಗಳು, ಭೂಮಿ, ಪಂಚತತ್ತ್ವ ಮುಖ್ಯವಾಗಿ ಭಗವಂತನ ವ್ಯಾಕೃತ ಅಧಿಷ್ಠಾನ ಎಂದು ಯುಗಾದಿ ಸಂಕ್ರಾಂತಿಗಳ ಆಚರಣೆ ಅನಾದಿಕಾಲದಿಂದಲೂ ನಡೆಯುತ್ತಿದೆ. ಆಗಲೇ ಹೇಳಿದಂತೆ ಚಾಂದ್ರಮಾನವು ನಮ್ಮ ಕರ್ನಾಟಕ, ಆಂಧ್ರಪ್ರದೇಶ, ಮರಾಠ ದೇಶವು ಹೆಚ್ಚಾಗಿ ಅವಲಂಭಿತ ಪ್ರದೇಶಗಳು. ಮಿಕ್ಕ ಸಮಸ್ತ ದೇಶಭಾಗವೂ ಸೂರ್ಯ ಸಿದ್ಧಾಂತವಾಗಿ ಇದೇ ಯುಗಾದಿಯನ್ನು ಚೈತ್ರ ಮಧ್ಯದಲ್ಲಿ ಮೇಷ ಸಂಕ್ರಮಣ ಕಾಲವೆಂದು ಆಚರಿಸುತ್ತದೆ. ಆಚರಣೆಯ ಭಾವ, ರೀತಿ, ಉದ್ದೇಶ ಒಂದೇ ಆಗಿದೆ.

ಇನ್ನು ಚಾಂದ್ರಮಾನ ಒಳ್ಳೆಯದೋ, ಸೂರ್ಯಮಾನ ಒಳ್ಳೆಯದೋ ಎಂದು ಕೇಳಿದರೆ ಎರಡೂ ಸರಿಯೇ! ನಮ್ಮ ಸಂಪ್ರದಾಯ ಯಾವುದೋ ಅದನ್ನು ಆಚರಿಸಬೇಕು. ಈ ಚಾಂದ್ರಸೂರ್ಯಮಾನ ಪದ್ಧತಿಗಳು ಎರಡಿರುವ ಕಾರಣವೇ ಉತ್ತರ ಭಾರತದ ಜಾತಕ ಶೈಲಿಗೂ ನಮ್ಮ ದಕ್ಷಿಣದ ಜಾತಕ ಶೈಲಿಗೂ ಇರುವ ವ್ಯತ್ಯಾಸ. ಅವರು ಸೂರ್ಯ ರೇಖಾಂಶದಿಂದ ರಾಶಿಫಲ ನೋಡಿದರೆ, ನಾವು ಚಂದ್ರ ರೇಖಾಂಶವನ್ನು ನೋಡುತ್ತೇವೆ. ಎರಡೂ ಸಹ ಜ್ಯೋತಿಷ್ಯ ಶಾಸ್ತ್ರದ ಅಂಗವೇ ಏನೂ ಗೊಂದಲಕ್ಕೆ ಕಾರಣವಿಲ್ಲ. ಚಂದ್ರನ ಬಲಾಬಲ ವಿಶೇಷದಿಂದ ಚಾಂದ್ರಯಾಣ ಫಲವನ್ನು ಹೋರಾ ಶಾಸ್ತ್ರದಲ್ಲಿ ಹೇಳಲಾಗಿ ಅದರ ಆಧಾರದಲ್ಲೇ ಪ್ರತಿವರ್ಷದ ಪಂಚಾಂಗ ತಯಾರು ಮಾಡುವರು. ಚಂದ್ರನು ಜಲತತ್ತ್ವದಿಂದ ಉದಯಿಸಿದ ಶೀತಲಗ್ರಹ. ಕ್ಷೀರಪಥ ಅಪಾರ ರಾಶಿಯನ್ನೇ ಕ್ಷೀರಸಮುದ್ರ ಎಂದು ವೇದ ಕಾಲವು ಕರೆದಿರುವುದು. ಅಲ್ಲಿ ನಡೆದ ಸೃಷ್ಟಿ ಮಥನ ಎಂದರೆ ಸತ್ವಾದಿ ತ್ರಿಗುಣ ಕಿರಣಗಳ ಘರ್ಷಣೆಯೇ ದೇವತಾ. ಅಸುರ ಪ್ರಯತ್ನವಾದ ಸಮುದ್ರಮಥನ. ಈ ಕರ್ಷಣೆಯಿಂದ ಅನೇಕ ದುರ್ಲಭ ವಸ್ತುಗಳೂ, ಪ್ರಾಣಿಗಳೂ, ದಿವ್ಯ ಶರೀರಗಳೂ ತಥಾ ಲೋಕಮಾತೆಯಾದ ಲಕ್ಷ್ಮೀ ದೇವಿಯ ಪಾದುರ್ಭಾವಆಯಿತು. ಸರಿ ಸುಮಾರು 400 ಕೋಟಿ ವರ್ಷಗಳ ಹಿಂದೆ ಆದ ಒಂದು ಮಹಾ ಮಥನ ಸೌರಮಂಡಲದ ವ್ಯಾಕೃತ ಸೃಷ್ಟಿ ಕಥನವೇ ಸಮುದ್ರಮಥನ. ಇಷ್ಟು ಕೋಟ್ಯಾಂತರ ವರ್ಷ ವಾಗಿರುವ ಸಾಧ್ಯತೆ ಇದೆ ಎಂದು ಆಧುನಿಕ ವಿಜ್ಞಾನಿಗಳು ಸಂಶೋಧಿಸಿದ್ದಾರೆ. ಅದೇ ಹೊಂದುವ ನಮ್ಮ ಪ್ರಾಚೀನ ಗ್ರಂಥಗಳು ಹೇಳುತ್ತವೆ. ಅಮೂರ್ತವಾಗಿ ವಿಜ್ಞಾನಿಗಳು ಪದಾರ್ಥಗಳ ವಿಷಯವಾಗಿ ಹೇಳಿದರೆ ಅದೇ ಅಮೂರ್ತಕ್ಕೆ ಮೂರ್ತರೂಪವ ಕಾಣುವ ಕಲ್ಪನೆಗೆ ನಿಲುಕುವ ಕಥಾನಕ ದೃಷ್ಟಿಯಲ್ಲಿ ನಮ್ಮ ಪುರಾಣಗಳು ಹೇಳುತ್ತವೆ. ಪ್ರಾಚೀನ - ಆಧುನಿಕ ಅಧ್ಯಯನ, ಚಿಂತನ ಸಮನ್ವಯ ಕೊರತೆಯಿಂದ ಒಂದೊಪ್ಪಿದರೆ ಇನ್ನೊಂದು ಒಪ್ಪಲಾರದೇ ಹೋಗಿದೆ. ಭೂಮಿಯ ಜಲಾಂಶವನ್ನೇ ಹೊಂದಿರುವ ಕಾರಣ ಚಂದ್ರನನ್ನು ಭೂಮಿಯ ಉಪಗ್ರಹವೆಂದಿರುವರು ಪಾಡ್ಯಾದಿ ಪೂರ್ಣಿಮಾ ಅಮಾವಾಸ್ಯಾದಿ ತಿಥಿಗಳೂ ಆಯಾ ದಿನದ ಅಶ್ವಿನ್ಯಾದಿ 27 ನಕ್ಷತ್ರಗಳ ತಿಳಿವೂ ಸಹ ಚಂದ್ರನ ಕಾರಣದಿಂದಲೇ ತಿಳಿಯಲಾಗುವುದು. ಜಗದ ಬೆಳಕಿನ ಕಾರಣ ಸೂರ್ಯನಾದರೆ, ರಾತ್ರಿಯ ಕಾರಣ ಚಂದ್ರನಾಗುವನು. ಚಂದ್ರನ ಚಲನೆ ಭೂಮಿಯ ಎಲ್ಲಾ ಶಾಂತ - ಶೀತಲ, ಸುಂದರತೆಗೂ ಚಂದ್ರನಿಗೂ ಸಂಬಂಧವಿದೆ. ಜಲ, ಅನ್ನ, ಮಾತೃ, ರೂಪ, ಸುಖ, ಯೌವನ, ಔಷ, ಸಂಪತ್ತು, ಸ್ತ್ರೀನಿಮಿತ್ತ ಸಕಲ ಸುಖ ಇವೆಲ್ಲಕ್ಕೂ ಚಂದ್ರಗ್ರಹಣ ಅಭಿಮಾನಿಯಾ ಕಾಂತತ್ವವನ್ನು ಹೊಂದಿದೆ. ಸಮೃದ್ಧಿಯ ಸಂಕೇತವೇ ಚಂದ್ರನಾಗಿರುವ ಕಾರಣ ಚಾಂದ್ರಯಾಣ ಪದ್ಧತಿ ಅನೂಚಾನವಾಗಿ ಆಚರಣೆಯಲ್ಲಿದೆ.

# ದೇವತಾ ವೃಕ್ಷ ಮಾವು - ಔಷಧ ಪ್ರಾಶಸ್ತ್ಯ

- ಮೂಲ : ಡಾ ॥ ಸಿ. ಮಧುಸೂದನಶರ್ಮ
9000761390
ಅನುವಾದ - ಶ್ರೀಮತಿ

ಆಧ್ಯಾತ್ಮಿಕ ಭಾವನೆಯ ಜೊತೆಗೆ ಆರೋಗ್ಯವನ್ನು ಸಂರಕ್ಷಿಸುವ ಅತ್ಯಂತ ಶಕ್ತಿವಂತವಾದ ಹಾಗೂ ಅಪಾರ ಔಷಧೀಯ ಗುಣಗಳನ್ನು ಹೊಂದಿರುವ ಪವಿತ್ರ ವೃಕ್ಷ ಮಾವು.

ಮಾವಿನ ಮರದ ಕೆಳ ಭಾಗದಿಂದ ಶಿವಲಿಂಗವು ಉದ್ಭವಿಸಿದ ಕಾರಣಕ್ಕೆ ಓರಿಸ್ಸಾ ರಾಜ್ಯದಲ್ಲಿನ ಭುವನೇಶ್ವರವನ್ನು ಏಕಾಮ್ರ ಕ್ಷೇತ್ರ ಎನ್ನುತ್ತಾರೆಂದು ಪುರಾಣದ ವ್ಯಾಖ್ಯಾನವು.

ತಮಿಳುನಾಡಿನಲ್ಲಿಯ ಕಾಂಚಿಪುರದಲ್ಲಿ ಶ್ರೀ ವೇಂಕಟೇಶ್ವರ ಸ್ವಾಮಿ ಆಲಯದಲ್ಲಿ ಸುಮಾರು 3500 ವರ್ಷಗಳ ಹಿಂದಿನದೆಂದು ಹೇಳಲ್ಪಡುವ ದೇವತಾಸ್ವರೂಪಿ ಮಾವಿನ ಮರದ ನಾಲ್ಕು ಕೊಂಬೆಗಳು ನಾಲ್ಕು ವೇದಶಾಖೆಗಳೆಂದು ಭಾವಿಸಲ್ಪಡುತ್ತವೆ.

ಮಾವಿನ ಎಲೆಗಳಲ್ಲಿ ಲಕ್ಷ್ಮೀದೇವಿ ಅಡಗಿರುವುದಾಗಿಯೂ ಆದ್ದರಿಂದಲೇ ಮಾವಿನೆಲೆಯ ತೋರಣಗಳನ್ನು ಮನೆಯಲ್ಲಿ ಅಲಂಕರಿಸುವುದರಿಂದ ಆ ಮನೆಯಲ್ಲಿ ಆರ್ಥಿಕ ಸಮಸ್ಯೆಗಳಿರುವುದಿಲ್ಲವೆಂದು ವಾಸ್ತು ದೋಷಗಳೇನಿದ್ದರೂ ಅವುತೊಲಗಿ ಹೋಗುತ್ತವೆಂದು ಹಿರಿಯರು ಹೇಳುತ್ತಾರೆ.

ಅಷ್ಟೇ ಅಲ್ಲದೇ, ಈ ಮಾವಿನೆಲೆಗಳು ಕಲುಷಿತಗೊಂಡ ಇಂಗಾಲಯುಕ್ತ ವಾಯುವನ್ನೇ ಅಧಿಕ ಪ್ರಮಾಣದಲ್ಲಿ ಹೀರಿಕೊಂಡು ನಮಗೆ ಅವಶ್ಯವಾದ ಪ್ರಾಣ ವಾಯುವನ್ನು ಬಿಡುಗಡೆ ಮಾಡುತ್ತದೆ.

ಸಂಸ್ಕೃತದಲ್ಲಿ 'ಆಮ್ರ' ಎಂದು ಕರೆಯಲ್ಪಡುವ 'ಅನಕಾರ್ಡಿಯೇಸಿ' ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ಮಾವಿನ ಶಾಸ್ತ್ರೀಯ ನಾಮಧೇಯ 'ಮಾಂಗಿಫೆರ ಇಂಡಿಕಾ' .

ಮಾವಿನ ಕಾಯಿ, ಮಾವಿನ ಹಣ್ಣುಗಳನ್ನು ಆಹಾರವಾಗಿ ಬಳಸುವುದು ನಮ್ಮೆಲ್ಲರಿಗೂ ಸರ್ವೇಸಾಮಾನ್ಯವು. ಆದರೆ ಇವುಗಳೊಂದಿಗೆ ಮಾವಿನ ಮರದ ಎಲೆಗಳು, ಹೂಗಳು, ಬೀಜಗಳು ಕಾಂಡ, ತೊಗಟೆ, ಬೇರುಗಳು ಹೀಗೆ ಎಲ್ಲಾ ಭಾಗಗಳು ಔಷಧೀಯವಾಗಿ ವಿವಿಧ ವ್ಯಾಧಿಗಳಿಗೆ ಉಪಯೋಗಿಸಲ್ಪಡುತ್ತವೆ ಎಂಬ ವಿಷಯ ಬಹಳ ಮಂದಿಗೆ ತಿಳಿದಿಲ್ಲ.

ನಮ್ಮ ಆರೋಗ್ಯ ಸಂರಕ್ಷಣೆಗೆ ಇವು ಹೇಗೆ ಬಳಸಲ್ಪಡುತ್ತವೆ ಎಂಬುದನ್ನು ಪ್ರಸ್ತುತ ತಿಳಿಯೋಣ.

### ಕೆಮ್ಮು - ಆಯಾಸಕ್ಕೆ

ಮಾವಿನ ಗೊಟ್ಟದಲ್ಲಿರುವ ಬೀಜವನ್ನು ಚೆನ್ನಾಗಿ ಕುಟ್ಟಿ, ಒಣಗಿಸಿ, ಪುಡಿಮಾಡಿ, ದಿನವೂ ಎರಡು ಬಾರಿ ಬಾರಿಯೊಂದಕ್ಕೆ ಅರ್ಧ ಟೀ ಸ್ಪೂನ್ ಪುಡಿಯನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಉತ್ತಮವಾದ ಫಲಿತಾಂಶ ದಕ್ಕುತ್ತದೆ.

### ಜಠರ ಹಾಗೂ ಕರುಳಿನ ಕ್ರಿಮಿಗಳಿಗೆ

ಮಾವಿನ ಗೇರುಬೀಜವನ್ನು ಒಣಗಿಸಿ ಮಾಡಿದ ಪುಡಿ, ಬೆಲ್ಲ ಒಂದೊಂದನ್ನು 25 ಗ್ರಾಂ ತಕ್ಕಷ್ಟು ತೆಗೆದುಕೊಂಡು ಎರಡನ್ನು ಮೆತ್ತಗೆ ನಾದಿಟ್ಟುಕೊಂಡು ಬೆಳಗ್ಗೆ-ಸಾಯಂಕಾಲ ಬಾರಿಯೊಂದಕ್ಕೆ ಗುಲಗಂಜಿಯಷ್ಟು, ಪ್ರಮಾಣದಲ್ಲಿ ಸೇವಿಸುತ್ತಿದ್ದರೆ ಶೀಘ್ರದಲ್ಲೇ ಈ ಸಮಸ್ಯೆಯು ತಗ್ಗುತ್ತದೆ.

### ಸ್ತ್ರೀಯರ ಬಿಳಿಸೆರೆಗಿಗೆ

ಮಾವಿನ ಬೀಜದ ಪುಡಿ ಮತ್ತು ಕಲ್ಲುಸಕ್ಕರೆ ಒಂದೊಂದನ್ನು 30 ಗ್ರಾಂ ನಂತೆ ಕಲಿಸಿಟ್ಟುಕೊಂಡು ಬಾರಿಯೊಂದಕ್ಕೆ 3-5 ಗ್ರಾಂ ಪುಡಿಯನ್ನು ಅರ್ಧ ಲೋಟ ನೀರಿನಲ್ಲಿ ಕಲಿಸಿ ಸೇವಿಸುವುದರಿಂದ ಈ ಸಮಸ್ಯೆಯು ನಿವಾರಣೆಯಾಗುತ್ತದೆ.

### ರಕ್ತ ಸಂಬಂಧಿ ದೋಷಗಳಿಗೆ

ದಿನವೂ ಮೂರು ಬಾರಿ, ಬಾರಿಯೊಂದಕ್ಕೆ 2-3 ಗ್ರಾಂ ನಂತೆ ಮಾವಿನ ಬೀಜದ ಪುಡಿಯನ್ನು 100 ಮಿ.ಲಿ. ತಾಜಾ ಮಜ್ಜಿಗೆಯಲ್ಲಿ ಕಲಿಸಿ ಸೇವಿಸುತ್ತಿದ್ದರೆ ರಕ್ತ ಸಂಬಂಧಿ ದೋಷಗಳು ತಗ್ಗುವುದೊಂದೇ ಅಲ್ಲದೇ ಹೊಟ್ಟೆಯಲ್ಲಿ ಉರಿತ, ಬಾಯಿ, ವಸಡು, ಮೂಗಿನ ಹೊಳ್ಳೆಗಳು, ಮಲದ್ವಾರದಿಂದ ರಕ್ತ ಸೋರುವುದು, ಸ್ತ್ರೀಯರಲ್ಲಿ ಅಧಿಕ ಮುಟ್ಟು - ರಕ್ತಸ್ರಾವವಾಗುವುದು ಕಡಿಮೆಗೊಳ್ಳುತ್ತವೆ.

### ತಲೆಹೊಟ್ಟಿಗೆ

ವಾರಕ್ಕೆರಡು ಬಾರಿ ತಕ್ಕಷ್ಟು ಮಾವಿನ ಗೇರಿನ ಪುಡಿಯಲ್ಲಿ ತಕ್ಕಷ್ಟು ನೀರು ಬೆರಸಿ ತಲೆಗೆ ಹಚ್ಚಿ,ಗಂಟೆಯ ನಂತರ ಸ್ನಾನ ಮಾಡಬೇಕು.

### ಹೇನುಕಡಿತಕ್ಕೆ

ಮಾವಿನ ಗೇರನ್ನು ಒಣಗಿಸಿ ತಯಾರಿಸಿದ ಪುಡಿ, ನಲ್ಲಿ ಕಾಯಿ ಪುಡಿ, ಒಂದೊಂದು 50 ಗ್ರಾಂನಂತೆ ಕಲಿಸಿಟ್ಟು ಕೊಂಡು ಪ್ರತಿದಿನ ಎರಡು ಬಾರಿ ತಕ್ಕಷ್ಟು ಪುಡಿಯಲ್ಲಿ ತಕ್ಕಷ್ಟು ಹಸುವಿನ ಹಾಲನ್ನು ಕಲಿಸಿ ಪೇಸ್ಟಿನಂತೆ ಮಾಡಿ, ಸಮಸ್ಯೆಯಿರುವ ಸ್ಥಳಕ್ಕೆ ಹಚ್ಚಿದರೆ ಗುಣವಾಗುವುದು.







### ಮಾವಿನ ಗೇರಿನಿಂದ ಹೇಯರ್ ಆಯಿಲ್

ಒಂದು ದೊಡ್ಡ ಬಾಣಲೆಯಲ್ಲಿ ಒಂದು ಕಿಲೋ ಎಳ್ಳೆಣ್ಣೆಯನ್ನು ತೆಗೆದುಕೊಂಡು ಅದರಲ್ಲಿ ಕಾಲು ಕಿ.ಲೋ ಗೇರನ್ನು ಒಣಗಿಸಿ ಮಾಡಿದ ಪುಡಿ, ಕಾಲು ಕಿಲೋ ತ್ರಿಫಲ ಚೂರ್ಣ ಕಲಿಸಿ ವಾರದವರೆಗೂ ಹಾಗೆಯೇ ಇಡಬೇಕು. ದಿನವೂ ಬೆಳಗ್ಗೆ - ಸಂಜೆ ಕಲೆಸುತ್ತಿರಬೇಕು.ನಂತರ ಈ ತೈಲವನ್ನು ಒಂದು ಸೀಸೆಯಲ್ಲಿ ಸಂಗ್ರಹಿಸಿಟ್ಟುಕೊಂಡು ವಾರಕ್ಕೆ 1-2 ಬಾರಿ ತಲೆಗೆ ಹಚ್ಚಿಕೊಂಡು 2-3 ತಾಸು ಬಿಟ್ಟು ತಲೆಸ್ನಾನ ಮಾಡುತ್ತಿದ್ದರೆ,ಚಿಕ್ಕ ವಯಸ್ಸಿಗೆ ಕೂದಲು ನೆರೆಯುವುದು, ಕೂದಲು ಸೀಳುವುದು ತಗ್ಗುತ್ತವೆ. ಕೂದಲು ಕಪ್ಪಾಗಿ ಕಾಂತಿಯುತವಾಗಿ ಮೃದುತ್ವವನ್ನು ಪಡೆದುಕೊಳ್ಳುತ್ತವೆ.

### ಅಧಿಕ ಮುಟ್ಟಿನ ಸ್ರಾವಕ್ಕೆ

400 ಮಿ.ಲೀ. ನೀರಿನಲ್ಲಿ 100 ಗ್ರಾಂ ಮಾವಿನ ತೊಗಟೆಯನ್ನು ತುಂಡುಮಾಡಿ 200 ಮಿ.ಲೀ. ಕಷಾಯವು ಉಳಿಯುವಂತೆ ಸಣ್ಣದಾದ ಉರಿಯಲ್ಲಿ ಮರಳಿಸಿ, ಕೆಳಗಿಳಿಸಿ, ತಣ್ಣಗಾದ ನಂತರ ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ 100 ಮೀ.ಲೀ ನಂತೆ ಕುಡಿಯುತ್ತಿರಬೇಕು. ಇದೇ ಕಷಾಯವನ್ನು ಬಾಯಲ್ಲಿ ಹಾಕಿಕೊಂಡು ಮುಕ್ಕಳಿಸುತ್ತಿದ್ದರೆ ಬಾಯಿ ಹುಣ್ಣು, ಗಂಟಲು ನೋವು ತಗ್ಗುತ್ತವೆ. ವಸಡುಗಳು ಗಟ್ಟಿಯಾಗಿ ಹಲ್ಲುಗಳು ದೃಢತ್ವವನ್ನು ಪಡೆದುಕೊಳ್ಳುತ್ತವೆ.

### ನೀರಿನಿಂದಾಗುವ ಸೋಂಕಿಗೆ

ಪ್ರತಿದಿನ 3 ಅಥವಾ 4 ಸಾರಿ ಬಾರಿಯೊಂದಕ್ಕೆ 10-15 ಎಳೆ ಮಾವಿನ ಚಿಗುರನ್ನು ಮೆತ್ತಗೆ ನಾದಿ ಮುದ್ದೆಯಾಗಿ ಮಾಡಿ, ನುಂಗಿ, ಬಳಿಕ 50 ಮಿ.ಲೀ. ತಾಜಾ ಮೊಸರನ್ನು ಸೇವಿಸುತ್ತಿದ್ದರೆ ತಕ್ಷಣವೇ ಗುಣ ಹೊಂದುತ್ತಾರೆ.

**ಎಡದಿಂದ ಬಲಕ್ಕೆ**

1. ಚತುಶ್ಲೋಕೀ
2. ಮಣವಾಳಮಾಮುನಿ
3. ಈಶ್ವರಮುನಿ

**ಬಲದಿಂದ ಎಡಕ್ಕೆ**

4.ಕೋಲ್ ಕೊಂಡುವಾ
5.ಕೂಡಿಡು ಕೊಡಲೇ.

**ಮೇಲಿಂದ ಕೆಳಕ್ಕೆ**

6. ಇರುಪ್ಪಿಡಂ
7. ರಾಮಾನುಜಮುನಿ
8.ಯಾಮುನಮುನಿ
9. ನರೈಯಾರು

**ಕೆಳಗಿನಿಂದ ಮೇಲಕ್ಕೆ**


10.ಗೀತಾಭಾಷ್ಯ
11. ಆಗಮ
12. ತಾಲೇಲೋ
13.ವಾಮನ
14. ಅಪ್ಪೂಚ್ಚಿ
15. ತನಿಶ್ಲೋಕಿ
16. ನಾಥಮುನಿ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 6 ಇ | 8 1 ಚ | ತು | ಶ್ಲೋ | ಕೀ | 7 ರಾ | 8 ಯಾ | 9 ನ |
| 2 | ರು | ಲೋ | | ಚ್ಚಿ | ಶ್ಲೋ | ಮಾ | ಮು | ರೈ |
| 3 | ಪ್ಪಿ | ಲೇ | ನ | ಪ್ಪೂ | ನಿ | 13 ನು | ನ | ಯಾ |
| 4 | ಡಂ | 12 ತಾ | ಮ | 14 ಅ | 15 ತ | ಜ | ಮು | ರು |
| 5 | 2 ಮ | 2 ಣ | ವಾ | 13 ಳ | ಮಾ | ಮು | ನಿ | 10 ಗೀ |
| 6 | ಗ | 3 ಈ | ಶ್ವ | ರ | ಮು | ನಿ | ಮು | ತಾ |
| 7 | 11 ಆ | ವಾ | ಡು | ಕೊಂ | ಲ್ | 4 ಕೋ | ಥ | ಭಾ |
| 8 | 1 ಲೇ | ಡ | ಕೂ | ಡು | ಡಿ | 5 ಕೂ | 16 ನಾ | ಷ್ಯ |

## ಪಾಠ -2

# ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ।। ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್



### गुणिताक्षराणि :-

क् + अ = क
ಕ್ + ಅ = ಕ
क् + आ = का
ಕ್ + ಆ = ಕಾ
क् + इ = कि
ಕ್ + ಇ = ಕಿ
क् + ई = की
ಕ್ + ಈ = ಕೀ
क् + उ = कु
ಕ್ + ಉ = ಕು
क् + ऊ = कू
ಕ್ + ಊ = ಕೂ
क् + ऋ = कृ
ಕ್ + ಋ = ಕೃ
क् + ॠ = कॄ
क् + ऌ = कॢ
क् + ए = के
ಕ್ + ಎ = ಕೆ
क् + ऐ = कै
ಕ್ + ಐ = ಕೈ
क् + ओ = को
ಕ್ + ಒ = ಕೊ
क् + औ = कौ
ಕ್ + ಔ = ಕೌ
क् + अं = कं
ಕ್ + ಅಂ = ಕಂ
क् + अः = कः
ಕ್ + ಅಃ = ಕಃ

| | | | | | | | | | | |
|---|---|---|---|---|---|---|---|---|---|---|
| ङ | ङा | ङि | ङी | ङु | ङू | ङृ | ङॄ | | | |
| ಙ | ಙಾ | ಙಿ | ಙೀ | ಙು | ಙೂ | ಙೃ | | | | |
| ङे | ङै | ङो | ङौ | ङं | ङः | | | | | |
| ಙೆ | ಙೈ | ಙೊ | ಙೌ | ಙಂ | ಙಃ | | | | | |
| झ | झा | झि | झी | झु | झू | झृ | झॄ | झे | झै | झो |
| ಝ | ಝಾ | ಝಿ | ಝೀ | ಝು | ಝೂ | ಝೃ | | ಝೆ | ಝೈ | ಝೊ |
| झौ | झं | झः | | | | | | | | |
| ಝೌ | ಝಂ | ಝಃ | | | | | | | | |
| र | रा | रि | री | रु | रू | रृ | रॄ | रे | रै | रो |
| ರ | ರಾ | ರಿ | ರೀ | ರು | ರೂ | ರೃ | | ರೆ | ರೈ | ರೊ |
| रौ | रं | रः | | | | | | | | |
| ರೌ | ರಂ | ರಃ | | | | | | | | |
| श | शा | शि | शी | शु | शू | शृ | शॄ | शे | शै | शो |
| ಶ | ಶಾ | ಶಿ | ಶೀ | ಶು | ಶೂ | ಶೃ | | ಶೆ | ಶೈ | ಶೊ |
| शौ | शं | शः | | | | | | | | |
| ಶೌ | ಶಂ | ಶಃ | | | | | | | | |

### ವಿಶೇಷ ಸೂಚನೆಗಳು

- ಕನ್ನಡವರ್ಣಮಾಲೆಯಲ್ಲಿರುವ "ಕೇ, ಕೋ" ಈ ಅಕ್ಷರಗಳು ಸಂಸ್ಕೃತ ವರ್ಣಮಾಲೆಯಲ್ಲಿ ಇರುವುದಿಲ್ಲ.
- ಸಂಸ್ಕೃತ ವರ್ಣಮಾಲೆಯಲ್ಲಿರುವ "ॠ ", "ऌ " ಈ ಎರಡು ಅಕ್ಷರಗಳು ಕನ್ನಡ ವರ್ಣಮಾಲೆಯಲ್ಲಿ ಬಳಕೆಯಲ್ಲಿ ಇರುವುದಿಲ್ಲ.
- ಸಂಸ್ಕೃತ ವರ್ಣಮಾಲೆಯಲ್ಲಿರುವ "के " ,"को" ಅಕ್ಷರಗಳು ಕನ್ನಡ ವರ್ಣಮಾಲೆಯಲ್ಲಿರುವ "ಕೆ, ಕೇ, ಕೊ, ಕೋ" ಅಕ್ಷರಗಳಿಗೆ ಸಮಾನವಾಗಿದೆ.

## ಸಂವತ್ಸರೋತ್ಸವಗಳು

ಸಪ್ತಗಿರೀಶನಿಗೆ ವರ್ಷಕ್ಕೊಮ್ಮೆ ಮಾತ್ರಾ ಕೆಲವು ವಿಶೇಷ ದಿನಗಳಲ್ಲಿ ಕೆಲವು ಉತ್ಸವಗಳು ನಡೆಯುತ್ತವೆ. ಅವನ್ನೇ ವಾರ್ಷಿಕೋತ್ಸವಗಳು ಎಂದೂ ಸಂವತ್ಸರೋತ್ಸವಗಳೆಂದೂ ಕರೆಯುತ್ತಾರೆ. ಅವುಗಳಲ್ಲಿ ಕೆಲವು ಮುಖ್ಯವಾದ ಉತ್ಸವಗಳ ಬಗೆಗೆ ತಿಳಿದುಕೊಳ್ಳೋಣ.

## ಯುಗಾದಿಯ ಆಸ್ಥಾನ - ಇತರ ಆಸ್ಥಾನ ಸೇವೆಗಳು

ಪ್ರತೀ ವರ್ಷ ಯುಗಾದಿಯ ಪರ್ವದಿನದಂದು ಆ ಬ್ರಹ್ಮಾಂಡನಾಯಕನಿಗೆ "ಯುಗಾದಿಯ ಆಸ್ಥಾನ" ವನ್ನು ಬಂಗಾರದ ಬಾಗಿಲಿನ ಮುಂದೆ ನೆರವೇರಿಸುತ್ತಾರೆ. ಶ್ರೀದೇವಿ ಭೂದೇವಿಯರೊಂದಿಗೆ ಶ್ರೀ ಮಲೆಯಪ್ಪಸ್ವಾಮಿಗೆ ವೈಭವದಿಂದ ನೈವೇದ್ಯ, ನೂತನ ವಸ್ತ್ರಗಳ ಸಮರ್ಪಣೆ, ಹೊಸ ಪಂಚಾಂಗ ಶ್ರವಣ ನಡೆಯುತ್ತದೆ.

ಬಂಗಾರದ ಬಾಗಿಲಿನ ಮುಂದೆ ನಡೆಯುವ ಈ ಆಸ್ಥಾನ ಸೇವೆಯನ್ನು ಅರ್ಚಕರು, ಆಲಯದ ಅಧಿಕಾರಿಗಳು, ದೇವಸ್ಥಾನದ ಸಿಬ್ಬಂದಿಯವರು ಮಾತ್ರವೇ ದರ್ಶಿಸುವುದಕ್ಕೆ ಸಾಧ್ಯವಾಗುತ್ತದೆ. ಹೆಚ್ಚೂ ಕಡಿಮೆ ಇದೇ ರೀತಿಯಲ್ಲಿ ಆಣಿವಾರ ಆಸ್ಥಾನ (ಜುಲೈ 16), ಆಸ್ಥಾನ, ಶ್ರೀರಾಮನವಮಿ ಆಸ್ಥಾನ,ಶ್ರೀ ಕೃಷ್ಣಾಷ್ಟಮಿ ಆಸ್ಥಾನದಂತಹಾ ಎಷ್ಟೋ ಉತ್ಸವಗಳು ಆಲಯದ ಬಂಗಾರದ ಬಾಗಿಲಿನ ಮುಂದೆ ನಡೆಯುತ್ತದೆ.ಅವನ್ನು ಎಲ್ಲರೂ ದರ್ಶಿಸುವುದಕ್ಕೆ ಸಾಧ್ಯವಾಗುವುದಿಲ್ಲ.

## ವಾರ್ಷಿಕ ವಸಂತೋತ್ಸವ

ಪ್ರತಿ ವರ್ಷ ಚೈತ್ರಮಾಸದಲ್ಲಿ ಹುಣ್ಣಿಮೆಯ ದಿನಕ್ಕೆ ಸಮಾಪ್ತಿಯಾಗುವಂತೆ ಮೂರು ದಿನಗಳ ಕಾಲ ಕಾಲ ವಸಂತೋತ್ಸವವನ್ನು ನೆರವೇರಿಸುತ್ತಾರೆ.

ಶ್ರೀನಿವಾಸನ ದೇವಾಲಯಕ್ಕೆ ನೈರುತ್ಯದ ಮೂಲೆಯಲ್ಲಿ ಇರುವ ವಸಂತ ಮಂಟಪದಲ್ಲಿ ಮೂರು ದಿನಗಳ ಕಾಲ ನಡೆಯುವ ಈ ಉತ್ಸವದಲ್ಲಿ ಮೊದಲು, ಎರಡನೆಯ ದಿನಗಳು ಶ್ರೀದೇವಿ ಭೂದೇವಿಯರೊಂದಿಗೆ ಶ್ರೀಮಲೆಯಪ್ಪಸ್ವಾಮಿಗೆ, ಮೂರನೆಯ ದಿನ ಶ್ರೀ ಮಲೆಯಪ್ಪ ಸ್ವಾಮಿಯೊಂದಿಗೆ ಶ್ರೀ ಸೀತಾರಾಮಲಕ್ಷ್ಮಣರಿಗೆ, ಶ್ರೀ ರುಕ್ಮಿಣಿ ಶ್ರೀಕೃಷ್ಣರಿಗೆ ವಸಂತೋತ್ಸವಗಳನ್ನು ನೆರವೇರಿಸುತ್ತಾರೆ.ಎರಡನೆಯ ದಿನ ಬೆಳಿಗ್ಗೆ ಶ್ರೀಮಲೆಯಪ್ಪಸ್ವಾಮಿಗೆ ಸ್ವರ್ಣರಥೋತ್ಸವವನ್ನು ನೆರವೇರಿಸುತ್ತಾರೆ.

## ಪದ್ಮಾವತೀ ಪರಿಣಯೋತ್ಸವ

ವೈಶಾಖ ಶುದ್ಧ ದಶಮಿಯಂದು ಶ್ರೀ ವೇಂಕಟೇಶ್ವರ ಸ್ವಾಮಿಗೆ, ಆಕಾಶರಾಜನ ಪುತ್ರಿ ಪದ್ಮಾವತಿಗೆ ವಿವಾಹ ನಡೆದ ದಿನ. ಆ ದಿನವನ್ನು ಪುರಸ್ಕರಿಸಿಕೊಂಡು 1992 ರಿಂದ ವೈಶಾಖ ಮಾಸದಲ್ಲಿ ನವಮಿ, ದಶಮಿ, ಏಕಾದಶಿ ಈ ರೀತಿ ಮೂರು ದಿನಗಳ ಕಾಲ ಸಂಜೆ ತಿರುಮಲೆಯ ನಾರಾಯಣ ಗಿರಿಯ ತೋಟದಲ್ಲಿ ಶ್ರೀ ಪದ್ಮಾವತೀ ಪರಿಣಯೋತ್ಸವ ನಡೆಯುತ್ತವೆ. ಇವನ್ನು ಭಕ್ತರೆಲ್ಲರೂ ದರ್ಶಿಸಬಹುದು.

## ಜ್ಯೇಷ್ಠಾಭಿಷೇಕ

ಪ್ರತಿ ವರ್ಷ ಜ್ಯೇಷ್ಠ ಮಾಸದಲ್ಲಿ ಜ್ಯೇಷ್ಠಾನಕ್ಷತ್ರದಂದು ಪೂರ್ತಿಯಾಗುವಂತೆ ಮೂರುದಿನಗಳ ಕಾಲ ದೇವಾಲಯದ ಒಳಗೆ ಸ್ವಾಮಿಯವರ ಉತ್ಸವ ಮೂರ್ತಿಗಳಿಗೆ "ಜ್ಯೇಷ್ಠಾಭಿಷೇಕ" ನೆರವೇರಿಸುತ್ತಾರೆ. ಇದನ್ನೇ "ಅಭಿಧೇಯಕ ಅಭಿಷೇಕ" ಎನ್ನುತ್ತಾರೆ.

ಅತ್ಯಂತ ಪ್ರಾಚೀನವಾದ ಸ್ವಾಮಿಯವರ ಉತ್ಸವ ಮೂರ್ತಿಗಳು, ಅಭಿಷೇಕಗಳಿಂದ ಛಿನ್ನವಾಗದಂತೆ ರಕ್ಷಿಸುವ ಸಲುವಾಗಿ ನಡೆಸುವ ಉತ್ಸವ ಇದು. ಪ್ರತೀ ವರ್ಷಕೇವಲ ಈ ಮೂರು ದಿನಗಳಲ್ಲಿ ಮಾತ್ರವೇ ಹಾಲು, ಮೊಸರು, ಜೇನುತುಪ್ಪ, ಎಳನೀರು, ಅರಿಶಿನ, ಗಂಧದಂತಹಾ ಅಭಿಷೇಕ ದ್ರವ್ಯಗಳಿಂದ ತಿರುಮಂಜನ ನಡೆಯುತ್ತದೆ. ಮೊದಲ ದಿನ ವಜ್ರಕವಚ ದೊಂದಿಗೆ, ಎರಡನೆಯ ದಿನ ಮುತ್ತಿನ ಕವಚದೊಂದಿಗೆ, ಮೂರನೆಯ ದಿನ ಬಂಗಾರದ ಕವಚದೊಂದಿಗೆ ಶ್ರೀ ಮಲೆಯಪ್ಪಸ್ವಾಮಿ ದೇವಸ್ಥಾನದ ಬೀದಿಗಳಲ್ಲಿ ದರ್ಶನ ನೀಡುತ್ತಾರೆ.

ಕೊನೆಯ ದಿನ ಶ್ರೀ ಸ್ವಾಮಿಗೆ ಸಮರ್ಪಿಸಿದ

# ದಿವ್ಯ ಕ್ಷೇತ್ರ ತಿರುಮಲ



ಮೂಲ: ಜೆ. ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ.ಪದ್ಮಜ
9010379476

ಬಂಗಾರದ ಕವಚ, ಪುನಃ ಮುಂದಿನ ವರ್ಷ ನಡೆಯುವ "ಜ್ಯೇಷ್ಠಾಭಿಷೇಕ" ದಲ್ಲಿ ಮಾತ್ರಾ ತೆಗೆಯಲಾಗುತ್ತದೆ.

**ನಾಗಪಂಚಮಿ - ಗರುಡೋತ್ಸವ**

ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಶುದ್ಧ ಪಂಚಮಿಯ ದಿನ ಅಂದರೆ ಗರುಡ ಪಂಚಮಿಯಂದು ಸಂಜೆ ತಿರುಮಲೆಯ ಯವರಿಗೆ "ಗರುಡೋತ್ಸವ" ನಡೆಯುತ್ತದೆ.

**ಪವಿತ್ರೋತ್ಸವ**

ಕೆಲವು ಸಂದರ್ಭಗಳಲ್ಲಿ, ಮೈಲಿಗೆ ಇರುವ ವ್ಯಕ್ತಿಗಳು ಆಲಯದೊಳಗೆ ಪ್ರವೇಸಿಸಬಾರದು. ಆದರೆ ಅವರಿಗೇ ತಿಳಿಯದಂತೆ ಕೆಲವು ವ್ಯಕ್ತಿಗಳು ಪ್ರವೇಶಿಸಿದಾಗ ಪವಿತ್ರತೆಗೆ ಭಂಗ ಉಂಟಾಗುತ್ತದೆ. ಇಂತಹಾ ತಿಳಿದೋ ತಿಳಿಯದೆಯೋ ದೋಷಗಳು ಭಕ್ತರುಗಳಿಂದ ಮಾತ್ರವಲ್ಲದೇ ದೇವಾಲಯದಲ್ಲಿ ಕೆಲಸ ಮಾಡುವ ಕೆಲಸಗಾರರಿಂದಲೂ ನಡೆಯಬಹುದು. ಆದ್ದರಿಂದ ಇಂತಹಾ ದೋಷಗಳ ನಿವಾರಣೆಗೆ ಮೂರು ದಿನಗಳ ಕಾಲ ನಡೆಸುವ ಉತ್ಸವವೇ "ಪವಿತ್ರೋತ್ಸವ"

ಇದು ಪ್ರತೀ ವರ್ಷ ಶ್ರಾವಣ ಮಾಸದಲ್ಲಿ (ಆಗಸ್ಟು) ಶುದ್ಧ ದಶಮಿ "ಏಕಾದಶಿ, ದ್ವಾದಶಿ, ದಿನಗಳಲ್ಲಿ ಹೋಮಗಳು, ಪವಿತ್ರ ಪ್ರತಿಷ್ಠೆ'' ಪವಿತ್ರಸಮರ್ಪಣೆಯಂತಹಾ ವೈದಿಕ ಕಾರ್ಯಕ್ರಮಗಳಿಂದ ಈ ಉತ್ಸವ ನಡೆಯುತ್ತದೆ. ಮೂರು ದಿನಗಳು ಸಂಜೆ ಶ್ರೀ ಮಲೆಯಪ್ಪಸ್ವಾಮಿಗೆ ಮೆರವಣಿಗೆ ನಡೆಯುತ್ತದೆ.

**ಬ್ರಹ್ಮೋತ್ಸವಗಳು**

ಕಲಿಯುಗದಲ್ಲಿ ಭಕ್ತರುಗಳ ರಕ್ಷಣೆಗಾಗಿ ಬ್ರಹ್ಮಾದಿ ದೇವತೆಗಳ ಕೋರಿಕೆಯ ಮೇರೆಗೆ ಶ್ರೀ ಮಹಾವಿಷ್ಣುವು ತಿರುಮಲೆಯ ಬೆಟ್ಟದ ಮೇಲೆ ವೇಂಕಟೇಶ್ವರನಾಗಿ ಕನ್ಯಾ ಮಾಸದಲ್ಲಿ ಶ್ರವಣ ನಕ್ಷತ್ರದಂದು ಸ್ವಯಂ ವ್ಯಕ್ತನಾಗಿ ಉದ್ಭವಿಸಿದ.

ಆ ದಿನವನ್ನು ಪುರಸ್ಕರಿಸಿಕೊಂಡು ಬ್ರಹ್ಮದೇವನು ಆ ದಿನಕ್ಕೆ ಸಂಪೂರ್ಣವಾಗುವಂತೆ ಒಂಭತ್ತು ದಿನಗಳ ಮೊದಲಿನಿಂದಲೂ ಶ್ರೀನಿವಾಸನಿಗೆ ಉತ್ಸವಗಳನ್ನು ನಿರ್ವಹಿಸಿದ. ಅಂದಿನಿಂದ ಈ ಉತ್ಸವಗಳು "ಬ್ರಹ್ಮೋತ್ಸವಗಳೆಂದು" ಹೆಸರು ಪಡೆದುವು.

ಚಾಂದ್ರಮಾನದ ಪ್ರಕಾರ ಅಧಿಕಮಾಸ ಬಂದಾಗ "ವಾರ್ಷಿಕ ಬ್ರಹ್ಮೋತ್ಸವ"ವನ್ನು ಕನ್ಯಾಮಾಸದಲ್ಲಿ "ನವರಾತ್ರಿ ಬ್ರಹ್ಮೋತ್ಸವಗಳನ್ನು" ತುಲಾ ಮಾಸದಲ್ಲಿ, ಈ ರೀತಿ ಎರಡು ಬ್ರಹ್ಮೋತ್ಸವಗಳು ನಡೆಯುತ್ತವೆ.

**ಮುಗಿಲುಮುಟ್ಟುವ ಬ್ರಹ್ಮೋತ್ಸವಗಳ ಸಂಭ್ರಮ**

ಶ್ರವಣ ನಕ್ಷತ್ರದ ದಿನಕ್ಕೆ ಹತ್ತು ದಿನಗಳ ಮೊದಲು ಧ್ವಜಾರೋಹಣದೊಂದಿಗೆ ಪ್ರಾರಂಭವಾಗಿ, ಕೊನೆಯಲ್ಲಿ ಚಕ್ರಸ್ನಾನ, ಧ್ವಜಾವರೋಹಣದೊಂದಿಗೆ ಮುಗಿಯುವ ಈ ಹತ್ತುದಿನಗಳ ಬ್ರಹ್ಮೋತ್ಸವದ ಸಂಭ್ರಮವನ್ನು ಕಣ್ತುಂಬಿಕೊಳ್ಳಬೇಕಾದ್ದೇ ಹೊರತು ವರ್ಣಿಸಲಸಾಧ್ಯವಾದುದು.

ಮೊದಲ ದಿನ ರಾತ್ರಿ ದೊಡ್ಡಶೇಷವಾಹನದಿಂದ ಪ್ರಾರಂಭವಾಗಿ ಪ್ರತೀದಿನ ಬೆಳಿಗ್ಗೆ, ರಾತ್ರಿ, ಸಾಲಾಗಿ ಶೇಷವಾಹನ, ಹಂಸವಾಹನ, ಸಿಂಹವಾಹನ, ಮುತ್ತಿನ ಚಪ್ಪರ,ಕಲ್ಪವೃಕ್ಷವಾಹನ,ಸರ್ವಭೂಪಾಲವಾಹನ, ಮೋಹಿನೀಅವತಾರ, ಗರುಡೋತ್ಸವ, ಹನುಮದ್ವಾಹನ,ಗಜವಾಹನ,ಸೂರ್ಯಪ್ರಭವಾಹನ,ಚಂದ್ರಪ್ರಭ ವಾಹನ, ರಥೋತ್ಸವ, ಅಶ್ವವಾಹನ... ಹೀಗೆ ನಡೆಯುವ ವಾಹನೋತ್ಸವದಲ್ಲಿ ಶ್ರೀನಿವಾಸನ ವೈಭವ ಅನಂತ! ಅಪ್ರಮೇಯ! ಅಚಿಂತ್ಯ!!

ಈ ಬ್ರಹ್ಮೋತ್ಸವಗಳಲ್ಲಿ ಮುಖ್ಯವಾಗಿ ಐದನೆಯ ದಿನ ನಡೆಯುವ ಬಂಗಾರದ ಗರುಡೋತ್ಸವ, ಎಂಟನೆಯ ದಿನ ನಡೆಯುವ ರಥೋತ್ಸವಗಳನ್ನು ದರ್ಶಿಸುವುದಕ್ಕೆ ಎರಡು ಕಣ್ಣುಗಳೂ ಸಾಲುವುದಿಲ್ಲ.

ಶ್ರೀನಿವಾಸನ ಗರುಡೋತ್ಸವದಲ್ಲಿ ಮೂಲವಿಗ್ರಹಕ್ಕೆ ಅಲಂಕರಿಸುವ ಮಕರ ಕಂಠೀ, ಲಕ್ಷ್ಮೀಹಾರಗಳು, ಸಹಸ್ರನಾಮ ಮಾಲೆಗಳು, ಮದ್ರಾಸಿನಿಂದ ಬರುವ ಹೊಸ ಛತ್ರ ಚಾಮರಗಳು, ಶ್ರೀವಿಲ್ಲಿಪುತ್ತೂರಿನಿಂದ ಬರುವ ಗೋದಾದೇವಿಯ ಮಾಲೆಗಳು. ಹೀಗೆ ಅನೇಕ ವಿಶೇಷಗಳಿಂದ ತಿರುಮಲೆಯ ಬೀದಿಗಳಲ್ಲಿ ಬಂಗಾರದ ಗರುಡನ ಮೇಲೆ ವಿಹರಿಸುವ ಶ್ರೀ ವೇಂಕಟೇಶ್ವರನನ್ನು ದರ್ಶಿಸುವುದಕ್ಕೆ ಅದೊಂದೇ ದಿನ ಲಕ್ಷಲಾದಿ ಭಕ್ತರು ತಿರುಮಲೆಯನ್ನು ಸೇರುತ್ತಾರೆ.

ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವಗಳಲ್ಲಿ ಬ್ರಹ್ಮಚಾರಿಗಳು, ಗೃಹಸ್ಥರು, ವಾನಪ್ರಸ್ಥರು,ಯತೀಶ್ವರರು, ಬಾಲಬಾಲಿಕೆಯರು, ಕನ್ಯೆಯರು, ಪುಣ್ಯಾಂಗನೆಯರು, ವಿಧವೆಯರು, ವಿಧುರರು, ಕುಂಟ, ಕುರುಡ, ವಿಕಲಾಂಗರು, ಅಧಿಕಾರಿಗಳು, ಅನಧಿಕಾರಿಗಳು, ಪಮಡಿತರು, ಪಾಮರರು, ಧನಿಕರು, ಬಡವರು, ಉದ್ಯೋಗಿಗಳು, ಉದ್ಯೋಗಾರ್ಥಿಗಳು, ಕಾರ್ಯಾರ್ಥಿಗಳು ಶರಣಾರ್ಥಿಗಳು, ಅರ್ಥಾರ್ಥಿಗಳು, ... ಹೀಗೆ ಅವರೂ ಇವರು ಎಂಬ ಬೇಧಭಾವವಿಲ್ಲದೇ ಎಲ್ಲರೂ ಕಲಿಯುಗವೈಕುಂಠನ ದರ್ಶನಕ್ಕೆ ಹಾತೊರೆಯುತ್ತಿರುತ್ತಾರೆ.

ಮುಖ್ಯವಾಗಿ ವರ್ಷಕ್ಕೆ ಒಮ್ಮೆ ಹತ್ತು ದಿನಗಳ ಕಾಲ ನಡೆಯುವ ಬ್ರಹ್ಮೋತ್ಸವದ ಸಂಭ್ರಮ ಮುಗಿಲುಮುಟ್ಟುವಂತಿರುತ್ತದೆ.

ಏಳುಬೆಟ್ಟಗಳಲ್ಲಿ ಒಂದೆಡೆ ಗೋವಿಂದ ನಾಮವನ್ನು ಸ್ಮರಿಸುತ್ತಾ ಬೆಟ್ಟವನ್ನು ಹುತ್ತುತ್ತಿರುವ ಭಕ್ತಜನ, ಮತ್ತೊಂದೆಡೆ ಭಕ್ತಿಯಿಂದ ಭಜನೆಯನ್ನು ಮಾಡುತ್ತಾ ಭಜನೆ ಗುಂಪು, ಇನ್ನೊಂದೆಡೆ ಕೋಲಾಟ ನೃತ್ಯಗಳು, ಭಜನೆಗಳು, ಹರಿಕಥೆ, ಹಗಲುವೇಷದವರು ಪುಷ್ಕರಿಣೀಸ್ನಾನಗಳು, ದರ್ಶನಗಳು, ತಲೆಗೂದಲನ್ನು ದೇವರಿಗೆ ಅರ್ಪಿಸುವರು. ತಿರುಮಲೆಯಲ್ಲಿ ಸಾಕ್ಷಾತ್ತು ದೇವನ ಪ್ರತಿರೂಪವಾಗಿ ಕಂಡು ಬರುವ ಭಕ್ತರು, ನಿತ್ಯಾನ್ನದಾನ ಪ್ರಸಾದ ವಿತರಣೆ, ಯಾತ್ರಿಕರ ಸೇವೆಯಲ್ಲಿ ಅಹೋರಾತ್ರಿ ಶ್ರಮಿಸುವಂತಹಾ ದೇವಸ್ಥಾನದ ಉದ್ಯೋಗಿಗಳು, ಶ್ರೀವಾರಿಸೇವಕ ಬೃಂದದವರು ಸ್ಕೌಟ್‌ನವರು, ಆರೋಗ್ಯಾಧಿಕಾರಿಗಳು,ಅರ್ಚಕರು ಧಾರ್ಮಿಕ ಪ್ರಸಂಗದವರು. ಹೀಗೆ ಒಂದೇನು ಎಷ್ಟೋಷ್ಟೋ ಜನ ಎಷ್ಟೋ ರೀತಿಯಲ್ಲಿ ಸಂತೋಷದಿಂದ, ಸಂಭ್ರಮದಿಂದ ಕಂಡು ಬರುತ್ತಾರೆ.

ಇನ್ನು ಬ್ರಹ್ಮೋತ್ಸವ ನಡೆಯುವ ರಾತ್ರಿಗಳಲ್ಲಿ ತಿರುಮಲೆಯ ಸೌಂದರ್ಯ ವರ್ಣನಾತೀತ!ತಿರುಮಲೆಯ ತುಂಬಾ ಸ್ವಾಗತ ತೋರಣಗಳು, ಆಲಯ ಪ್ರಾಕಾರಗಳು ಮಂಟಪಗಳು, ಪುಷ್ಕರಿಣಿ, ಛತ್ರಗಳು.... ಎಲ್ಲಾ ವಿದ್ಯುದ್ದೀಪಗಳಿಂದ ಶೋಭಾಯಮಾನವಾಗಿ ಕಂಗೊಳಿಸುತ್ತಿರುತ್ತವೆ. ದೇವತೆಗಳೆಲ್ಲಾ ಜ್ಯೋತಿ ಸ್ವರೂಪರಾಗಿ ಧರೆಗಿಳಿದು ಬಂದು ಬ್ರಹ್ಮಾಂಡನಾಯಕನ ಬ್ರಹ್ಮೋತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾರೇನೋ ಎಂದು ಭಾಸವಾಗುತ್ತದೆ. ಈ ಸಂದಭವದಲ್ಲಿ ಪ್ರತ್ಯೇಕ ಪುಷ್ಪಾಲಂಕರಣೆಯನ್ನೂ ಮಾಡಿರುತ್ತಾರೆ. ಶ್ರೀನಿವಾಸನ ಆಲಯವೆಲ್ಲಾ ಚಿತ್ರವಿಚಿತ್ರವಾದ ಹೂಗಳಿಂದ, ಸುಗಂಧವನ್ನು ಹೊರಸೂಸುವ ಪುಷ್ಪಗಳಿಂದ ಅಲಂಕರಿಸುತ್ತಾರೆ. ಇದೇ ಪುಷ್ಪವನಗಳ ಶಾಖೆ ಹಾಗೂ ದೇವಸ್ಥಾನದವರು ಪ್ರತ್ಯೇಕತೆ! ಅವೆಲ್ಲವನ್ನು ಕಣ್ಣಾರೆ ನೋಡಿ ಮನತುಂಬಿ ಕೊಳ್ಳಬೇಕಾಗಲೀ ಹೇಳುವುದಕ್ಕೆ ಮಾತುಗಳು ಸಾಲುವುದಿಲ್ಲ.

### ಪುಷ್ಪಯಾಗ

ಶ್ರೀನಿವಾಸನ ಬ್ರಹ್ಮೋತ್ಸವದ ನಿರ್ವಹಣೆಯಲ್ಲಿ ದೋಷವೇನಾದರೂ ನಡೆದಿದ್ದರೆ ಅದರ ನಿವಾರಣೆಗಾಗಿ ಅತೀ



ವೃಷ್ಟಿಗಳು, ಅನಾವೃಷ್ಟಿಗಳು ತೊಲಗಿ ಲೋಕವೆಲ್ಲಾ ಸುಭಿಕ್ಷವಾಗಿರು ವುದಕ್ಕೆ ಪ್ರತೀವರ್ಷ ಬ್ರಹ್ಮೋತ್ಸವಗಳ ನಂತರ ಕಾರ್ತೀಕ ಮಾಸದಲ್ಲಿ ಶ್ರವಣ ನಕ್ಷತ್ರದಲ್ಲಿ ಶ್ರೀದೇವಿ ಭೂದೇವಿ ಸಮೇತ ಮಲೆಯಪ್ಪಸ್ವಾಮಿಗೆ 'ಪುಷ್ಪಯಾಗ' ನಡೆಯುತ್ತದೆ. ಕ್ರಿ.ಶ. 15 ನೆಯ ಶತಾಬ್ದದಲ್ಲಿ ನಡೆಯುತ್ತಿದ್ದ ಪುಷ್ಪಯಾಗ ಯಾವಾಗ ನಿಂದು ಹೋಯ್ತೋ ತಿಳಿದಿಲ್ಲ. ಆದರೆ ಪುನಃ 1980 ರ ನವೆಂಬರ್ 14 ನೆಯ ತಾರೀಖಿನಂದು ಪುನರುದ್ಧರಿಸಲ್ಪಟ್ಟಿತು. ಅಂದಿನಿಂದ ತಿರುಮಲೆಯಲ್ಲಿ ಈ ಪುಷ್ಪಯಾಗವನ್ನು ನಡೆಸುತ್ತಿದ್ದಾರೆ.

ಪುಷ್ಪಯಾಗವನ್ನು ನೆರವೇರಿಸುವ ಬೆಳಿಗ್ಗೆ ತಿರುಮಂಜನ, ಮಧ್ಯಾಹ್ನ ವಿವಿಧ ಪುಷ್ಪಗಳಿಂದ 21 ಬಾರಿ ಶ್ರೀ ಸ್ವಾಮಿಯನ್ನು ಅರ್ಚಿಸುತ್ತಾರೆ.

### ನಾಗರ ಚವಿತಿ - ದೊಡ್ಡ ಶೇಷವಾಹನ

ಪ್ರತಿವರ್ಷ ಕಾರ್ತೀಕ ಮಾಸದ ಶುದ್ಧಚವಿತಿ ಅಂದರೆ "ನಾಗರಚವಿತಿ" ಯಂದು ಸಂಜೆ ತಿರುಮಲೆಯ ಶ್ರೀ ಸ್ವಾಮಿಗೆ "ದೊಡ್ಡಶೇಷವಾಹನ" ಸೇವೆ ನಡೆಯುತ್ತದೆ.


## ಹೆಲ್ಮೆಟ್ ತಪ್ಪದೇ ಧರಿಸಬೇಕು

ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ಅಸೂರಿ ಗುಣಗಳಿಂದ ವಿನಾಶ ತಪ್ಪದು

**ಡಾ|| ವೈಷ್ಣವಾಂಘ್ರಿಸೇವಕ್‌ದಾಸ್**
**9821914642**
**ಅನುವಾದ : ಡಿ.ಎಸ್.ಭೂಮಿಕ**



ದೈವಿ ಗುಣಗಳು-ಅಸುರಿ ಗುಣಗಳೆಂಬುವುವು ಎರಡುಂಟು. ಭಗವಂತನ ನಿಯಮ-ನಿರ್ಬಂಧಗಳನ್ನೂ, ಆದೇಶಗಳನ್ನು ಪಾಲಿಸುವವರು ದೇವತೆಗಳು ಅಥವಾ ದೈವೀಗುಣ ಸಂಪನ್ನರು. ಭಗವಂತನ ನಿಯಮಕ್ಕೆ ವಿರುದ್ಧವಾಗಿ ನಡೆಯುವವರು ಅಥವಾ ಅವುಗಳನ್ನು ಸಂಪೂರ್ಣವಾಗಿ ಉಲ್ಲಂಘಿಸುವವರು ಅಸುರರು. ಯಾವುದೇ ದೇಶದಲ್ಲಿ ಪ್ರಜಾಪ್ರಭುತ್ವ ನಿರ್ಬಂಧನೆಗಳಿಗೆ ಬದ್ಧರಾಗಿ ನಡೆಯುವವರೂ ಇರುತ್ತಾರೆ ಹಾಗೂ ಅವುಗಳನ್ನು ಉಲ್ಲಂಘಿಸುತ್ತಾವ್ಯತಿರಿಕ್ತವಾಗಿ ಜೀವಿಸುವವರೂ ಇರುತ್ತಾರೆ. ಪ್ರಭುತ್ವದ ನಿಯಮಾವಳಿಗಳನ್ನು ಪಾಲಿಸುವವರು ನಾಗರೀಕ ಪೌರರು ಅದಲ್ಲದೇ ನಿಯಮಗಳನ್ನು ಮುರಿಯುತ್ತಾ ವಿರೋಧವಾಗಿ ನಡೆಯುವವರು ಅನಾಗರಿಕ ಅಪರಾಧಿಗಳು. ನಿಯಮಗಳಿಗೆ ಬದ್ಧರಾಗಿ ನಡೆಯುವವರು ಸ್ವೇಚ್ಛರಾಗಿ ಬದುಕಬಲ್ಲರು. ಆದರೆ ನಿಯಮ ವ್ಯತಿರಿಕ್ತವಾಗಿ ನೇಮಿಷ್ಠರಾಗಿ ಢಾಂಭಿಕತೆಯಿಂದ ನಡೆದುಕೊಳ್ಳುವವರು ಯಾವುದೋ ಒಂದು ದಿನ ಬಂಧಿಸಲ್ಪಡುತ್ತಾರೆ. ಭಗವದ್ಗೀತೆ (16.5) ಈ ವಿಷಯವನ್ನು ಸ್ಪಷ್ಟವಾಗಿ ವಿವರಿಸುತ್ತಾ "ದೈವೀಗುಣಗಳು ಮೋಕ್ಷಕ್ಕೆ ಪ್ರತಿಕೂಲವಾಗಿರುತ್ತವೆ. ಅಲ್ಲದೇ ಅಸುರಿ ಗುಣಗಳು ಬಂಧನ ಕಾರಕವಾಗಿರುತ್ತವೆ. ಓ ಪಾಂಡುಪುತ್ರ! ನೀನು ದೈವಿಗುಣಗಳಿಂದ ಜನ್ಮಿಸಿರುವ ಕಾರಣ ಲವಲೇಶವೂ ದುಃಖಿಸಬೇಡ" ಎಂದು ಹೇಳಿದೆ.

ದೈವಿಗುಣಗಳಲ್ಲಿ ಮೊಟ್ಟ ಮೊದಲನೇಯದು "ಅಭಯ", ಅಂದರೆ ಭಯರಾಹಿತ್ಯ. ಮನುಷ್ಯನಿಗೆ ಅಪಜಯವನ್ನು ತಂದುಕೊಂಡುವುದು ಈ ಭಯವೇ. ಮನುಷ್ಯನಿಗಿರುವ ದೇಹ ಬಲವು ಸ್ವಲ್ಪವಾದರೂ, ಬೆಟ್ಟದಷ್ಟು ಆತ್ಮ ಬಲವಿದ್ದಲ್ಲಿ ಎಂತಹ ಘನಕಾರ್ಯವನ್ನಾದರೂ ಸಾಧಿಸಬಲ್ಲರು. ಇನ್ನು ಅಸುರಿ ಗುಣಗಳಲ್ಲಿ ಮೊಟ್ಟ ಮೊದಲನೇಯದು 'ಜಂಭ'- ಅಂದರೆ ಗರ್ವ. ಗರ್ವವೆನ್ನುವುದು ಅನೇಕ ಕಾರಣಗಳಿಂದ ಬರುತ್ತದೆ. ಅಂದಮದ, ಧನಮದ, ಹಣದ ಮದ, ಬಲಮದ, ಪರಪತಿಯನ್ನು ಅನುಸರಿಸುತ್ತಾ ಗರ್ವ ಪಡುತ್ತಿರುತ್ತಾರೆ. ಆದರೆ ಗರ್ವಕ್ಕೆ ಕಾರಣವಾಗಿರುವ ಈ ವಿಷಯಗಳೆಲ್ಲಾ ಕ್ಷಣದಲ್ಲಿ ನಶಿಸಿ ಹೋಗುತ್ತವೆ. ತಪೋಶಕ್ತಿ ಗಳಿಸಿಕೊಂಡು ಅಸುರರು ದೇವತೆಗಳ ಮೇಲೆ ಮಾತು-ಮಾತಿಗೆ ದಾಳಿಮಾಡುವುದನ್ನು ನಾವು ನಮ್ಮ ಪುರಾಣಗಳಲ್ಲಿ ಕೇಳುತ್ತಿರುತ್ತೇವೆ. ಚರಿತ್ರೆಯಲ್ಲಿ ಎಷ್ಟೋ ಜನರು ಒಂದು ಹೋಗಿದ್ದಾರೆ. ಅವರ ಕಾಲದಲ್ಲಿಯ ಜನರು ಅವರನ್ನು ಗೌರವಿಸಿದರೂ, ಅವರ ಹೆಸರು ಶಾಶ್ವತವಾಗಿ ನಿಲ್ಲದು. ಅಸುರಿ ಗುಣಗಳಲ್ಲಿ ಎರಡನೇಯದು 'ಮದ'. ಮೂರನೇಯದು ದುರಹಂಕಾರ. ನಾಲ್ಕನೇಯದು ಕ್ರೋಧ. ಐದನೇಯದು ಕಟು ಸ್ವಭಾವ. ಈ ಐದು ಅಸುರೀಗುಣಗಳು ಅಜ್ಞಾನದಿಂದ ಉಂಟಾಗುತ್ತವೆ. ಅಜ್ಞಾನವೆಂದರೆ ಯಥಾರ್ಥಜ್ಞಾನ ಇಲ್ಲದಿರುವುದು. ಜ್ಞಾನವಿಲ್ಲದಿರುವಿಕೆಯೇ ಅಜ್ಞಾನವು ಪ್ರಕಾಶವಿಲ್ಲದಿರುವುದೇ ತಮಕ್ಕೆ ಕಾರಣವಾದಂತೆ ಜ್ಞಾನವಿಲ್ಲದಿರುವುದೇ ಅಜ್ಞಾನಕ್ಕೆ ಕಾರಣವಾಗುತ್ತದೆ. ಈ ಅಸುರಿ ಗುಣಗಳಿಂದ ಬಂಧನವೋದಗುತ್ತದೆ. ಪಂಜರದಲ್ಲಿ ಸಿಲುಕಿದ ಗಿಳಿ ಎಂದೂ ಸುಖವಾಗಿರಲಾರದು. ಅಲ್ಲವೇ? ಬೋನಿನಲ್ಲಿ ಬಿದ್ದ ಇಲಿ ಸುಖವಾಗಿರಲಾರದಲ್ಲವೇ? ಕಾರಾಗೃಹದಲ್ಲಿರಿಸಲ್ಪಟ್ಟ ಖೈದಿ ಸ್ವಾತಂತ್ರವನ್ನು ಅನುಭವಿಸಲಾರ ಅಲ್ಲವೇ? ಹಾಗೆಯೇ ಬಂಧನಗಳನ್ನು ತಂದೊಡ್ಡುವ ಅಸುರಿಗುಣಗಳು ಯಾವತ್ತಿಗೂ ಸುಖವನ್ನು ತರಲಾರವು.

ಆದ್ದರಿಂದ ಯಾರಲ್ಲಿ ದೈವಿಗುಣಗಳಿರುತ್ತವೋ ಅವರಿಗೆ ಯಾವ ರೀತಿಯ ಅವಘಡಗಳು ಬಂದೂದಗಿದರೂ ಶೋಕಿಸುವ ಅವಶ್ಯಕತೆಯಿಲ್ಲ ಯಾವತ್ತಿಗೂ ಅವರಿಗೆ ದುಃಖರಾಹಿತ್ಯವುದಕ್ಕೇ ದಕ್ಕುತ್ತದೆ. ಪಾಂಡವರು ದೈವೀಗುಣಸಂಪನ್ನರು. ಅವರಿಗೆ ಎಷ್ಟು ಕಷ್ಟಗಳು ಎದುರಾದರೂ ಕಡೆಗೆ ಅವರೆಲ್ಲಾ ದುಃಖರಾಹಿತ್ಯವನ್ನು ಹೊಂದಿದರು. ಯಾರಲ್ಲಿ ದೈವೀಗುಣಗಳಿರುತ್ತವೋ ಅವರು ಶೋಕದೂರರಾಗಿರುತ್ತಾರೆ. ಆದ್ದರಿಂದ ಯುವಕರು ಎಂದೆಂದಿಗೂ ದೈವೀಗುಣ ಪ್ರಾಪ್ತಿರಾಗೇ ಇರಬೇಕು. ಹಾಗೆಯೇ ಗರ್ವ, ಮದ, ಅಹಂಕಾರ ಕ್ರೋಧ, ಕಠೋರತ್ವದಿಂದ ಸಂಪೂರ್ಣವಾಗಿ ಹೊರಬರಬೇಕು. ಇಂತಹ ಅಸುರಿ ಸ್ವಭಾವಗಳನ್ನು ಗುರುತಿಸಬೇಕೆಂದರೆ ಹಲವು ವಿಷಯಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ವಿದ್ಯೆ, ಧನ, ಸೌಂದರ್ಯಗಳನ್ನು ಹೊಂದಿ ಅವರು ಮದದಿಂದ ಇರುತ್ತಾರೆ. ಗರ್ವ ಅವರ ಮುಖದಲ್ಲಿ ಎದ್ದು ಕಾಣುತ್ತಿರುತ್ತದೆ. ಎಲ್ಲರೂ ತಮ್ಮನ್ನು ಗೌರವಿಸಬೇಕೆಂದು ಅವರು ಅಂದು ಕೊಳ್ಳುತ್ತಾರೆ. ಗೌರವಾರ್ಹರಾಗದಿದ್ದರೂ ತಮಗೆ ಗೌರವವು ದೊರೆಯಬೇಕೆಂದು ಅವರು ಹಪಹಪಿಸುತ್ತಿರುತ್ತಾರೆ. ಚಿಕ್ಕ ವಿಷಯಗಳ ಮೇಲೆ ಸಹಾ ಅವರು ಕೋಪವನ್ನು ಹೊಂದಿ ಕಠೋರವಾಗಿ ಮಾತನಾಡುತ್ತಿರುತ್ತಾರೆ. ಮೃದುವಾಗಿ ಮಾತನಾಡುವುದು ಅವರಿಗೆ ತಿಳಿಯಲೊಲ್ಲದು. ಏನು ಮಾಡಬೇಕು ಏನು ಮಾಡಬಾರದೆಂಬ ವಿವೇಚನೆಯನ್ನು ಅವರು ಹೊಂದಿರಲಾರರು. ಪ್ರಾಮಾಣಿಕವಾದುದನ್ನು ಅವರು ಸ್ವೀಕರಿಸದೇ ತಮ್ಮ ಮನಸ್ಸಿಗೆ ತೋಚಿದ್ದನ್ನು ಮಾಡುತ್ತಾರೆ. ಇಂತಹ ಅಸುರಿಗುಣ ಸ್ವಭಾವವನ್ನು ನಿಜವಾಗಿ ನಾವು ಶಪಿಸಬೇಕಾಗುತ್ತದೆ. ಅಲ್ಲದೇ ದೈವಿಗುಣ ಸ್ವಭಾವದವರು ಯಾವತ್ತಿಗೂ ಶೋಕಿಸುವ ಅಗತ್ಯವೇ ಇಲ್ಲ. ಇಂದಿನ ಯುವಪೀಳಿಗೆ ದೈವೀಗುಣಗಳಿಗೆ ಮೈ ಗೂಡಿಸಿಕೊಂಡು ಸಕಲ ಮಂಗಳಗಳನ್ನು ಹೊಂದಬೇಕು.

# ಭಕ್ತಜನ ಭದ್ರಾರಾಮ - ಶ್ರೀ ರಾಮಭದ್ರ

ಶ್ರೀಮತಿ. - ಎ. ಗೀತಾ ವೀರ ರಾಘವನ್
08026722817



ಭಗವಂತನು ಈ ಲೋಕದಲ್ಲಿ ಅನೇಕ ಅವತಾರಗಳನ್ನು ಮಾಡಿದನು. ಅವನ ಅವತಾರಕ್ಕೆ ಕಾರಣ -

"ಪರಿತ್ರಾಣಾಯ ಸಾಧೂನಾಮ್ ವಿನಾಶಾಯಚ ದುಷ್ಕೃತಾಮ್।
ಧರ್ಮ ಸಂಸ್ಥಾಪನಾರ್ತಾಯ ಸಂಭವಾಮಿ ಯುಗೇ ಯುಗೇ ॥"

ಎಂದು ಅವನೇ ತಿಳಿಸಿದ್ದಾನೆ. ಆದರೆ ದುಷ್ಟರನ್ನು ನಾಶ ಮಾಡಲು ಅವನು ಅವತರಿಸಬೇಕಾದ ಅವಶ್ಯಕತೆ ಇಲ್ಲ. ಅವನ ಒಂದು ಸಂಕಲ್ಪ ಮಾತ್ರದಿಂದ ದುಷ್ಟರು ನಾಶವಾಗುತ್ತಾರೆ. ಧರ್ಮವನ್ನು ಸ್ಥಾಪಿಸಲು ಸ್ವಾಮಿ ಪರಾಶರರು, ಭೀಷ್ಮರು, ವ್ಯಾಸರು ಮುಂತಾದ ಅನೇಕ ಮಹಾತ್ಮರನ್ನು ಸೃಷ್ಟಿಸಿದ್ದಾನೆ. ಅವನೇ ಅವತರಿಸುವ ಅವಶ್ಯಕತೆ ಇಲ್ಲ. ಆದರೆ 'ಪರಿತ್ರಾಣಾಯ ಸಾಧೂನಾಂ' ಶಬರಿಯಂತಹ ಭಕ್ತರು ಭಗವಂತನನ್ನು ಕಾಣಲು ಪರಿತಪಿಸುತ್ತಿದ್ದರೆ, ಸ್ವಾಮಿ ತಾನೇ ಓಡಿ ಬಂದು ಅವತರಿಸುತ್ತಾನೆ. ಒಬ್ಬ ದಾನವ ಕುಮಾರ ಪ್ರಹ್ಲಾದನನ್ನು ಕಾಪಾಡಲು ಶ್ರೀ ನರಸಿಂಹ ಎಲ್ಲಾ ಕಂಬಗಳಲ್ಲಿಯೂ ಅವತರಿಸಿದಂತೆ, ಗೋಪಿಯರನ್ನು ಸಂತೋಷ ಪಡಿಸಲು ಶ್ರೀ ಕೃಷ್ಣ ಅವತರಿಸಿದಂತೆ ಶ್ರೀರಾಮ ಭಕ್ತ ಜನರನ್ನು ತೃಪ್ತಿ ಪಡಿಸಲು ರಾಮಭದ್ರನಾಗಿ ಅವತರಿಸಿದನು. ರಾಮಾಯಣ ಒಂದು ಧೀರ್ಘ ಶರಣಾಗತಿ ತತ್ವ. ತಮ್ಮನ್ನು ಕಾಪಾಡಲು ಪ್ರಾರ್ಥಿಸುವ ಭಕ್ತರನ್ನು ಸ್ವಾಮಿ ಎಂದು ಕೈ ಬಿಡುವುದಿಲ್ಲ. ಆ ಸ್ವಾಮಿಯ ರಕ್ಷಣೆಗೆ ಜಾತಿ, ಮತ, ಕುಲಗಳ ಭೇದವಿಲ್ಲ. ಎಲ್ಲರನ್ನೂ ಒಂದೇ ರೀತಿಯಾಗಿ ಪ್ರೀತಿಯಿಂದ ರಕ್ಷಿಸುತ್ತಾನೆ. ಅಂತಹ ಭಕ್ತರಿಗೆ ಪ್ರಥಮ ಉದಾಹರಣೆ ಮಹಾತ್ಮಾ ಭರತ. ಅವನು ಶ್ರೀರಾಮನ ಪಾದುಕೆಗೆ ಪ್ರಾರ್ಥನೆ ಸಲ್ಲಿಸಿದಾಗ ಸ್ವಾಮಿ ತನ್ನ ಪಾದುಕೆಯನ್ನು ಅವನಿಗೆ ನೀಡಿ ಬರಿಗಾಲಿನಲ್ಲಿ ದಂಡಕಾರಣ್ಯವೆಲ್ಲಾ ಓಡಾಡಿದನು. ಭಕ್ತ ಭರತ ರಾಮಭದ್ರನ ಪಾದುಕೆಗೆ ಪಟ್ಟಾಭಿಷೇಕ ಮಾಡಿದನು. ಪಾದುಕೆಗೆ ಹದಿನಾಲ್ಕು ವರ್ಷಗಳ ಕಾಲ ರಾಜ್ಯವಾಳಿದ ದೃಷ್ಟಾಂತವಿಲ್ಲ. ಇದು ರಾಮಾಯಣದ ವಿಶೇಷ. ರಾಮಾಯಣದ ಇನ್ನೊಂದು ವಿಶೇಷವೆಂದರೆ ಶ್ರೀ ವಾಲ್ಮೀಕಿಗಳು ರಚಿಸಿದ ರಾಮಾಯಣವನ್ನು ತನ್ನ ಪುತ್ರರೇ ಆದ ಲವಕುಶರಿಂದ ಶ್ರೀ ರಾಮನು ಆಲಿಸಿದನು.

ವಾಲ್ಮೀಕಿ ಮಹರ್ಷಿಗಳು ನಾರದರ ಶಿಷ್ಯರು. ಆದರೂ ಬ್ರಹ್ಮನ ಪ್ರೇರಣೆ ಮೇರೆಗೆ ನಾರದರು ವಾಲ್ಮೀಕಿಗಳ ಹತ್ತಿರ ಬರುತ್ತಾರೆ. ವಾಲ್ಮೀಕಿಗಳು ನಾರದನನ್ನು ಪ್ರಶ್ನಿಸುತ್ತಾರೆ. "ಕಃ ಅಸ್ಮಿನ್ ಸಾಂಪ್ರತೆ ಲೋಕೇ" ಎಂದು ಪ್ರಾರಂಬಿಸಿ ಗುಣವಾನ್, ಧೃತಿಮಾನ್, ವೀರವಾನ್.... ಎನ್ನುತ್ತಾ ಹತ್ತು ಸಲ ಕಃ ಕಃ ಎಂದು ಕೇಳುತ್ತಾರೆ. ಕಃ ಎರದರೆ ಭಗವಂತ. ಆ ಹತ್ತು 'ಕಃ' ಎನ್ನುವುದು ಸ್ವಾಮಿಯ ಹತ್ತು ಅವತಾರಗಳನ್ನು ಸೂಚಿಸುತ್ತದೆ. ತ್ರಿಲೋಕ ಸಂಚಾರಿಯಾದ ನಾರದರು ಈ ಮನುಷ್ಯ ಲೋಕದಲ್ಲಷ್ಟೇ ಅಲ್ಲ ಮೂರು ಲೋಕಗಳಿಂದಲೂ ಈ ಎಲ್ಲಾ ಕಲ್ಯಾಣ ಗುಣಗಳನ್ನುಳ್ಳವನು ಇಕ್ಷ್ವಾಕು ವಂಶದಲ್ಲಿ ಅವತರಿಸಿರುವ ಸರ್ವ ಮಂಗಳಕರನಾದ "ಶ್ರೀ ರಾಮಚಂದ್ರ" ಎಂದು ಅವನ ಚರಿತವನ್ನು ಸಂಕ್ಷೇಪವಾಗಿ ತಿಳಿಸುತ್ತಾರೆ.

ಅದನ್ನು ವಾಲ್ಮೀಕಿಗಳು ೨೪,೦೦೦ ಶ್ಲೋಕಗಳಲ್ಲಿ ವಿಸ್ತಾರವಾಗಿ ನಿರೂಪಿಸಿದ್ದಾರೆ.ಆ ಶ್ಲೋಕಗಳಲ್ಲಿ ಶ್ರೀಮತ್ ಗಾಯತ್ರೀ ಮಂತ್ರವನ್ನು ಕವಿಗಳು ಅಡಗಿಸಿದ್ದಾರೆ. ಆ ಸಕಲ ಗುಣ ಪರಿಪೂರ್ಣ ಮಂಗಳಮಯನ ಚರಿತೆ ಲೋಕಕ್ಕೆ ಆದಿಕಾವ್ಯವಾಯಿತು. ಇದನ್ನು ಅತ್ಯಂತ ಮಧುರವಾದ ಶ್ಲೋಕಗಳನ್ನು ನಿರೂಪಿಸಿರುವ ವಾಲ್ಮೀಕಿಗಳು ಲೋಕದ ಆದಿಕವಿಯಾದರು.

ಶ್ರೀ ಮನ್ನಾರಾಯಣನು ಶ್ರೀರಾಮನಾಗಿ ಅವತರಿಸಿದಾಗ ಅವನ್ನು ಸದಾ ಸ್ತುತಿಸುವ ವೇದಗಳು ಶ್ರೀ ರಾಮಾಯಣವಾಗಿ ಅವತರಿಸಿದುವು.

ಶ್ರೀ ಮದ್ರಾಯಾಣವು ಒಂದು ಮಹಾಕಾವ್ಯ, ಮಹಾತತ್ವ, ಶಾಸ್ತ್ರ ಎಲ್ಲವೂ ಆಗಿದೆ. ಶ್ರೀರಾಮಪ್ರಭು ಲೋಕಕ್ಕೆ ಸುಲಭವಾದ ಮೋಕ್ಷೋಪಾಯವನ್ನು ಬೋಧಿಸಿದ್ದಾನೆ. ಶ್ರೀರಾಮಾಯಣವು ಶರಣಾಗತಿ ಶಾಸ್ತ್ರ. ಇದರಲ್ಲಿ ವಿಭೀಷಣನು ರಾಕ್ಷಸ ಅಲ್ಲದೆ ರಾವಣನ ತಮ್ಮ ಸ್ವಾಮಿಯನ್ನು ಬಂದು ರಕ್ಷಣೆ ಬೇಡಿದಾಗ ಸ್ವಾಮಿ ಅತ್ಯಂತ ಪ್ರೀತಿಯಿಂದ ಅವನಿಗೆ ರಕ್ಷಣೆ ನೀಡಿ ಆಗಲೇ ಅವನಿಗೆ ಲಂಕಾ ಪಟ್ಟಾಭಿಷೇಕವನ್ನು ಮಾಡಿದುದು ಸ್ವಾಮಿಯ ಭಕ್ತ ಜನ ಸಂರಕ್ಷಣೆಗೆ ಅತ್ಯಂತ ಪ್ರಮುಖವಾದ ಉದಾಹರಣೆ.

ಶ್ರೀರಾಮನ ಚರಿತೆ ಹಾಡಲು ಮಧುರ, ಓದಲು ಸುಖ ಎಲ್ಲರೊಡನೆ ಹಂಚಿಕೊಳ್ಳಲು ಆನಂದಮಯ. ಶ್ರೀರಾಮನು ನಿಯತಾತ್ಮ, ಬುದ್ಧಿಮಾನ್, ಮಹಾವೀರ್ಯವಾನ್, ಧೃತಿಮಾನ್, ಪರಂಜ್ಯೋತಿ ಸ್ವರೂಪಿ.... ಎಲ್ಲಾ ಲೋಕಗಳಿಗೂ ಆಧಾರವಾಗಿರುವವನು, ಧರ್ಮಜ್ಞನೂ ವಾಗ್ಮಿಯೂ, ಸಮುದ್ರನಂತೆ ಗಂಭೀರನೂ, ಕೋಪದಲ್ಲಿ ಕಾಲಾಗ್ನಿ ಸದೃಷನೂ ಸತ್ಯಪರಾಕ್ರಮಿ, ಶ್ರೇಷ್ಠನಾದವನು, ಕ್ಷಮೆಯಲ್ಲಿ ಪೃಥ್ವಿಗೆ ಸಮಾನನಾದವನು, ಜಗತ್ತಿಗೆ ಪ್ರಥಮ ಮಂಗಳಕರ "ಶ್ರೀರಾಮ".

ಶ್ರೀರಾಮನು ವಿಶ್ವಾಮಿತ್ರರೊಡನೆ ಹೋಗಿ ಎಲ್ಲಾ ಧನುರ್ವಿದ್ಯೆಯನ್ನು ಕಲಿತು ಸೀತೆಯೊಡನೆ ವಿವಾಹವಾಗಿ ಜಾನಕೀರಾಮನಾಗಿ ಅಯೋಧ್ಯೆಗೆ ಹಿಂತಿರುಗಿದನು. ದಶರಥನು ಮಗನಿಗೆ ಯುವರಾಜ ಪಟ್ಟಾಭಿಷೇಕ ಮಾಡಲು ಇಚ್ಛಿಸಿದನು. ಆದರೆ ಕೈಕೇಯಿ ಕುಬ್ಜೆಯ ತಂತ್ರದಿಂದ ಭರತನಿಗೆ ಪಟ್ಟಾಭಿಷೇಕವಾಗಬೇಕೆಂದೂ ರಾಮನು ೧೪ ವರ್ಷ ವನವಾಸಕ್ಕೆ ಹೋಗಬೇಕೆಂದೂ ನಿಶ್ಚಯವಾಯಿತು.

ರಾಮನು ಸೀತಾ ಲಕ್ಷ್ಮಣರೊಡನೆ ವನವಾಸಕ್ಕೆ ಹೊರಟನು. ಸುಮಂತ್ರನು ಗಂಗಾ ನದಿಯವರೆಗೆ ಬಿಟ್ಟು ರಾಮನ ಆಜ್ಞೆಯಂತೆ ಅವರನ್ನು ಇಳಿಸಿ ಹಿಂತಿರುಗುವನು.

ವನವಾಸ ಸ್ವಾಮಿಯ ಇಚ್ಛೆಯೇ ಆಗಿತ್ತು. ಅವನು ದಂಡಕಾರಣ್ಯ ಸೇರಿ ಅಲ್ಲಿರುವ ಪರಮ ಸಾತ್ವಿಕ ಋಷಿಗಳಿಗೆ ಅವರಿಗೆ ಹಿಂಸೆ ಮಾಡುತ್ತಿರುವ ರಾಕ್ಷಸರನ್ನು ನಿಗ್ರಹಿಸಿ ಅವರ ಸತ್ಕರ್ಮಗಳಿಗೆ ವಿಜಯ ಘೋಷಣೆ ಮಾಡಬೇಕಾಗಿದ್ದಿತು.

ವನವಾಸಕ್ಕೆ ಹೊರಟಾಗ ದಾರಿಯಲ್ಲಿ ಗುಹನ ಭೇಟಿ. ಸ್ವಾಮಿ ಅವನೊಡನೆ ಸಮಾನವಾಗಿ ಸೇರಿ ತನ್ನ ಸೌಶೀಲ್ಯವನ್ನು ಲೋಕಕ್ಕೆ ಪ್ರಕಾಶಪಡಿಸಿದನು.

ಮುಂದೆ ಭರದ್ವಾಜರ ಆಶ್ರಮಕ್ಕೆ ಹೋಗಿ ಅಲ್ಲಿಂದ ಅಗಸ್ತ್ಯರನ್ನು ಸಂದರ್ಶಿಸಿ ಅವರಿಂದ ಅಸ್ತ್ರಗಳನ್ನು ಪಡೆದು ತನಗಾಗಿ ಕಾತರಿಸುತ್ತಿದ್ದ ಶರಭಂಗರು, ಸುತಿಕ್ಷಣರನ್ನು ಸಂದರ್ಶಿಸಿದನು. ಈ ಎಲ್ಲಾ ಭಕ್ತ ಮಹಾಶಯರಿಗೆ ತನ್ನ ದರ್ಶನ ನೀಡಿ ಅವರೆಲ್ಲರನ್ನೂ ತಣಿಸಿದನು.

ಅಷ್ಟರಲ್ಲಿ ತನಗೆ ರಾಜ್ಯ ಬೇಡವೆಂದೂ ತಾನು ಪ್ರಾರ್ಥಿಸುವ ರಾಜ್ಯ ಶ್ರೀರಾಮನ ಕೈಂಕರ್ಯ ರಾಜ್ಯ ಮಾತ್ರವೆಂದು ರಾಮನನ್ನು ಮತ್ತೆ ಅಯೋಧ್ಯೆಗೆ ಕರೆದುಕೊಂಡು ಹೋಗಲು ಪ್ರಾರ್ಥಿಸಲು ಬಂದ ಪರಮ ಭಕ್ತ ಭರತನಿಗೆ ಸಮಾಧಾನ ಹೇಳಿ ಅವನ ಪ್ರಾರ್ಥನೆಯ ಮೇರೆಗೆ ತನ್ನ ಪಾದುಕೆಯನ್ನು ನೀಡಿದನು. ಭರತನು ಶ್ರೀರಾಮನ ದಾಸ್ಯವನ್ನು ಬೇಡಿದನು, ಲಕ್ಷ್ಮಣನು ಅವನ ಕೈಂಕರ್ಯ ಸಾಮ್ರಾಜ್ಯವನ್ನು ಬೇಡಿದನು. ತನ್ನ ಸಹೋದರರ ಭಕ್ತಿ ಪ್ರೀತಿಯನ್ನು ಕಂಡು ಸ್ವಾಮಿ ಕರಗಿ ಹೋದನು.ಶ್ರೀರಾಮನು ತನ್ನ ಸಹೋದರರಿಗೆ ಮಾತಾ, ಪಿತಾ, ಭ್ರಾತಾ, ಆಚಾರ್ಯ ಎಲ್ಲವೂ ಆಗಿದ್ದನು.

ಶ್ರೀರಾಮನು ದಂಡಕಾರಣ್ಯ ಪ್ರವೇಶಿಸಿದನು. ಅಲ್ಲಿದ್ದ ಎಲ್ಲಾ ಋಷಿಗಳೂ ಗುಂಪು ಗುಂಪಾಗಿ ಬಂದು ಅಲ್ಲಿ ರಾಕ್ಷಸರು ತಮ್ಮ ತಪಸ್ಸಿಗೆ ಮತ್ತು ಯಜ್ಞಯಾಗಾದಿಗಳಿಗೆ ಬಹಳ ತೊಂದರೆ ಮಾಡಿ ಅನೇಕ ಋಷಿಗಳನ್ನು ಸಂಹರಿಸಿದ್ದಾರೆ.ಅವರಿಂದ ತಮ್ಮನ್ನು ರಕ್ಷಿಸಬೇಕೆಂದು ಭಕ್ತ ಮಂದಾರ ವಿಗ್ರಹನಾದ ಶ್ರೀರಾಮನಲ್ಲಿ ಶರಣಾಗತಿ ಮಾಡಿದರು.ಸ್ವಾಮಿ ಅವರನ್ನು ರಕ್ಷಿಸುವುದಾಗಿ ಪ್ರತಿಜ್ಞೆ ಮಾಡಿದನು ಶಿರಸ್ಸು, ಶಿರಸ್ಸು, ಖರ, ದೂಷಣ ಮುಂತಾದ ೧೬೦೦೦ ರಾಕ್ಷಸರನ್ನು ಒಬ್ಬನೇ ನಿಗ್ರಹಿಸಿದನು.

ಮಾಯಾ ಮೃಗ ಮಾರೀಚನನ್ನು ಸಂಹರಿಸಿದನು. ಆ ಸಂದರ್ಭದಲ್ಲಿ ಸೀತಾಪಹರಣವಾಯಿತು. ದಶರಥನ ಮಿತ್ರನಾದ ಜಟಾಯು ಸೀತಾದೇವಿಯನ್ನು ಕಾಪಾಡಲು ರಾವಣನೊಡನೆ ಹೋರಾಡಿ ರಕ್ತ ಸಿಕ್ತನಾಗಿ ಶ್ರೀರಾಮನಿಗೆ ಸೀತಾ

ವೃತ್ತಾಂತ ತಿಳಿಸಲು ಕಾಯುತ್ತಿದ್ದನು. ಶ್ರೀರಾಮನಿಗೆ ಕಣ್ಣೀರಿನೊಡನೆ ಆ ದುಃಖ ವಿಷಯ ಮರಣ ಶಯ್ಯೆಯಲ್ಲಿದ್ದ ಜಟಾಯು ತಿಳಿಸಿದಾಗ ಶ್ರೀ ರಾಮನು ಆ ಪಕ್ಷಿಯನ್ನು ಪ್ರೀತಿಯನ್ನು ಪ್ರೀತಿಯಿಂದ ಆಲಿಂಗಿಸಿಕೊಂಡು ಅದರ ಆ ಸ್ಥಿತಿಗೆ ಬಹಳ ದುಃಖಪಟ್ಟನು. ಮೃತನಾದ ಜಟಾಯುವಿಗೆ ಒಬ್ಬ ಪುತ್ರನಂತೆ ಅಂತಿಮ ಸಂಸ್ಕಾರ ಮಾಡಿ ಅವನಿಗೆ ಮೋಕ್ಷ ವಿತ್ತನು. ಸೀತಾ ಅಪಹರಣದ ದುಃಖವಾಗಿದೆ ಎಂದು ಲಕ್ಷ್ಮಣನೊಡನೆ ಹೇಳಿಕೊಂಡು ಕಣ್ಣೀರಿಟ್ಟನು.

ಮುಂದೆ ಶಾಪಗ್ರಸ್ತ ಕಬಂದನ ಬಾಹುಗಳನ್ನು ಚ್ಛೇದನ ಮಾಡಿ ಸ್ವರ್ಗಕ್ಕೆ ಕಳುಹಿಸಿದನು. ಕಬಂದನು ಶ್ರೀರಾಮನಿಗೆ ಸೀತಾ ಅನ್ವೇಷಣೆಗೆ ಸುಗ್ರೀವನನ್ನು ಕಾಣಲು ತಿಳಿಸಿದನು. ಸೀತಾ ಅನ್ವೇಷಣೆಯು ಅತ್ಯಂತ ಅವಶ್ಯಕವಾಗಿದ್ದರೂ ತನಗಾಗಿ ಪರಿತಪಿಸುತ್ತಿದ್ದ ವೃದ್ಧೆ ಪರಮ ಭಕ್ತೆ ಶಬರಿಯ ಆಶ್ರಮದೆಡೆಗೆ ಸ್ವಾಮಿ ಹೆಜ್ಜೆ ಹಾಕಿದನು. ಆ ಭಕ್ತೆ ನೀಡಿದ ಫಲಗಳನ್ನು ಸ್ವೀಕರಿಸಿ ಅವಳ ಗುರು ಭಕ್ತಿಗೆ ಮೆಚ್ಚಿ ಅವಳ ಮೋಕ್ಷಕ್ಕೆ ಸಾಕ್ಷೀಭೂತನಾದನು.

ಮುಂದೆ ಪರಮ ಭಕ್ತನೂ ದಾಸನೂ ಆದ ಹನುಮಂತನೊಡನೆ ಸಮಾಗಮ. ಸುಗ್ರೀವನು ಶ್ರೀರಾಮನಲ್ಲಿ ಶರಣಾಗತಿ ಮಾಡಿ ರಾಜ್ಯ ಬೇಡಿದನು. ಸ್ವಾಮಿ ವಾಲಿಯನ್ನು ನಿಗ್ರಹಿಸಿ ಸುಗ್ರೀವನಿಗೆ ಪಟ್ಟಾಭಿಷೇಕ ಮಾಡಿದನು.

ಸುಗ್ರೀವನ ಸಹಾಯದಿಂದ ಸೀತಾನ್ವೇಷಣೆ ಪ್ರಾರಂಭವಾಯಿತು. ಪರಮವೀರ, ಭಕ್ತ, ಅತ್ಯಂತ ಬುದ್ಧಿವಂತನಾದ ಆಂಜನೇಯನು ಸಮುದ್ರವನ್ನು ಹಾರಿ ಲಂಕೆಗೆ ಹೋಗಿ ಸೀತಾದೇವಿಗೆ ಅಂಗುಲೀಕ ಪ್ರಧಾನ ಮಾಡಿ ಅವಳ ಚೂಡಾಮಣಿ ತಂದು ಶ್ರೀ ರಾಮನಿಗೆ ನೀಡಿದನು.

ರಾಮ ರಾವಣರ ಘೋರ ಯುದ್ಧವಾಯಿತು. ಭಕ್ತಿಯಿಂದ ಬಂದು ಶರಣಾಗತಿ ಮಾಡಿದ ವಿಭೀಷಣನಿಗೆ ಲಂಕಾ ರಾಜ್ಯ ಪಟ್ಟಾಭಿಷೇಕ ಮಾಡಿದನು.

ಯುದ್ಧದಲ್ಲಿ ವಿಜಯಿಯಾಗಿ ಸೀತೆಯನ್ನು ಪಡೆದನು. ೧೪ ವರ್ಷಗಳು ಕಳೆದ ತಕ್ಷಣ ತಪಸ್ವಿಯಾಗಿ ಶ್ರೀರಾಮನಿಗಾಗಿ ಪರಿತಪಿಸುತ್ತಿದ್ದ ಮಹಾತ್ಮ ಭರತನಿಗಾಗಿ ಹಾರಿ ಬಂದನು. ಭರತನನ್ನು ಅಲಿಂಗಿಸಿಕೊಂಡು ಅಯೋಧ್ಯೆಗೆ ರಥದಲ್ಲಿ ಹೊರಟಾಗ ಭರತನೇ ರಥವನ್ನು ನಡೆಸಿದನು. ಪಾದುಕೆಯಿಂದ ರಾಜ್ಯ ಪಡೆದು ಭರತನ ಮನೋರಥದಂತೆ ಪಟ್ಟಾಭಿಶಿಕ್ತನಾದನು.

ಅಂತಹ ಭಕ್ತ ಜನರ ಭದ್ರಾರಾಮ ಶ್ರೀರಾಮ ಭದ್ರನ ಪಾದ ಕಮಲಗಳಲ್ಲಿ ಶರಣಾಗಿ ಭಕ್ತಿಯಿಂದ ನಮಿಸಿ 'ನಿನ್ನ ಪದವಿಡಿದು



ಬೇಡುತಿಹೆಸಲಹಮ್ಮ ಶ್ರೀರಾಮಭದ್ರ' ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸಿ ನಾವೆಲ್ಲರೂ ಆ ಸ್ವಾಮಿಯ ರಕ್ಷಣೆ ಪಡೆಯೋಣ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

# ಕುಲಶೇಖರಾಳ್ವಾರ್

**- ಚೆಲುವಪತಿ ಸಂಪತ್‌ಕುಮಾರರಾಮಾನುಜಂ**

ಕುಲಶೇಖರಾಳ್ವಾರರು ಚೇರ ದೊರೆ ಧಿಡವ್ರತ ಮತ್ತು ಆತನ ಪತ್ನಿ ನಾಥ ನಾಯಕಿಯ ಮಗನಾಗಿ ಎಂಟನೆಯ ಶತಮಾನದಲ್ಲಿ ಜನಿಸಿದರು. ಮಗು ದಿವ್ಯವಾಗಿದ್ದು ಅದರ ದರ್ಶನ ಪಡೆದವರಿಗೆ ಅತ್ಯಂತ ಸಂತೋಷವನ್ನುಂಟುಮಾಡುತ್ತಿತ್ತು. ರಾಜಕುಮಾರನಿಂದಾಗಿ, ಇಡೀ ರಾಜ್ಯದಲ್ಲೆಡೆ ಸಂತಸದ ಹೊಳೆ ಹರಿದಿತ್ತು. ಮಗುವಿಗೆ 'ಕುಲಶೇಖರನ್' ಎಂಬ ನಾಮಕರಣವಾಯಿತು. ಕುಲಶೇಖರನು ಬೆಳೆಯುತ್ತಿರುವಂತೆ, ರಾಜ ಕುಲೋಚಿತವಾದ ಶಸ್ತ್ರಾಭ್ಯಾಸ, ಕುದುರೆಸವಾರಿ, ಆನೆಸವಾರಿ-ಮುಂತಾದ ವಿದ್ಯೆಗಳಲ್ಲದೆ, ಶಾಸ್ತ್ರ, ಪುರಾಣ, ಕಲೆ, ಸಾಹಿತ್ಯಗಳನ್ನೂ ಹಾಗೂ ತಮಿಳು ಮತ್ತು ಸಂಸ್ಕೃತ ಭಾಷೆಗಳನ್ನು ಕಲಿಸಲಾಯಿತು. ಪ್ರತಿಯೊಂದು ವಿಷಯದಲ್ಲೂ ಕುಲಶೇಖರ ಪಾಂಡಿತ್ಯವನ್ನು ಹೊಂದಿದ.

ದೊರೆಯಾದ ತಂದೆಯು ವಿಧಿವಶವಾದ ನಂತರ, ಕುಲಶೇಖರ ಪಟ್ಟಕ್ಕೇರಿದ. ಅತ್ಯಂತ ಧರ್ಮನಿಷ್ಠನಾಗಿ ರಾಜ್ಯವನ್ನು ಪರಿಪಾಲನೆ ಮಾಡುತ್ತಿದ್ದ ಕುಲಶೇಖರನ ಕಾಲದಲ್ಲಿ, ರಾಜ್ಯದೆಲ್ಲೆಡೆ ಸಕಾಲಿಕ ಮಳೆ ಮತ್ತು ಸಮೃದ್ಧಿಯಾದ ಬೆಳೆಯಾಗುತ್ತಿತ್ತು. ರಾಜ್ಯ ಸುಭಿಕ್ಷವಾಗಿದ್ದು, ಜನರೆಲ್ಲ ಸಂತಸದಿಂದಿದ್ದರು. ಪ್ರಜೆಗಳೆಲ್ಲಾ ತಮ್ಮ ದೊರೆಯಾದ ಕುಲಶೇಖರನನ್ನು ಅತ್ಯಂತ ಪ್ರೀತಿ ಗೌರವಗಳಿಂದ ಕಾಣುತ್ತಿದ್ದರು. ಒಟ್ಟಿನಲ್ಲಿ, ಆ ರಾಜ್ಯವು ರಾಮ ರಾಜ್ಯದಂತಿತ್ತು. ರಾಜಾ ಕುಲಶೇಖರನ ಶಕ್ತಿ, ಸಾಮರ್ಥ್ಯ ಮತ್ತು ಪಾಂಡಿತ್ಯಗಳ ಅರಿವಿದ್ದ ಪಾಂಡ್ಯರಾಜನು ಅವನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಡುತ್ತಾನೆ. ಈ ದಂಪತಿಗಳಿಗೆ, ಒಬ್ಬ ಮಗನೂ, ಒಬ್ಬ ಮಗಳೂ ಹುಟ್ಟುತ್ತಾರೆ. ಹೀಗಿರುವಾಗೊಮ್ಮೆ ರಾತ್ರಿ ಕನಸಿನಲ್ಲಿ ಶ್ರೀಮನ್ನಾರಾಯಣನು, ಕುಲಶೇಖರನ ಮನಸ್ಸನ್ನು ತನ್ನೆಡೆಗೆ ತಿರುಗಿಸಲು, ತಿರುಪತಿ ವೆಂಕಟೇಶ್ವರನ ರೂಪದಲ್ಲಿ ಕಾಣಿಸಿಕೊಂಡು ಆಶೀರ್ವದಿಸುತ್ತಾನೆ. ಹೀಗೆ ಭಗವಂತನ ಕೃಪೆಗೆ ಪಾತ್ರನಾದ ರಾಜಾ ಕುಲಶೇಖರನ ಮನಸ್ಸು ಶ್ರೀಮನ್ನಾರಾಯಣನ ಕಡೆ ತುಡಿಯ ತೊಡಗಿತು. ಅವನು ಪದ್ಮಪತ್ರದ ಮೇಲಿನ ನೀರಿನಂತಾದನು. ಯಾವುದೇ ಫಲಾಪೇಕ್ಷೆಯಿಲ್ಲದೆ, ಕೇವಲ ಕರ್ತವ್ಯಾನುಷ್ಠಾನಕ್ಕೋಸ್ಕರ, ರಾಜ್ಯವಾಳತೊಡಗಿದ. ಆದರೆ, ಮನಸ್ಸು ಮಾತ್ರ ದೇವರಿಗರ್ಪಿತವಾಯಿತು. ನಿತ್ಯವೂ ಹೆಚ್ಚು ಸಮಯವನ್ನು ಭಗವದಾರಾಧನಾ ಕಾರ್ಯಗಳಲ್ಲಿ, ಭಜನೆಗಳಲ್ಲಿ, ರಾಮ,ಕೃಷ್ಣರ ಕಥೆಗಳನ್ನು ಕೇಳುವುದರಲ್ಲಿ ಕಳೆಯತೊಡಗಿದ. ಯುದ್ಧ ನಡೆದರೆ ಉಂಟಾಗುವ ಅಪಾರ ಸಾವು ನೋವುಗಳಿಗೆ ಮಿಡಿಯತೊಡಗಿ ಕೊನೆಗೆ ಯುದ್ಧವೆಂದರೆ ಅಸಹ್ಯಿಸಿಕೊಳ್ಳತೊಡಗಿದ. ಬರೀ ಧಾರ್ಮಿಕ ವಿಷಯಗಳೆಡೆಗೆ ಚಿಂತಿಸುತ್ತಿದ್ದು ತಮಿಳು ಹಾಗೂ ಸಂಸ್ಕೃತಗಳಲ್ಲಿ ಭಗವಂತನ ಕುರಿತು ಹಾಡುಗಳನ್ನು ರಚಿಸಿ ಹಾಡತೊಡಗಿದ.

ಒಂದು ದಿನ ರಾಮಾಯಣ ಉಪನ್ಯಾಸ ನಡೆಯುತ್ತಿದ್ದಾಗ, ಸೀತೆಯನ್ನು ಅಪಹರಿಸಿದ್ದ ರಾವಣನೊಂದಿಗೆ ಶ್ರೀರಾಮ ಯುದ್ಧ ನಡೆ ಸುತ್ತಿರುವ ಪ್ರಸಂಗ. ಶ್ರೀರಾಮನಿಗೆ ಸರಿಸಮನಾಗಿ ರಾವಣ ಯುದ್ಧ ಮಾಡುತ್ತಿರುವುದಾಗಿಯೂ, ಶ್ರೀರಾಮನಿಗೆ ಗೆಲುವು ಇನ್ನೂದಕ್ಕಿಲ್ಲವೆಂದು ಉಪನ್ಯಾಸಕರು ಹೇಳುತ್ತಿದ್ದರೆ, ಬಹಳ ತಲ್ಲೀನನಾಗಿ ಕೇಳುತಿದ್ದ ರಾಜಾ ಕುಲಶೇಖರ ತಕ್ಷಣವೇ ಸೇನಾಧಿಪತಿಗೆ ಯುದ್ಧಕ್ಕೆ ಸೈನ್ಯವನ್ನು ಸಜ್ಜುಗೊಳಿಸುವಂತೆ ಹೇಳಿ, ತಾನು ಯುದ್ಧಕ್ಕೆ ತಯಾರಾಗಲು ಹೊರಟೇಬಿಟ್ಟನು. ಅಲ್ಲಿದ್ದವರೆಲ್ಲ ದಿಗ್ಭ್ರಾಂತರಾಗಿ ನೋಡುತ್ತಿರಲು, ಉಪನ್ಯಾಸಕರು ಸಮಯ ಸ್ಫೂರ್ತಿಯಿಂದ, "ಓ ರಾಜಾ, ಶಾಂತನಾಗು, ಯುದ್ಧದಲ್ಲಿ ಶ್ರೀರಾಮನಿಗೆ ಸಮರುಂಟೇ! ಶ್ರೀರಾಮ ಯುದ್ಧ ಜಯಿಸಿ ಸೀತಾಮಾತೆಯನ್ನು ಈಗ ಕರೆತರುತ್ತಿದ್ದಾನೆ" ಎಂದು ಹೇಳಲು, ರಾಜಾಕುಲಶೇಖರನು ಸಮಾಧಾನಗೊಂಡನು. ಹಾಗಿತ್ತು-ಅವನ ಶ್ರೀರಾಮ ಭಕ್ತಿ. ಆ ರಾತ್ರಿ ಕನಸಿನಲ್ಲಿ ಶ್ರೀರಾಮ ಕಾಣಿಸಿಕೊಂಡು "ಕುಲಶೇಖರ, ನನಗೆ ಸಹಾಯ ಮಾಡಲು ನೀನು ಯುದ್ಧಕ್ಕೆ ಸಿದ್ಧನಾಗಿದ್ದನ್ನು ಕಂಡು ತುಂಬಾ ಸಂತೋಷವಾಗಿದೆ. ನೀನು ನನ್ನಲ್ಲಿಟ್ಟಿರುವ ಅತಿ ಪ್ರೀತಿ ಮತ್ತು ಭಕ್ತಿ ನನಗೆ ಮೆಚ್ಚುಗೆಯಾಗಿದೆ. ಅಸುರರನ್ನು ನಾನು ಯಾವುದೇ ಕಷ್ಟವಿಲ್ಲದೆ ಸಂಹರಿಸುತ್ತೇನೆ. ನನ್ನನ್ನು ತುಂಬಾ ಹಚ್ಚಿಕೊಂಡಿರುವ ಲಕ್ಷ್ಮಣನಂತೆಯೇ ನಿನ್ನ ವರ್ತನೆಯೂ ಇದೆ. ಇಂದಿನಿಂದ ನಿನ್ನನ್ನು ಎಲ್ಲರೂ ಕುಲಶೇಖರ ಪೆರುಮಾಳ್ ಎಂದೇ ಗೌರವಿಸುತ್ತಾರೆ.'' ಎಂದು ಹೇಳಿದನು.

ಇದಾದ ನಂತರ ಕುಲಶೇಖರರು ಇನ್ನೂ ಹೆಚ್ಚಾಗಿ ಭಗವಂತನ ಸ್ಮರಣೆ, ಭಾಗವತರ ಸಹವಾಸ ಇವುಗಳಲ್ಲಿ ತೊಡಗಿಕೊಂಡರು. ಮಂತ್ರಿಗಳು ಇವರನ್ನು ಮತ್ತೆ ಹೇಗೆ ರಾಜ್ಯಪಾಲನೆಯತ್ತ ಹೊರಳಿಸುವುದೆಂದು ತಿಳಿಯದೆ ತೊಳಲಾಡುತ್ತಿದ್ದರು. ಕುಲಶೇಖರರು ಅರಮನೆಯಲ್ಲಿ ಶ್ರೀರಾಮನ ಚಿನ್ನದ ವಿಗ್ರಹವೊಂದನ್ನು ಮಾಡಿಸಿ, ಅದರ ಪೂಜೆ, ಕೈಂಕರ್ಯಗಳ ಜೊತೆಗೆ, ಆ ಸ್ಥಳದಲ್ಲಿಯೆ ಭಾಗವತರನ್ನು ಕರೆಸಿ ಅವರಿಂದ ಪ್ರವಚನಗಳನ್ನು ಏರ್ಪಡಿಸುತ್ತಿದ್ದರು. ಒಮ್ಮೆ ಶ್ರೀರಾಮನವಮಿಯಂದು, ಶ್ರೀರಾಮನಿಗೆ ಹಾಕಿದ್ದ ನವರತ್ನಮಾಲೆ ಕಾಣೆಯಾಗಿರುವುದು ಕಂಡು ಕುಲಶೇಖರರು ದಿಗ್ಭ್ರಾಂತರಾದರು. ಇಷ್ಟು ಮಂದಿ ಭಟರು ಕಾವಲಿದ್ದೂ ಸಹ ಅರಮನೆಯೊಳಗೆ ಬಂದು ಹೀಗೆ ದೇವರ ಮೇಲಿದ್ದ ಹಾರವನ್ನು ಕದ್ದವರಾದರೂ ಯಾರು ಎಂಬ ಚಿಂತೆ ಶುರುವಾಯಿತು. ಮಂತ್ರಿಗಳನ್ನು ಕೇಳಲು, ಮಹಾಮಂತ್ರಿಯು "ಮಹಾರಾಜಾ, ಬಹುಶಃ ಉಪನ್ಯಾಸಕ್ಕಾಗಿ ಬಂದಿದ್ದ ಭಾಗವತರಲ್ಲೊಬ್ಬರ್ಯಾರಾದರೂ'' ಎಂದು ಹೇಳುವಷ್ಟರಲ್ಲಿ, ಕುಲಶೇಖರರು ಮುಂದಿನದನ್ನು ಕೇಳಲಾರೆ ಎಂಬಂತೆ ಕಿವಿ ಮುಚ್ಚಿ ಕೊಂಡರು. ಅತೀ ಕೋಪದಿಂದ ಅವರ ದೇಹ ನಡುಗುತ್ತಿತ್ತು.

ಭಾಗವತರ ಮೇಲೆ ಈ ರೀತಿ ಆಪಾದನೆ ಮಾಡಲು ತನ್ನ ಮಂತ್ರಿಗಳಿಗೆ ಆಲೋಚನೆಯಾದರೂ ಹೇಗೆ ಬಂತೆಂದು ದುಃಖಿಸುತ್ತಾ "ಶ್ರೀಮನ್ನಾರಾಯಣನ ಸೇವೆಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟವರ ಮೇಲೆ ಹೀಗೆ ಆಪಾದಿಸುತ್ತಿದ್ದೀರಿ. ನಿಮಗೆ ಪ್ರಜ್ಞೆ ಇದೆಯೇ? ಚಿನ್ನವನ್ನೂ, ಮಣ್ಣನ್ನೂ ಸಮಾನ ದೃಷ್ಟಿಯಿಂದ ಕಾಣುವ ಭಾಗವತರ ಮೇಲೆ ಆಪಾದನೆ ಮಾಡಲು ಧೈರ್ಯವಾದರೂ ಹೇಗೆ ಬಂತು ನಿಮಗೆ?'' ಎಂದು ಹೇಳಿ, ಅಷ್ಟಕ್ಕೆ ನಿಲ್ಲದೆ, ಒಂದು ಮಡಕೆಯೊಳಗೆ ಘೋರವಿಷವಿರುವ ಹಾವನ್ನು ಹಾಕಿ ತರಲು ಸೇವಕರಿಗೆ ಹೇಳುತ್ತಾರೆ. ವಿಷಯುಕ್ತ ಹಾವಿದ್ದ ಮಡಕೆ ಬಂದ ತಕ್ಷಣ ಕುಲಶೇಖರರು ಶ್ರೀರಾಮನನ್ನು ಧ್ಯಾನಿಸಿ "ಭಾಗವತರಲ್ಲಿ ಯಾರಾದರೂ ಮಾಲೆಯನ್ನು ಕದ್ದಿದ್ದಲ್ಲಿ, ಹಾವು ನನ್ನನ್ನು ಕಚ್ಚಲಿ. ಇಲ್ಲದಿದ್ದರೆ ಹಾವು ನನ್ನನ್ನೇನೂ ಮಾಡದಿರಲಿ'' ಎಂದು ಪ್ರಾರ್ಥಿಸುತ್ತಾ ಮಡಕೆಯಲ್ಲಿ ಕೈ ಬಿಡಲು ಹಾವು ಅವರನ್ನು ಮುಟ್ಟಲೂ ಇಲ್ಲ. ಆಗ ಮಹಾಮಂತ್ರಿಯು "ಮಹಾರಾಜಾ, ಆ ಮಾಲೆಯನ್ನು ತೆಗೆದದ್ದು ನಾವೇ. ಈ ನಡುವೆ ತಮ್ಮ ಗಮನ ರಾಜ್ಯಪಾಲನೆಗಿಂತ ಧಾರ್ಮಿಕ ವಿಷಯಗಳೆಡೆಗೇ ಹೆಚ್ಚಾಗುತ್ತಿದೆ. ಹಾಗಾಗಿ, ರಾಜ್ಯ ಅನಾಥವಾಗಬಾರದು. ಮಾಲೆ ಕದ್ದ ಆರೋಪವನ್ನು ತಾವು ಅತ್ಯಂತ ಗೌರವದಿಂದ ಕಾಣುವ ಭಾಗವತರ ಮೇಲೆ ಹೊರಿಸಿದರೆ, ತಮಗೆ ಅವರ ಬಗ್ಗೆ ಗೌರವ ಕಡಿಮೆಯಾಗಿ, ತಾವು ರಾಜ್ಯಪಾಲನೆಯೆಡೆಗೆ ಗಮನ ಹರಿಸಬಹುದೆಂಬ ಯೋಚನೆಯಿಂದ ಹೀಗೆ ಮಾಡಿದೆವು. ದಯವಿಟ್ಟು ನಮ್ಮನ್ನು ಕ್ಷಮಿಸಿ'' ಎಂದು ವಿನಂತಿಸಿಕೊಂಡನು. ಆಗ ಕುಲಶೇಖರರನು ರಾಜ್ಯ ಮತ್ತು ಪ್ರಜೆಗಳ ಬಗ್ಗೆ ಮಂತ್ರಿಗಳಿಗಿರುವ ಕಾಳಜಿಯನ್ನು ಅರ್ಥೈಸಿಕೊಂಡು, ತಕ್ಷಣವೇ ತಮ್ಮ ಮಗನನ್ನು ಉತ್ತರಾಧಿಕಾರಿಯಾಗಿ ಘೋಷಿಸಿ, ಅವನಿಗೆ ರಾಜ್ಯಪರಿಪಾಲನಾ ಪಾಠಗಳನ್ನು ಹೇಳಿಕೊಡುವ ವ್ಯವಸ್ಥೆ ಮಾಡುತ್ತಾರೆ. ನಂತರ ಕುಲಶೇಖರಾಳ್ವಾರರು ಭಗವಂತನ ಲೀಲೆಗಳನ್ನು ವರ್ಣಿಸುವ ಹಾಡುಗಳನ್ನು ಹಾಡುತ್ತಾ ಭಾರತದೆಲ್ಲೆಡೆ ಪ್ರವಾಸ ಮಾಡುತ್ತಾರೆ.


Edited and Published on behalf of T.T.Devasthanams by Dr. K. Radha Ramana, M.A., M.Phil., Phd., Chief Editor, T.T.D. and Printed at T.T.D. Press by Sri R.V. Vijaya Kumar, B.A., B.Ed., Dy. E.O. (Publications & Press), T.T.D. Press, Tirupati - 517 507.

## ತಿರುಮಲೆ ತಿರುಪತಿ ದೇವಸ್ಥಾನಗಳು

## ಒಂಟಿಮಿಟ್ಟ

## ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 02-04-2020 ರಿಂದ 10-04-2020 ರ ವರೆಗೆ





**02-04-2020 ಗುರುವಾರ**
ಹಗಲು : ಧ್ವಜಾರೋಹಣ
ರಾತ್ರಿ : ಶೇಷವಾಹನ

**03-04-2020 ಶುಕ್ರವಾರ**
ಹಗಲು : ವೇಣುಗಾನಾಲಂಕಾರ
ರಾತ್ರಿ : ಹಂಸವಾಹನ

**04-04-2020 ಶನಿವಾರ**
ಹಗಲು : ವಟಪತ್ರಶಾಯಿ ಅಲಂಕಾರ
ರಾತ್ರಿ :ಸಿಂಹವಾಹನ

**05-04-2020 ಭಾನುವಾರ**
ಹಗಲು : ನವನೀತಕೃಷ್ಣಾಲಂಕಾರ
ರಾತ್ರಿ :ಹನುಮತ್ಸೇವೆ

**06-04-2020 ಸೋಮವಾರ**
ಹಗಲು : ಮೋಹಿನಿಸೇವೆ
ರಾತ್ರಿ : ಗರುಡಸೇವೆ

**07-04-2020 ಮಂಗಳವಾರ**
ಹಗಲು : ಶಿವಧನುರ್ಬಾಣಾಲಂಕಾರ
ರಾತ್ರಿ : ಎದುರ್ಕೋಲು, ಕಲ್ಯಾಣೋತ್ಸವ, ಗಜವಾಹನ

**08-04-2020 ಬುಧವಾರ**
ಹಗಲು : ರಥೋತ್ಸವ

**09-04-2020 ಗುರುವಾರ**
ಹಗಲು : ಕಾಳೀಯಮರ್ಧನಾಲಂಕಾರ
ರಾತ್ರಿ : ಅಶ್ವವಾಹನ

**10-04-2020 ಶುಕ್ರವಾರ**
ಹಗಲು : ಚಕ್ರತೀರ್ಥ
ರಾತ್ರಿ : ಧ್ವಜಾವರೋಹಣ

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-02-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

